# ಅಧ್ಯಾಯ 4

# ಅಬ್ರಹಾಮನ ಉದಾಹರಣೆ, ನಂಬಿಕೆಯ ಮನುಷ್ಯನು

ರೋಮಾ 4ನೇ ಅಧ್ಯಾಯವು ನಂಬಿಕೆಯಿಂದ ನೀತಿವಂತರೆಂಬ ನಿರ್ಣಯದ ಕುರಿತ ಪೌಲನ ಚರ್ಚೆಯ ತಿರುಳನ್ನು ಹೊಂದಿರುತ್ತದೆ, ಅದು 3ನೇ ಅಧ್ಯಾಯದ ಮುಕ್ತಾಯದಲ್ಲಿ ಪರಿಚಯಿಸಲ್ಪಟ್ಟಿತ್ತು. ಅಪೊಸ್ತಲನು ನಂಬಿಕೆಯ ಮಹಾ ವ್ಯಕ್ತಿಯಾದ ಅಬ್ರಹಾಮನ ಉದಾಹರಣೆಯನ್ನು ಉಪಯೋಗಿಸಿ ತನ್ನ ಸಂದೇಶವನ್ನು ದೃಷ್ಟಾತಪಡಿಸುತ್ತಾನೆ.

## ಅಬ್ರಹಾಮನ ನಂಬಿಕೆಯು ನೀತಿಯೆಂದು ಎಣಿಸಲ್ಪಟ್ಟಿತು (4:1-8)

**[1]ಹಾಗಾದರೆ ವಂಶಾನುಕ್ರಮವಾಗಿ ನಮಗೆ ಮೂಲಪಿತೃವಾಗಿರುವ ಅಬ್ರಹಾಮನು
ಏನು ಪಡಕೊಂಡನೆಂದು ಹೇಳಬೇಕು? [2]ಅಬ್ರಹಾಮನು ಪುಣ್ಯಕ್ರಿಯೆಗಳಿಂದಲೇ
ನೀತಿವಂತನಾದ ಪಕ್ಷದಲ್ಲಿ ಹೊಗಳಿಕೊಳ್ಳುವದಕ್ಕೆ ಅವನಿಗೆ ಆಸ್ಪದವಿರುವದು; ಆದರೆ
ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿರುವದಿಲ್ಲ. [3]ಇದರ ವಿಷಯದಲ್ಲಿ ಶಾಸ್ತ್ರವು
ಹೇಳುವದನ್ನು ಆಲೋಚಿಸಿರಿ. ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ
ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು ಎಂದು ಹೇಳುತ್ತದೆ. [4]ಕೆಲಸ ಮಾಡಿದವನಿಗೆ ಬರುವ
ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ; ಅದು ಸಲ್ಲತಕ್ಕದ್ದೇ
ಎಂದು ಎಣಿಕೆಯಾಗುವದು. [5]ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ
ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡು ತ್ತಾನೋ ಅವನ
ನಂಬಿಕೆಯೇ ನೀತಿಯೆಂದು ಎಣಿಸಲ್ಪಡುವದು. [6]ದೇವರು ಯಾವನನ್ನು ಪುಣ್ಯಕ್ರಿಯೆಗಳಿಲ್ಲದೆ
ನೀತಿವಂತನೆಂದು ಎಣಿಸುತ್ತಾನೋ ಅವನು ಧನ್ಯನೆಂದು ದಾವೀದನು ಸಹ ಹೇಳುತ್ತಾನೆ.
ಹೇಗೆಂದರೆ-**

> **[7]ಯಾರ ಅಪರಾಧಗಳು ಪರಿಹಾರವಾಗಿವೆಯೋ,**
> **ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು.**
> **[8]ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು.**

**ವಚನ 1.** ಅಧ್ಯಾಯವು ಪ್ರಶ್ನೆಯೊಂದಿಗೆ ಆರಂಭಗೊಳ್ಳುತ್ತದೆ, **ಹಾಗಾದರೆ**

**ವಂಶಾನುಕ್ರಮವಾಗಿ ನಮಗೆ ಮೂಲಪಿತೃವಾ ಗಿರುವ ಅಬ್ರಹಾಮನು ಏನು ಪಡಕೊಂಡನೆಂದು ಹೇಳಬೇಕು?** "ಹಾಗಾದರೆ ಏನು" ಎಂಬುದು ಪೌಲನು 3:21-26ರಲ್ಲಿನ ತನ್ನ ನಂಬಿಕೆಯಿಂದ ನೀತಿವಂತರೆಂಬ ನಿರ್ಣಯದ ಕುರಿತಾದ ಪಿಠೀಕೆಯ ಮೇಲೆ ಹಂದರ ಹಾಕುತ್ತಿದ್ದಾನೆಂಬದನ್ನು ಸೂಚಿಸುತ್ತದೆ.

4ನೇ ಅಧ್ಯಾಯದಲ್ಲಿ ಪೌಲನ ಹೇಳಿಕೆಗಳು ಪ್ರಾಥಮಿಕವಾಗಿ ಯೆಹೂದ್ಯ ವಾಚಕರನ್ನುದ್ದೇಶಿಸಿ ಇರುತ್ತವೆ. ಯೆಹೂದ್ಯರು ಹೆಮ್ಮೆಯಿಂದ ಅಬ್ರಹಾಮನನ್ನು ತಮ್ಮ ಶರೀರ ಸಂಬಂಧದ "ಮೂಲಪಿತೃ" ಎಂದು ಒಪ್ಪಿಕೊಳ್ಳುತ್ತಿದ್ದರು (ನೋಡಿರಿ ಲೂಕ 3:8; 16:24, 30; ಯೋಹಾನ 8:39, 53, 56; ಅಪೊಸ್ತಲರ ಕೃತ್ಯಗಳು 7:2). "ಮೂಲಪಿತೃ" ಎಂಬುದು προπάτωρ (*propatōr*)ಎಂಬ ಸಂಯುಕ್ತ ಪದದಿಂದ ಅನುವಾದಿಸಲ್ಪಟ್ಟಿದೆ, ಅದು πρό, (*pro,* "ಮುಂಚೆ") ಮತ್ತು πατήρ (*patēr,* "ತಂದೆ") ಎಂಬ ಪದಗಳನ್ನೊಳಗೊಂಡಿ ರುತ್ತದೆ. ಈ ಅಧ್ಯಾಯದಲ್ಲಿ ಅನಂತರ, ಪೌಲನು ಅಬ್ರಹಾಮನನ್ನು "*ನಂಬುವವರೆಲ್ಲರಿಗೆ* ತಂದೆ [*patēr*]"—ಯೆಹೂದ್ಯರಾಗಿರಲಿ, ಅನ್ಯಜನರಾಗಿರಲಿ-ಎಂದು ಕರೆಯುತ್ತಾನೆ (4:11; ಒತ್ತಿ ಹೇಳಿದ್ದು ನನ್ನದು), ಆದರೆ ಅಧ್ಯಾಯದ ಆರಂಭದಲ್ಲಿ, ಪೌಲನು ಶಾರೀರಿಕ ಯೆಹೂದ್ಯರೊಂದಿಗೆ ಅಬ್ರಹಾಮನ ಸಂಬಂಧದ ಬಗ್ಗೆ ಒತ್ತಿ ಹೇಳುತ್ತಿದ್ದಾನೆ.

ಗ್ರೀಕ್ ಪ್ರತಿಯಲ್ಲಿ, "ವಂಶಾನುಕ್ರಮವಾಗಿ" ಎಂಬದರ ತಕ್ಷಣವೇ "ನಮ್ಮ ಮೂಲಪಿತೃ" ಎಂದು ಇರುತ್ತದೆ ಮತ್ತು NASB ಹಾಗೂ ಬಹಳಷ್ಟು ತರ್ಜುಮೆಗಳು ಅದೇ ರೀತಿ ಬರೆದಿರುತ್ತವೆ. ಈ ಸ್ಥಾನದಲ್ಲಿ ನೋಡುವದಾದರೆ, ಅಬ್ರಹಾಮನು ಯೆಹೂದ್ಯ ಜನಾಂಗದ ಶಾರಿರೀಕ ಮೂಲಪಿತೃವಾಗಿದ್ದಾನೆಂಬದನ್ನು ಸೂಚಿಸುತ್ತದೆ. ಹೇಗೂ, ಕೆಲವರು ನಂಬುವದೇನೆಂದರೆ "ವಂಶಾನುಕ್ರಮವಾಗಿ" ಎಂಬದನ್ನು "ಕಂಡುಕೊಂಡನು" ಎಂದು ಮಾರ್ಪಡಿಸಬೇಕು (ನೋಡಿರಿ ASV), ಅದು ಸ್ವಲ್ಪ ಅಸಂಭವ ಆದರೆ ಅಸಾಧ್ಯವಲ್ಲ. ಇದು ಪೌಲನನ್ನು ಹೀಗೆ ಕೇಳುವಂತೆ ಮಾಡುತ್ತದೆ, "ಶರೀರಸಂಬಂಧವಾದ ಕ್ರಿಯೆಗಳಿಂದ [ಅಂದರೆ, ಅರ್ಹತೆಯ ಕ್ರಿಯೆಗಳು] ನೀತಿವಂತನೆಂದು ನಿರ್ಣಯಿಸಲ್ಪಡುವ ಬಗ್ಗೆ ಅಬ್ರಹಾಮನು ಏನು ಕಂಡುಕೊಂಡನು?"

ಪೌಲನು ನಂಬಿಕೆಯಿಂದ ನೀತಿನಿರ್ಣಯ ಕುರಿತ ಚರ್ಚೆಯಲ್ಲಿ ಅಬ್ರಹಾಮನನ್ನು ಪರಿಚಯಿಸುವದಕ್ಕೆ ಬಹುಶಃ ಅನೇಕ ಕಾರಣಗಳನ್ನು ಹೊಂದಿದ್ದನು. ಮೊದಲನೆಯದಾಗಿ, ಒಬ್ಬ ಉಪದೇಶಕನು ಒಂದು ತತ್ವದ ಬಗ್ಗೆ ಕಲಿಸಿಕೊಟ್ಟ ಬಳಿಕ, ಆ ತತ್ವದ ಕುರಿತು ಒಂದು ಬಲವಾದ ದೃಷ್ಟಾಂತವನ್ನು ನೀಡುವದು ಆತನಿಗೆ ಉತ್ತಮ ಉಪಾಯವಾಗಿರುತ್ತದೆ.

ಉದಾಹರಣೆಗಾಗಿ ಅಬ್ರಹಾಮನನ್ನು ಏಕೆ ಉಪಯೋಗಿಸಬೇಕು? ಪೌಲನು ಹಳೇ ಒಡಂಬಡಿಕೆಯಲ್ಲಿನ ಅನೇಕ ಮಹಾ ವ್ಯಕ್ತಿಗಳ ಉದಾಹರಣೆಗಳನ್ನು ಉಪಯೋಗಿಸಿರ ಬಹುದಿತ್ತು (ನೋಡಿರಿ ಇಬ್ರಿಯ 11). ಏಕೆ ಅಬ್ರಹಾಮನು? ಯೆಹೂದ್ಯರು "ಪಿತೃವಾದ ಅಬ್ರಹಾಮನ" ಬಗ್ಗೆ ವಿಶೇಷ ಮಮತೆ ಹೊಂದಿದ್ದರು. ಬೇರೆ ಯಾರೂ ಅವರಿಂದ ಅಷ್ಟೊಂದು ಗೌರವಕ್ಕೆ ಪಾತ್ರರಾಗಿರಲಿಲ್ಲ. ಪೌಲನು ಈ ಪೂಜ್ಯಭಾವ ಹೊಂದಿದ ಮೂಲಪಿತೃವು ನಂಬಿಕೆಯ ಆಧಾರದಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಟ್ಟ ಎಂಬದಾಗಿ ಸಾಭಿತುಗೊಳಿಸಿದರೆ, ಯೆಹೂದ್ಯರಿಗೆ ತನ್ನ ವಾದವನ್ನು ಮನದಟ್ಟು ಮಾಡಿಕೊಡುವದಕ್ಕೆ

ಆತನಿಗೆ ಒಂದು ದೀರ್ಘ ಅವಕಾಶ ಸಿಕ್ಕಬಹುದಾಗಿತ್ತು.

ಅಲ್ಲದೆ ಪೌಲನು ಇನ್ನೊಂದು ಕಾರಣಕ್ಕಾಗಿ ಸಹ ಅಬ್ರಹಾಮನನ್ನು ಆರಿಸಿಕೊಂಡಿರಬಹುದು. ಒಂದು ವೇಳೆ ಯೆಹೂದ್ಯರಿಗೆ ಯಾವನಾದರೂ ತನ್ನ ಕ್ರಿಯೆಗಳಿಂದ ರಕ್ಷಿಸಲ್ಪಡುವಷ್ಟು *ಒಳ್ಳೆಯವನಿದ್ದರೆ ಆತನ* ಉದಾಹರಣೆ ಕೊಡಿರಿ ಎಂದು ಕೇಳಿದ್ದರೆ ಬಹುಶಃ ಅಬ್ರಹಾಮನು ಅವರ ಮೊದಲ ಆಯ್ಕೆಯಾಗಿರುತ್ತಿದ್ದನು. James R. Edwards ಹೇಳಿದ್ದೇನೆಂದರೆ ಯೆಹೂದ್ಯ ಮತದಲ್ಲಿ ಅಬ್ರಹಾಮನಿಗಿರುವ ಪ್ರಾಮುಖ್ಯತೆಯನ್ನು ಅತಿಯಾಗಿ ಭಾವಿಸಿಕೊಳ್ಳುವದು ಕಠಿಣವಾದದ್ದು. ಈ ಬೈಬಲ್ ವೀರನು ವಿಗ್ರಹಾರಾಧಕರ ಮಧ್ಯದಲ್ಲಿ ಜೀವಿಸುತ್ತಿದ್ದಾಗ್ಯೂ ಏಕ ಸತ್ಯ ದೇವರನ್ನು ಆರಾಧಿಸಿದನು. ದೇವರ ಆಜ್ಞೆಗಳು ವಾಸ್ತವದಲ್ಲಿ ಕೊಡಲ್ಪಡುವದಕ್ಕೆ ಮುಂಚೆಯೇ ಅಬ್ರಹಾಮನು ಅವುಗಳಿಗೆ ವಿಧೇಯನಾಗಿದ್ದನೆಂದು ಕೆಲವು ಯೆಹೂದ್ಯರು ನಂಬಿದ್ದರು. ಇಸಾಕ ಮತ್ತು ಯಾಕೋಬರ ಜೊತೆಯಲ್ಲಿ, ಈತನು ಸಹ ದೇವರ ವಿರುದ್ಧ ಪಾಪ ಮಾಡಿರದವನಾಗಿದ್ದನೆಂದು ಪರಿಗಣಿಸಲ್ಪಟ್ಟಿದ್ದಾನೆ.[1]

ಆದುದರಿಂದ, ಪೌಲನು ಯೆಹೂದ್ಯರಿಗೆ ಅಬ್ರಹಾಮನು ತನ್ನ *ಕ್ರಿಯೆಗಳಿಂದಲ್ಲ* ಆದರೆ *ನಂಬಿಕೆಯಿಂದ* ನೀತಿವಂತನೆಂದು ನಿರ್ಣಯಿಸಲ್ಪಟ್ಟ ಎಂಬದಾಗಿ ಮನವೊಲಿಸುವದಕ್ಕೆ ಶಕ್ತನಾದರೆ, "ಕ್ರಿಯೆಗಳಿಂದ ನೀತಿವಂತರೆಂಬ ನಿರ್ಣಯ" ಎಂಬ ಅವರ ಬಲವಾದ ಪ್ರತಿಪಾದನೆಯನ್ನು ತಟಸ್ಥಗೊಳಿಸಿರುತ್ತಿದ್ದನು!

**ವಚನ 2.** ಪೌಲನು ಅಬ್ರಹಾಮನ ಜೀವಿತವನ್ನು ಪರೀಕ್ಷಿಸುವದಕ್ಕೆ ಸಿದ್ಧನಿದ್ದನು: **ಅಬ್ರಹಾಮನು ಪುಣ್ಯಕ್ರಿಯೆಗಳಿಂದಲೇ ನೀತಿವಂತನಾದ ಪಕ್ಷದಲ್ಲಿ ಹೊಗಳಿಕೊಳ್ಳುವದಕ್ಕೆ ಅವನಿಗೆ ಆಸ್ಪದವಿರುವಿರುವದು.** ನಂಬಿಕೆಯಿಂದ ನೀತಿವಂತರೆಂಬ ನಿರ್ಣಯದ ಸಿದ್ಧಾಂತದ ವಿಷಯದಲ್ಲಿ, ಪೌಲನು ಈಗಷ್ಟೇ "ಹೊಗಳಿಕೊಳ್ಳುವಿಕೆ ಇಲ್ಲದೆಹೋಯಿತು" ಎಂದು ಹೇಳಿದ್ದನು (3:27). ಯಾವನಿಗಾದರೂ ತನ್ನ ಪುಣ್ಯಕ್ರಿಯೆಗಳ ವಿಷಯದಲ್ಲಿ ಹೊಗಳಿಕೊಳ್ಳಲು ಹಕ್ಕು ಇರುವದಾದರೆ ಅದು ಅಬ್ರಹಾಮನೇ ಎಂಬದಾಗಿ ತನ್ನ ಜೊತೆ ಯೆಹೂದ್ಯರ ಸಂಗಡ ಒಪ್ಪಿಕೊಂಡಿರುತ್ತಿದ್ದನು. ಅಬ್ರಹಾಮನು ಗಮನಾರ್ಹವಾದ ವ್ಯಕ್ತಿಯಾಗಿದ್ದನು. ಇತನೊಬ್ಬನೇ ದೇವರಿಂದ "ನನ್ನ ಸ್ನೇಹಿತನು" ಎಂದು ಕರೆಯಿಸಿ ಕೊಂಡಿದ್ದಾನೆ (ಯೆಶಾಯ 41:8; ನೋಡಿರಿ 2 ಪೂರ್ವಕಾಲ ವೃತ್ತಾಂತ 20:7; ಯಾಕೋಬ 2:23). ಅಬ್ರಹಾಮನು ಆತನ ಕ್ರಿಯೆಗಳ ಆಧಾರದಲ್ಲಿ ನೀತಿವಂತನಾಗಿದ್ದರೆ, ಆತನಿಗೆ ಖಂಡಿತವಾಗಿಯೂ ಹೊಗಳಿಕೊಳ್ಳಲು ಆಸ್ಪದವಿರುತ್ತಿತ್ತು.

ಅದನ್ನು ಹೇಳಿದ ಬಳಿಕ, ಪೌಲನು ತಕ್ಷಣವೇ **ಆದರೆ ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿರುವದಿಲ್ಲ** ಎಂದು ಸೇರಿಸುತ್ತಾನೆ. ಈ ಮಾತುಗಳ ಅರ್ಥವೇನೆಂಬ ಬಗ್ಗೆ ಲೇಖಕರಿಗೆ ಗೊಂದಲವಿರುತ್ತದೆ. ಮೂಲಪ್ರತಿಯಲ್ಲಿ "ಆದರೆ ದೇವರೊಂದಿಗೆ (πρός, *pros*) ಅಲ್ಲ" ಎಂದಿರುತ್ತದೆ. ಬಹುಶಃ ಇಲ್ಲಿ ವ್ಯತ್ಯಾಸವನ್ನು ತೋರಿಸುವ ಉದ್ದೇಶವಿರಬಹುದು: *ಜನರ* ವಿಷಯದಲ್ಲಾದರೆ, ಅಬ್ರಹಾಮನಿಗೆ ಹೊಗಳಿಕೊಳ್ಳಲು ಆಸ್ಪದವಿತ್ತು; ಆದರೆ ದೇವರ ವಿಷಯದಲ್ಲಾದರೋ ಆತನಿಗೆ ಹೊಗಳಿಕೊಳ್ಳಲು ಏನು ಇರಲಿಲ್ಲ. NLT ಹೇಳುವದೇನೆಂದರೆ "ದೇವರ ದೃಷ್ಟಿಕೋನದಲ್ಲಿ

ಅಬ್ರಹಾಮನಿಗೆ ಗರ್ವಪಟ್ಟುಕೊಳ್ಳಲು ಯಾವ ಆಧಾರವೇ ಇರಲಿಲ್ಲ." ಈ ವಾಕ್ಯದ ಇನ್ನೊಂದು ಸಂಭಾವ್ಯ ಅರ್ಥವೇನಾಗಿರಬಹುದೆಂದರೆ, ಅಬ್ರಹಾಮನು ಹೊಗಳಿಕೊಂಡಿದ್ದರೆ ಆತನು ತನ್ನನ್ನು ಮಹಿಮೆ ಪಡಿಸಿಕೊಳ್ಳುವವನಾಗಿದ್ದನೇ ಹೊರತು ದೇವರನ್ನಲ್ಲ.

ನಾವೆಲ್ಲರೂ ಅರ್ಥಮಾಡಿಕೊಳ್ಳುವ ಅಗತ್ಯವಿರುತ್ತದೇನೆಂದರೆ, ನಾವು ಎಷ್ಟೇ ಒಳ್ಳೇವರಾಗಿದ್ದರೂ, ನಾವು ಎಷ್ಟೇ ಒಳ್ಳೆ ಕ್ರಿಯೆಗಳನ್ನು ಮಾಡುವವರಾಗಿದ್ದಾಗ್ಯೂ, ನಾವು ಎಂದಿಗೂ ದೇವರನ್ನು ನಮ್ಮ ಋಣಸ್ಥನನ್ನಾಗಿ ಮಾಡಲು ಸಾಧ್ಯವಿಲ್ಲ. ಅಬ್ರಹಾಮನು ಪರಿಪೂರ್ಣನಾಗಿ ಇದ್ದಿದ್ದರೂ (ಆತನು ಪರಿಪೂರ್ಣನಾಗಿರಲಿಲ್ಲವಷ್ಟೆ), ಆತನಿಗೆ "ದೇವರ ದೃಷ್ಟಿಕೋನದಲ್ಲಿ" ಹೊಗಳಿಕೊಳ್ಳಲು ಆತನಲ್ಲಿ ಏನೂ ಇರಲಿಲ್ಲ. ಯೇಸು ತನ್ನ ಶಿಷ್ಯರಿಗೆ ಉಪದೇಶಿಸಿದ್ದೇನೆಂದರೆ, "ನೀವು ನಿಮಗೆ ಅಪ್ಪಣೆಯಾಗಿರುವದನ್ನೆಲ್ಲಾ ಮಾಡಿದ ಮೇಲೆ, ನಾವು ಆಳುಗಳು, ಪ್ರಯೋಜನವಿಲ್ಲದವರು, ಮಾಡಬೇಕಾದದ್ದನ್ನೇ ಮಾಡಿದ್ದೇವೆ ಅನ್ನಿರಿ" (ಲೂಕ 17:10).

**ವಚನ 3.** ಪೌಲನು ತನ್ನ ಅಂಶವನ್ನು ಸಾಭಿತುಗೊಳಿಸಲು ಹಳೇ ಒಡಂಬಡಿಕೆಗೆ ತಿರುಗಿಕೊಳ್ಳುತ್ತಾನೆ. ಆತನು ಹೇಳುತ್ತಾನೆ, **ಇದರ ವಿಷಯದಲ್ಲಿ ಶಾಸ್ತ್ರವು ಹೇಳುವದನ್ನು ಆಲೋಚಿಸಿರಿ.** "ಹೇಳುವದನ್ನು . . ." ಎಂಬುದು ವರ್ತಮಾನಕಾಲ ಕ್ರಿಯಾಪದದ (λέγει, *legei*) ಅನುವಾದವಾಗಿದೆ. ಆದಿಕಾಂಡ ಪುಸ್ತಕವು ಮೋಶೆಯಿಂದ 1,500 ವರ್ಷಗಳಷ್ಟು ಮುಂಚೆ ಬರೆಯಲ್ಪಟ್ಟಿತ್ತು, ಆದರೆ ಪೌಲನು ಅದನ್ನು ಸಜೀವವಾದ ಪುಸ್ತಕವೆಂದು ಪರಿಗಣಿಸಿದನು (ನೋಡಿರಿ ಇಬ್ರಿಯ 4:12), ಅದು ಆಗಲೂ ಆತನ ಕಾಲದ ಜನರೊಂದಿಗೆ ಮಾತಾಡುತ್ತಿದೆಯೆಂದು ಪರಿಗಣಿಸಿದನು.

ಪೌಲನು ಒಂದು ಬಹಳ ಪರಿಚಿತವಿದ್ದ ವಾಕ್ಯಭಾಗವನ್ನು ಉಲ್ಲೇಖಿಸುತ್ತಾನೆ: **"ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು."** ಈ ಉಲ್ಲೇಖವು ಆದಿಕಾಂಡ 15:6 ರಿಂದ ತೆಗೆದುಕೊಳ್ಳಲ್ಪಟ್ಟಿದೆ. ಈ ಅಧ್ಯಾಯದಲ್ಲಿ ಪೌಲನು ಈ ವಚನವನ್ನು ಹಲವಾರು ಸಾರಿ ಉಲ್ಲೇಖಿಸಿದನು (4:3, 9, 22, 23). ಈ ಅಧ್ಯಾಯವು ಆದಿಕಾಂಡ 15:6 ಒಂದು ವ್ಯಾಖ್ಯಾನ ಎಂದು ಭಾವಿಸಬಹುದು.

ಆದಿಕಾಂಡ 15ರ ಹಿನ್ನಲೆಯು ಪೌಲನ ವಾಚಕರಿಗೆ ಪರಿಚಿತವಾಗಿತ್ತು. ಹಾರಾನಿನಲ್ಲಿ, ಅಬ್ರಹಾಮನು ಎಪ್ಪತ್ತೈದು ವರ್ಷದವನಾಗಿದ್ದಾಗ (ಆದಿಕಾಂಡ 12:4), ದೇವರು ಆತನಿಗೆ, "ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡುತ್ತೇನೆ" ಎಂದು ಹೇಳಿದನು (ಆದಿಕಾಂಡ 12:2). ಆತನು ಕಾನಾನ್ ದೇಶವನ್ನು ತಲುಪಿದಾಗ, ಕರ್ತನು ಆತನಿಗೆ, "ನಾನು ಈ ದೇಶವನ್ನು ನಿನ್ನ ಸಂತಾನಕ್ಕೆ ಕೊಡುವೆನು" ಎಂದು ಹೇಳಿದನು (ಆದಿಕಾಂಡ 12:7). ಈ ವಾಗ್ದಾನಗಳು ಅಬ್ರಹಾಮ ಮತ್ತು ಸಾರಳ ಕನಿಷ್ಠ ಒಂದು ಮಗನನ್ನಾದರೂ ಪಡೆಯುವರೆಂಬ ಕಲ್ಪನೆಯನ್ನು ಉಂಟುಮಾಡಿತ್ತು. ಹೇಗೂ, ವರ್ಷಗಳು ಗತಿಸಿದವು, ಮತ್ತು ಅಬ್ರಹಾಮ ಹಾಗೂ ಸಾರಳು ಮಕ್ಕಳಿಲ್ಲದೆ ಉಳಿದರು. ಒಂದು ವಾಡಿಕೆಯ ಮಾತಿರುವ ಪ್ರಕಾರ, "ಅವರೇನು ದಿನದಿಂದ ದಿನಕ್ಕೆ ಯೌವನಸ್ಥರಾಗುತ್ತಿದ್ದಿಲ್ಲ." ದೇವರ ವಾಗ್ದಾನವು ಹೇಗೆ ಕಾರ್ಯರೂಪಕ್ಕೆ ಬರುವದೆಂದು ಅಬ್ರಹಾಮನು ಚಿಂತಿಸುವದಕ್ಕೆ

ಆರಂಭಿಸಿದನು (ನೋಡಿರಿ ಆದಿಕಾಂಡ 15:2, 3).

ಅಬ್ರಹಾಮನು ಸುಮಾರು ಎಂಬತ್ತಾರು ವರ್ಷದವನಾಗಿದ್ದಾಗ (ನೋಡಿರಿ ಆದಿಕಾಂಡ 16:16), ದೇವರು ಅವನಿಗೆ ಇನ್ನೊಂದು ಹೆಚ್ಚುವರಿ ಭರವಸೆಯನ್ನು ಕೊಟ್ಟನು. ಒಂದು ರಾತ್ರಿ, ಆತನು ಅಬ್ರಹಾಮನನ್ನು ಆಕಾಶದ ಕೆಳಗೆ ಸಂಚರಿಸಲು ಕರೆದೊಯ್ದನು. ಆತನು ಅವನಿಗೆ, "ಆಕಾಶದ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವದು ನಿನ್ನಿಂದಾದರೆ ಲೆಕ್ಕಿಸು; ನಿನ್ನ ಸಂತಾನವು ಅಷ್ಟಾಗುವದು" (ಆದಿಕಾಂಡ 15:5) ಎಂಬ ನಿಶ್ಚಯತೆಯನ್ನು ಕೊಟ್ಟನು. ಮಾನವ ದೃಷ್ಟಿಕೋನದಿಂದ, ನೋಡುವುದಾದರೆ ಅದು ನೆರವೇರುವದಕ್ಕೆ ಸಾಧ್ಯವೇ ಇಲ್ಲದ ವಾಗ್ದಾನವಾಗಿತ್ತು. ಆ ಮಹತ್ವದ ಗಳಿಗೆಯಲ್ಲಿ, "ಅಬ್ರಹಾಮನು ಯೆಹೋವನನ್ನು ನಂಬಿದನು; ಮತ್ತು ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (ಆದಿಕಾಂಡ 15:6).

ಆದಿಕಾಂಡ 15:6 ರ ವಿಷಯದಲ್ಲಿ ಎರಡು ಅಂಶಗಳನ್ನು ಅರ್ಥಮಾಡಿಕೊಳ್ಳತಕ್ಕದ್ದು. ಮೊದಲನೆಯದಾಗಿ, ಅಬ್ರಹಾಮನು ಕರ್ತನನ್ನು ನಂಬಿದ್ದು ಇದೇ ಮೊದಲ ಸಾರಿಯಾಗಿರಲಿಲ್ಲ. ಅನೇಕ ವರ್ಷಗಳ ಹಿಂದೆ, ದೇವರು ಅಬ್ರಹಾಮನಿಗೆ ಕಲ್ದಿಯರ ಊರ್ ನಲ್ಲಿ ಕಾಣಿಸಿಕೊಂಡು (ಅಪೊಸ್ತಲರ ಕೃತ್ಯಗಳು 7:2; ನೋಡಿರಿ ಆದಿಕಾಂಡ 15:7; ನೆಹೆಮೀಯ 9:7) ಹೇಳಿದ್ದೇನೆಂದರೆ, "ನಿನ್ನ ಸ್ವದೇಶವನ್ನೂ ನಿನ್ನ ಬಂಧುಬಳಗವನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು" (ಅಪೊಸ್ತಲರ ಕೃತ್ಯಗಳು 7:3). ಹಾರಾನಿನಲ್ಲಿ, ದೇವರು ಪುನಃ ಆತನಿಗೆ ಕಾಣಿಸಿಕೊಂಡು ಅದೇ ಸಲಹೆಗಳನ್ನು ಕೊಡುತ್ತಾನೆ (ಆದಿಕಾಂಡ 12:1, 4). ಇಬ್ರಿಯ ಪುಸ್ತಕದ ಲೇಖಕನು ಹೇಳುವ ದೇನೆಂದರೆ, "ನಂಬಿಕೆಯಿಂದಲೇ ಅಬ್ರಹಾಮನು ಕರೆಯಲ್ಪಟ್ಟ ಕೂಡಲೆ ಕರೆದಾತನ ಮಾತನ್ನು ಕೇಳಿ ತಾನು ಬಾಧ್ಯವಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು; ತಾನು ಹೋಗಬೇಕಾದ ಸ್ಥಳವು ಯಾವದೆಂದು ತಿಳಿಯದೆ ಹೊರಟನು" (ಇಬ್ರಿಯ 11:8; ಒತ್ತಿ ಹೇಳಿದ್ದು ನನ್ನದು). ಅದೇ ಲೇಖಕನು ಇನ್ನೂ ಹೇಳಿದ್ದೇನೆಂದರೆ, "ನಂಬಿಕೆಯಿಂದಲೇ ಅವನು [ಅಬ್ರಹಾಮನು] ವಾಗ್ದಾತ್ತದೇಶಕ್ಕೆ [ಕಾನಾನ್[ ಬಂದಾಗ ಅಲ್ಲಿ ಅನ್ಯದೇಶದಲ್ಲಿ ಇದ್ದವನಂತೆ . . . ಪ್ರವಾಸಿಯಾಗಿ ಬದುಕಿದನು" (ಇಬ್ರಿಯ 11:9; ಒತ್ತಿ ಹೇಳಿದ್ದು ನನ್ನದು). ಅಬ್ರಹಾಮನ ಇಡೀ ಜೀವಿತವು ದೇವರ ಮೇಲಿನ ನಂಬಿಕೆಯ ಮೇಲೆ ಆಧಾರವಾಗಿತ್ತು. ರೋಮಾ1 ನೇ ಅಧ್ಯಾಯದಲ್ಲಿನ ಪೌಲನ ಮಾತುಗಳಲ್ಲೇ ಹೇಳುವದಾದರೆ, ಮೂಲಪಿತೃವಿನ ಜೀವಿತವು "ಮೊದಲಿನಿಂದ ಕಡೇ ತನಕ" ನಂಬಿಕೆಯಿಂದಲೇ ಆಗಿತ್ತು (1:17; NIV). ಹೀಗೆ ಆದಿಕಾಂಡ 15:6 ಅಬ್ರಹಾಮನ ನಂಬಿಕೆಯ ಜೀವಿತದ ಆರಂಭಕ್ಕೆ ಸೂಚನೆಯಾಗಿರುವದಿಲ್ಲ.

ಎರಡನೆಯದಾಗಿ, ಆದಿಕಾಂಡ 15:6ನೇ ವಚನವು ಅಬ್ರಹಾಮನ *ಆರಂಭಿಕ ನೀತಿವಂತನೆಂಬ ನಿರ್ಣಯದ* ಕುರಿತು-ಅಂದರೆ ಆತನು (ಕೆಲವರು ಹೇಳುವ ಪ್ರಕಾರ) "ರಕ್ಷಣೆ" ಹೊಂದಿದ ಆ ಕ್ಷಣದ ಕುರಿತು- ಮಾತಾಡುತ್ತಿಲ್ಲ. ದೇವರು ಅಬ್ರಹಾಮನನ್ನು ತನ್ನ ಮಗನೆಂದು ಪರಿಗಣಿಸಿರಲಿಲ್ಲವಾದರೆ ಅದಕ್ಕೆ ಮುಂಚೆ ಅಷ್ಟೊಂದು ಅದ್ಭುತವಾದ ವಾಗ್ದಾನಗಳನ್ನೆಲ್ಲಾ ಖಂಡಿತವಾಗಿಯೂ ಕೊಡುತ್ತಿರಲಿಲ್ಲ. ಅಬ್ರಹಾಮನು

ಮೇಲ್ಕಿಚೆದೆಕನನ್ನು ಭೇಟಿಯಾದಾಗ, ಆ ಅರಸನು ಹೇಳಿದನು, "ಭೂಮ್ಯಾಕಾಶಗಳನ್ನು ನಿರ್ಮಾಣ ಮಾಡಿದ ಪರಾತ್ಪರನಾದ ದೇವರ ಆಶೀರ್ವಾದವು ಅಬ್ರಹಾಮನಿಗೆ ಆಗಲಿ" (ಆದಿಕಾಂಡ 14:19; NIV). ಇದಾದ ಕೂಡಲೇ, ದೇವರು ಸ್ವತಃ ಅಬ್ರಹಾಮನಿಗೇ ಹೇಳಿದ್ದೇನೆಂದರೆ, "ಅಬ್ರಹಾಮನೇ, ಭಯಪಡಬೇಡ, ನಾನು ನಿನಗೆ ಗುರಾಣಿಯಾಗಿ ದ್ದೇನೆ; ನಿನಗೋಸ್ಕರ ಅತ್ಯಧಿಕ ಬಹುಮಾನವು ಇಟ್ಟಿದೆ" (ಆದಿಕಾಂಡ 15:1). ಅಬ್ರಹಾಮನು ಆದಿಕಾಂಡ 15:6ಕ್ಕೆ ಮುಂಚೆ ನೀತಿವಂತನೆಂದು ಎಣಿಸಲ್ಪಟ್ಟದ್ದನೆಂಬ ದರಲ್ಲಿ ಯಾವದೇ ಸಂಶಯವಿಲ್ಲ.

ಈ ಸಂಗತಿಗಳು ಸತ್ಯವಾಗಿರುವಾಗ, ಅಬ್ರಹಾಮನು ನಂಬಿಕೆಯಿಂದ ನೀತಿವಂತನಾದನೆಂಬದನ್ನು ಸಾಭಿತುಗೊಳಿಸಲು ಪೌಲನು ಏಕೆ ಆದಿಕಾಂಡ 15:6ನ್ನು ಉಪಯೋಗಿಸಿದನು? ನಾಲ್ಕು ಕಾರಣಗಳು ಇಲ್ಲಿವೆ:

1. ಪ್ರೇರಿತ ಲೇಖಕರು ಅನಂತರದಲ್ಲಿ ಆದಿಕಾಂಡ 15:6ರ ಮುಂಚಿನ ಅಬ್ರಹಾಮನ ನಂಬಿಕೆಯ ಬಗ್ಗೆ ಮಾತಾಡಿದರಾದರೂ, ಅಬ್ರಹಾಮನು ನಂಬಿದನು ಎಂಬದಾಗಿ ಬೈಬಲಿನಲ್ಲಿ ಇದೇ ಮೊದಲ ಬಾರಿಗೆ ಉಲ್ಲೇಖಿಸಲ್ಪಟ್ಟಿದೆ. ವಾಸ್ತವದಲ್ಲಿ, ಬೈಬಲ್ "ನಂಬಿಕೆ," "ನಂಬಿದನು," ಅಥವಾ "ವಿಶ್ವಾಸ" ಎಂಬ ಪದಗಳನ್ನು ಯಾರದೇ ವಿಷಯವಾಗಿ ಇದೇ ಮೊದಲ ಸಾರಿ ಉಪಯೋಗಿಸಿರುತ್ತದೆ. ಆದಿಕಾಂಡ 15:6ರ ಮುಂಚೆ ಇತರರು ಸಹ ನಂಬಿಕೆಯನ್ನು ಹೊಂದಿದ್ದರು (ಇಬ್ರಿಯ 11:4, 5, 7), ಆದರೆ ಇದೇ ಪ್ರಥಮ ಬಾರಿಗೆ ಆದಿಕಾಂಡದಲ್ಲಿ ಈ ಪದವು ಕಂಡುಬರುತ್ತದೆ.

2. ಈ ಸಂದರ್ಭಕ್ಕೆ ಮುಂಚೆಯೇ ಅಬ್ರಹಾಮನು ನೀತಿವಂತನಾಗಿದ್ದನೆಂದು ಸ್ಪಷ್ಟವಾಗುತ್ತಾದರೂ, ಆದಿಕಾಂಡವು ಆತನನ್ನು ಸೂಚಿಸುವದಕ್ಕೆ "ನೀತಿವಂತನು" ಎಂಬ ಪದವನ್ನು ಇದೇ ಮೊದಲ ಸಾರಿ ಉಪಯೋಗಿಸುತ್ತದೆ.

3. ಅಬ್ರಹಾಮನು *ನಂಬಿಕೆಯಿಂದ* ನೀತಿವಂತನಾದನೆಂದು ಈ ವಚನವು ನಿರ್ದಿಷ್ಟವಾಗಿ ತಿಳಿಸುತ್ತದೆ.

4. ಕಾಲಕ್ರಮಾನುಸಾರದಲ್ಲಿ, ಅಬ್ರಹಾಮನು ಸುನ್ನತಿ ಮಾಡಿಸಿಕೊಳ್ಳುವ ಹದಿನಾಲ್ಕು ವರ್ಷಗಳ ಮುಂಚೆ ಈ ಹೇಳಿಕೆಯು ಕೊಡಲ್ಪಟ್ಟಿತು (ನೋಡಿರಿ ಆದಿಕಾಂಡ 16:1, 16; 17:1, 9, 24) ಮತ್ತು ಮೋಶೆಯು ಧರ್ಮಶಾಸ್ತ್ರವನ್ನು ಕೊಡುವದಕ್ಕಿಂತ ನೂರಾರು ವರ್ಷಗಳಿಗೆ ಮುಂಚೆ ಹೇಳಲ್ಪಟ್ಟಿತು (ನೋಡಿರಿ ಗಲಾತ್ಯ 3:16, 17). ಈ ಕಾರಣದ ಪ್ರಾಮುಖ್ಯತೆಯು ಅನಂತರ ನಮ್ಮ ಚರ್ಚೆಯಲ್ಲಿ ಸ್ಪಷ್ಟಪಡಿಸಲ್ಪಡುವದು.

ಆದಿಕಾಂಡ 15:6 ಒಂದು ನಿರ್ದಿಷ್ಟವಾದ ಸಂದರ್ಭದ ಬಗ್ಗೆ ಬರೆಯಲ್ಪಟ್ಟಿದೆಯಾದರೂ, ಇದು ಅಬ್ರಹಾಮನ ಜೀವಿತಕ್ಕೆ ತಕ್ಕದಾದ ಸಾರಾಂಶವಾಗಿದೆ ಎಂದು ಪ್ರೇರಿತ ಲೇಖಕರು ಕಂಡರು. ಗಲಾತ್ಯ 3:6-9 ರಲ್ಲಿ, ಪೌಲನು ವಚನವನ್ನು ಅಬ್ರಹಾಮನಿಗೆ ಆದಿಕಾಂಡ 12ರಲ್ಲಿ ಕೊಡಲ್ಪಟ್ಟ ವಾಗ್ದಾನದೊಂದಿಗೆ ಜೋಡಿಸುತ್ತಾನೆ. ರೋಮಾ 4ರ ನಂತರದ ಭಾಗದಲ್ಲಿ, ಪೌಲನು ಅಂದು ನಕ್ಷತ್ರಗಳ ರಾತ್ರಿಯಲ್ಲಿ ಅಬ್ರಹಾಮನು ದೇವರ ಸಂಗಡ ಸಂಚರಿಸಿದ ಸುಮಾರು ಹದಿನಾಲ್ಕು ವರ್ಷಗಳ ನಂತರದಲ್ಲಿ ಅಬ್ರಹಾಮನಿಗೆ ಕೊಡಲ್ಪಟ್ಟ ಒಬ್ಬ ಮಗನ ವಾಗ್ದಾನದ ಸಂಬಂಧದಲ್ಲಿ ಆದಿಕಾಂಡ 15:6ನ್ನು ಉಲ್ಲೇಖಿಸುತ್ತಾನೆ (ರೋಮಾ 4:18-22).

ಯಾಕೋಬ 2:21-24 ರಲ್ಲಿ, ಯಾಕೋಬನು ಆದಿಕಾಂಡ 15:6ನ್ನು ಅಬ್ರಹಾಮನು ಯಜ್ಞವೇದಿಯ ಮೇಲೆ ತನ್ನ ಮಗನನ್ನು ಅರ್ಪಿಸುವ ಘಟನೆಯೊಂದಿಗೆ ಜೋಡಿಸುತ್ತಾನೆ.

ಪೌಲನು ರೋಮಾ 4ರಲ್ಲಿ ಆದಿಕಾಂಡ 15:6ನ್ನು ಉಪಯೋಗಿಸುವದಕ್ಕೆ ಮುಖ್ಯ ಕಾರಣವು ನಮ್ಮ ಪಟ್ಟಿಯಲ್ಲಿ ಮೂರನೆಯದಾಗಿರುತ್ತದೆ: ಅಬ್ರಹಾಮನು *ನಂಬಿಕೆಯಿಂದ* ನೀತಿವಂತನಾದನೆಂದು ಈ ವಚನವು ನಿರ್ದಿಷ್ಟವಾಗಿ ತಿಳಿಸುತ್ತದೆ ಮತ್ತು ಕ್ರಿಯೆಗಳ ಬಗ್ಗೆ ಏನನ್ನೂ ತಿಳಿಸುವದಿಲ್ಲ. ಕೆಲವು ಯೆಹೂದ್ಯ ಉಪದೇಶಕರು ಅಬ್ರಹಾಮನು ತನ್ನ ಕ್ರಿಯೆಗಳ ಆಧಾರದಲ್ಲಿ ನೀತಿವಂತನಾದನೆಂಬ ಅವರ ಉಪದೇಶಕ್ಕೆ ಸರಿ ಹೊಂದುವಂತೆ ಆದಿಕಾಂಡ 15:6 ನ್ನು ಉಪಯೋಗಿಸುವದಕ್ಕೆ ಪ್ರಯತ್ನಿಸಿದ್ದರು. ಅವರು ವಚನವನ್ನು ಬದಲಾಯಿಸಿ, ಈ ರೀತಿಯಲ್ಲಿ ಹೇಳುವಂತೆ ಬದಲಿಸಿದರು, "ಅಬ್ರಹಾಮನು *ದೇವರಿಗೆ ನಂಬಿಗಸ್ತನಾಗಿದ್ದನು*, ಮತ್ತು ಅದು ಆತನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು" ಆದರೆ ವಚನವು ಆ ರೀತಿಯಲ್ಲಿ ಹೇಳುವದಿಲ್ಲ. ಅದು ಹೇಳುವದೇನೆಂದರೆ, "ಅಬ್ರಹಾಮನು ದೇವರನ್ನು ನಂಬಿದನು, ಮತ್ತು ಅದು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು."

ಅಬ್ರಹಾಮನು ಆ ಕಾಲದಲ್ಲಿ ಬದುಕಿದ್ದವರಲ್ಲಿಯೇ ಅತ್ಯಂಥ ಉತ್ತಮ ಮನುಷ್ಯನಾಗಿದ್ದರಿಂದ ದೇವರು ಆತನನ್ನು ಆರಿಸಿಕೊಂಡನೆಂದು ಯೆಹೂದ್ಯರು ಪ್ರತಿಪಾದಿಸುತ್ತಿದ್ದರು-ಮತ್ತು ಬಹುಶಃ ಅವರು ಸರಿಯಾಗಿಯೇ ಹೇಳಿರಬಹುದು. ಅವರು ಗಮನಿಸಿದ್ದೇನೆಂದರೆ ಅಬ್ರಹಾಮನು ಸತ್ಯ ದೇವರ ಬೆಳಕಿನಲ್ಲಿ ನಡೆದರೆ, ಉಳಿದವರೆಲ್ಲರೂ ವಿಗ್ರಹಾರಾಧನೆಯ ಕಾರ್ಗತ್ತಲಲ್ಲಿ ತಡಕಾಡುತ್ತಿದ್ದರು-ಮತ್ತು ಅದು ಸತ್ಯವೇ. ಇವರು ಆತನನ್ನು ದೇವರಿಗೆ ವಿಧೇಯರಾಗುವದಕ್ಕೆ ಒಂದು ಮಾದರಿಯಾಗಿ ಇಟ್ಟುಕೊಂಡಿದ್ದರು, ಮಾನವ ತರ್ಕಕ್ಕೆ ವಿರುದ್ಧವಾಗಿ ಕಂಡರೂ ದೇವರಿಗೆ ವಿಧೇಯವಾಗುವದಕ್ಕೆ ಅಬ್ರಹಾಮನು ಮಾದರಿ ಅಂದುಕೊಂಡಿದ್ದರು-ಮತ್ತು ಇದೆಲ್ಲದರಲ್ಲಿಯೂ ಆವರು ಸರಿಯೇ ಆಗಿದ್ದರು. ಯಾವಾಗ ಅವರು ಅಬ್ರಹಾಮನನ್ನು ದೇವರು ಆತನ ಮಾನವ ಉತ್ತಮತೆಯ ಮೇಲೆ *ನೀತಿವಂತನೆಂದು ನಿರ್ಣಯಿಸಿದನು* ಎಂದು ಹೇಳಿದರೋ ಆಗ ತಪ್ಪು ಮಾಡಿದ್ದರು. ವಿಷಯ ಹಾಗಿರಲಿಲ್ಲವೆಂದು ಪೌಲನು ಘೋಷಿಸಿದನು. ಬದಲಾಗಿ, "ಅಬ್ರಹಾಮನು ದೇವರನ್ನು *ನಂಬಿದನು* ಮತ್ತು ಅದು ಆತನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು" (ಒತ್ತಿ ಹೇಳಿದ್ದು ನನ್ನದು).

ಈ ಉಲ್ಲೇಖದಲ್ಲಿ "ಅದು ಆತನ ಲೆಕ್ಕಕ್ಕೆ ಎಣಿಸಲ್ಪಟ್ಟಿತು" ಎಂಬುದು λογίζομαι (*logizomai*)[2] ಎಂಬದರಿಂದ ತೆಗೆದುಕೊಳ್ಳಲ್ಪಟ್ಟದ್ದಾಗಿದೆ. ಪೌಲನು ಅಧ್ಯಾಯ 4ರಲ್ಲಿ ಈ ಗ್ರೀಕ್ ಕ್ರಿಯಾಪದದ ವಿವಿಧ ಬಗೆಗಳನ್ನು ಹನ್ನೊಂದು ಸಾರಿ ಉಪಯೋಗಿಸಿದನು. ಈ ಅಧ್ಯಾಯದಲ್ಲಿ, NASB ಯು ಯಾವಾಗಲೂ "ಎಣಿಸಲ್ಪಟ್ಟಿತು" ಎಂದೇ ಉಪಯೋಗಿಸುತ್ತದೆ, 8ನೇ ವಚನದಲ್ಲಿ ಮಾತ್ರ ಅದು "ಗಣನೆಗೆ ತೆಗೆದುಕೋ" ಎಂದು ತರ್ಜುಮೆಗೊಳಿಸಿರುತ್ತದೆ. KJVಯು ಅಂಥ ಪದಗಳನ್ನು "ಎಣಿಸಲ್ಪಟ್ಟಿತು," "ಪರಿಗಣಿಸು" ಮತ್ತು "ಆಪಾದಿಸು" ಎಂದು ಅನುವಾದಿಸಿರುತ್ತದೆ. *Logizomai* ಎಂಬ ಪದಕ್ಕೆ ಪೌಲನ ದಿನಗಳಲ್ಲಿ ಬಹಳಷ್ಟು ಅಧಿಕಾರ್ಥಗಳು ಇದ್ದವು,[3] ಆದರೆ ಅದರ ಮೂಲಭೂತ ಅರ್ಥವು "ಎಣಿಸು," "ಪರಿಗಣಿಸು" ಅಥವಾ "ಲೆಕ್ಕಿಸು" ಎಂದಾಗಿತ್ತು.[4]

*Logizomai* ಒಂದು ಲೆಕ್ಕಿಗನ ಪದವಾಗಿತ್ತು. ಪೌಲನು ರೋಮಾ 4ರಲ್ಲಿ ಆ ಪದವನ್ನು ಅದೇ ಅರ್ಥದಲ್ಲಿಯೇ ಉಪಯೋಗಿಸಿದನೆಂದು ಬಹುಪಾಲು ಲೇಕಕರು ಒಪ್ಪಿಕೊಳ್ಳುತ್ತಾರೆ. John R. W. Stott ಹೀಗೆ ಬರೆದನು, "ಅದರ ಅರ್ಥವು 'ಲೆಕ್ಕಕ್ಕೆ ಸೇರಿಸು' ಅಥವಾ 'ಎಣಿಸಲ್ಪಡು' ಎಂದಾಗಿರುತ್ತದೆ, ಮತ್ತು ಆರ್ಥಿಕ ಅಥವಾ ವ್ಯಾಪಾರದ ಸನ್ನಿವೇಶದಲ್ಲಿ ಉಪಯೋಗಿಸಲ್ಪಡುವದಾದರೆ ಒಬ್ಬನ ಖಾತೆಗೆ ಒಂದನ್ನು ಸೇರ್ಪಡೆಗೊಳಿಸು ಎಂಬ ಅರ್ಥವನ್ನು ಕೊಡುತ್ತದೆ."[5] ಈ ಕಾರಣದಿಂದ CJB ತರ್ಜುಮೆಯು 3ನೇ ವಚನವನ್ನು ಹೀಗೆ ಅನುವಾದಿಸುತ್ತದೆ: "ಅಬ್ರಹಾಮನು ತನ್ನ ವಿಶ್ವಾಸವನ್ನು ದೇವರಲ್ಲಿಟ್ಟನು, ಮತ್ತು ಅದು ಆತನ *ಲೆಕ್ಕಕ್ಕೆ ನೀತಿಯೆಂದು ಸೇರಿಸಲ್ಪಟ್ಟಿತು*" (ಒತ್ತಿ ಹೇಳಿದ್ದು ನನ್ನದು). E. D. Burton ಹೇಳಿದ್ದೇನೆಂದರೆ ರೋಮಾ 4ರಲ್ಲಿ ನಾವು "ಮಹಾ ಲೆಕ್ಕಿಗನ ಎಣಿಕೆಯ ಕೋಣೆಯಲ್ಲಿರುತ್ತೇವೆ.[6]

**ವಚನ 4.** ಈ ವಚನದಲ್ಲಿ, ಪೌಲನು ನೀತಿನಿರ್ಣಯದ ಎರಡು ವ್ಯವಸ್ಥೆಗಳ ನಡುವಿನ ವ್ಯತ್ಯಾಸಗಳನ್ನು ತೋರಿಸಲು ಆರಂಭಿಸುತ್ತಾನೆ: ಒಂದು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆ ಮತ್ತು ಕೃಪೆ/ನಂಬಿಕೆಯ ವ್ಯವಸ್ಥೆ. ಆತನು ಮೊದಲ ವ್ಯವಸ್ಥೆಯನ್ನು ಹೀಗೆ ಸಾರಾಂಶಗೊಳಿಸಿದನು: **ಕೆಲಸ ಮಾಡಿದವನಿಗೆ ಬರುವ ಕೂಲಿಯು ದಯದಿಂದ ದೊರಕುವಂಥದೆಂದು ಎಣಿಕೆಯಾಗುವದಿಲ್ಲ** (*logizomai*)**; ಅದು ಸಲ್ಲತಕ್ಕದ್ದೇ ಎಂದು ಎಣಿಕೆಯಾಗುವದು.** ಇಲ್ಲಿ ಹೇಳಲಾಗಿರುವ ನಿಯಮವು ಬಹಳ ಸರಳವಾಗಿದ್ದು ಅದಕ್ಕೆ ಸ್ವಲ್ಪ ವಿವರಣೆ ಅಗತ್ಯ ಅಥವಾ ಯಾವದೇ ವಿವರಣೆಯ ಅಗತ್ಯವೇ ಇಲ್ಲ. ನೀವು ಒಬ್ಬರಿಗೋಸ್ಕರ ಕೆಲಸ ಮಾಡಿದರೆ, ನಿಮಗೆ ಬರುವ ಸಂಬಳವನ್ನು ನೀವು ಉಡುಗೊರೆಯಾಗಿ ಪರಿಗಣಿಸುವದಿಲ್ಲ. ನಿಮ್ಮ ಮಾಲೀಕನು ನಿಮಗೆ "ಒಂದು ಉಪಕಾರ" ಮಾಡುತ್ತಿದ್ದಾನೆಂದು ನೀವು ಭಾವಿಸುವದಿಲ್ಲ. ನೀವು ಸೌಜನ್ಯಕ್ಕೊಂದು "ಧನ್ಯವಾದಗಳು" ಹೇಳಬಹುದು, ಆದರೆ ವಾಸ್ತವದಲ್ಲಿ, ನಿಮಗೆ ಆತನು ಹಣ ಕೊಡುವದಕ್ಕೆ ಋಣಸ್ಥನಾಗಿದ್ದಾನೆಂದು ಬಲ್ಲವರಾಗಿರುತ್ತೀರಿ.

"ದಯೆ" ಎಂದು ಅನುವಾದಿಸಲ್ಪಟ್ಟಿರುವ χάρις (*charis*)ಎಂಬುದು "ಕೃಪೆ" ಎಂಬದಕ್ಕೆ ಉಪಯೋಗಿಸುವ ಪದವಾಗಿದೆ (ನೋಡಿರಿ KJV). "ಸಲ್ಲತಕ್ಕದ್ದೇ" ಎಂಬ ಅನುವಾದಿಸಲ್ಪಟ್ಟ ὀφείλημα (*opheilēma*)ಎಂಬುದು "ಒಂದು ಹಣಕಾಸಿನ ಅರ್ಥದ ಸಾಲದಲ್ಲಿರುವದು" ಅಥವಾ "ನೈತಿಕ ಅರ್ಥದಲ್ಲಿ ಒಂದು ಕರ್ತವ್ಯ," ಒಂದು "ಸಾಲ"[7] ಎಂದರ್ಥವಾಗಿದೆ (ನೋಡಿರಿ KJV). ಒಂದು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯು ಘೋಷಿಸುವದೇನೆಂದರೆ, ನಾವು *ಕೃಪೆಯಿಂದ* ರಕ್ಷಿಸಲ್ಪಟ್ಟಿಲ್ಲ, ಆದರೆ ನಮ್ಮ ಪುಣ್ಯಕ್ರಿಯೆಗಳು ದೇವರನ್ನು ನಮಗೆ *ಸಾಲಗಾರನನ್ನಾಗಿ* ಮಾಡಿತು ಎಂಬದಾಗಿ.

**ವಚನ 5**. ಪೌಲನು ಮುಂದೆ ಆ ವ್ಯವಸ್ಥೆಯನ್ನು ಕೃಪೆ/ನಂಬಿಕೆಯ ವ್ಯವಸ್ಥೆಯೊಂದಿಗೆ ಹೋಲಿಸಿ ವ್ಯತ್ಯಾಸವನ್ನು ತೋರಿಸುತ್ತಾನೆ: ಆದರೆ ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿಯೆಂದು ಎಣಿಸಲ್ಪಡುವದು. "ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ" ಎಂಬದು ಕೆಲವು ಅರ್ಹತೆಗಳ

ಅಗತ್ಯವಿರುತ್ತದೆಂದು ಸೂಚಿಸುತ್ತದೆ. ಸನ್ನಿವೇಶದಿಂದ ಹೊರಗೆ ತೆಗೆದುಕೊಂಡು ನೋಡುವದಾದರೆ, ಅದು ಕರ್ತನಿಗಾಗಿ ಕೆಲಸಮಾಡುವದು ಅನಾವಶ್ಯಕವೆಂದು ಅರ್ಥಕೊಡುವಂತೆ ತೋರುತ್ತದೆ-ಅದು ಬಹುಪಾಲು ಧಾರ್ಮಿಕ ಬರಹಗಾರರಿಗೆ ಭಯಂಕರ ಆಘಾತ ಕೊಡುವ ವಿಚಾರ ಆಗಿರುತ್ತದೆ, ಮತ್ತು ಖಂಡಿತವಾಗಿಯೂ ಪೌಲನಿಗೆ ಆಘಾತ ಉಂಟು ಮಾಡಿರುತ್ತಿತ್ತು. ಕರ್ತನಿಗೆ ಕೆಲಸ ಮಾಡುವದು ಪ್ರಾಮುಖ್ಯವೆಂದು ಪೌಲನು ಯೋಚಿಸಿದನೋ? ಅದರಲ್ಲಿ ಸಂಶಯವೇ ಇಲ್ಲ. ರೋಮಾ 16:12ರಲ್ಲಿ, "ಕರ್ತನ ಸೇವೆಯಲ್ಲಿ ಬಹಳವಾಗಿ ಪ್ರಯಾಸ ಪಟ್ಟಿರುವ" ಪೆರ್ಸೀಸಳಿಗೆ ಪ್ರಶಂಸೆಯನ್ನು ಮಾಡುತ್ತಾನೆ. ಪೌಲನು ಅನೇಕ ವೇಳೆ ತನ್ನ ವಾಚಕರನ್ನು "ಕರ್ತನ ಸೇವೆಯಲ್ಲಿ" ಅವರ ಎಲ್ಲಾ ಪ್ರಯಾಸವನ್ನು ಪಡಬೇಕೆಂದು ಪ್ರೋತ್ಸಾಹಿಸಿದನು (1 ಕೊರಿಂಥ 15:58; ನೋಡಿರಿ ಗಲಾತ್ಯ 5:6; ಎಫೆಸ 2:10; ಕೊಲೊಸ್ಸೆ 1:10; 1 ತಿಮೊಥೆ 5:17; 6:18). ಪೌಲನಗಿಂತಲೂ ಹೆಚ್ಚು ಕಠಿಣವಾಗಿ ಕರ್ತನಿಗಾಗಿ ಬೇರೆ ಯಾರಾದರೂ ಶ್ರಮಿಸಿರುತ್ತಾರೋ ಎಂಬದು ಅನುಮಾನ (ನೋಡಿರಿ 1 ಕೊರಿಂಥ 15:10; 2 ಕೊರಿಂಥ 11:23, 27).

ಆದ್ದರಿಂದ, ಇದು ಸ್ಪಷ್ಟವಾಗುತ್ತದೆ, ಏನೆಂದರೆ "ಕ್ರಿಯೆಗಳನ್ನು ಮಾಡಿದವನಾಗಿರದೆ" ಎಂಬದಕ್ಕೆ ಸ್ವಲ್ಪ ವಿವರಣೆಯ ಅಗತ್ಯವಿರುತ್ತದೆ. ಅದನ್ನು ಸರಳವಾಗಿ ವಿವರಿಸಬೇಕೆಂದರೆ ಆ ಮಾತುಗಳನ್ನು 4 ಮತ್ತು 5ನೇ ವಚನಗಳೊಂದಿಗೆ ಹೋಲಿಸಿ ನೋಡುವದು: "ಕೆಲಸಮಾಡಿದವನಿಗೆ" ಮತ್ತು "ಕೆಲಸ ಮಾಡಿದವನಾಗಿರದೆ (ಮಾಡದವನು)." "ಕೆಲಸ ಮಾಡುವವನು" (4:4) ಒಬ್ಬ ಉದ್ಯೋಗಿಯಾಗಿದ್ದು ಸಂಬಳವನ್ನು *ಪಡೆಯಲು* "ಕೆಲಸ ಮಾಡುತ್ತಾನೆ." "ಕ್ರಿಯೆಗಳನ್ನು (ಕೆಲಸ) ಮಾಡದವನು" (4:5) ಒಬ್ಬ ವಿಶ್ವಾಸಿಯಾಗಿದ್ದು, ಆತನು ಕರ್ತನನ್ನು ತನಗೆ ಸಾಲದಲ್ಲಿರಿಸುವದಕ್ಕಾಗಿ ದೇವರ ಕೆಲಸ ಮಾಡುವದಿಲ್ಲ, ಆದರೆ ಪ್ರೀತಿ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸಲು ದುಡಿಯುತ್ತಾನೆ. Leon Morris ಇದನ್ನು ಹೀಗೆ ಹೇಳುತ್ತಾನೆ: "ಇಲ್ಲಿ ವ್ಯತ್ಯಾಸವು ಕೆಲಸ ಮಾಡುವವನು ಮತ್ತು ಕೆಲಸ ಮಾಡದವನ ನಡುವೆಯಲ್ಲ (ಪೌಲನು ಇಲ್ಲಿ ಸೋಮಾರಿತನವನ್ನು ಪ್ರೋತ್ಸಾಹಿಸುತ್ತಿಲ್ಲ), ಆದರೆ ಅದು ತನ್ನ ಕೆಲಸಗಳಲ್ಲಿ (ಕ್ರಿಯೆಗಳಲ್ಲಿ) ವಿಶ್ವಾಸವಿಡುವವನ ಹಾಗೂ ದೇವರಲ್ಲಿ ವಿಶ್ವಾಸವಿಡುವವನ ನಡುವಿನ ವ್ಯತ್ಯಾಸವಾಗಿದೆ."[8]

5ನೇ ವಚನದಲ್ಲಿ ದೇವರು "ಪಾಪಾತ್ಮರನ್ನು (ಭಕ್ತಿಹೀನರನ್ನು) ನೀತಿವಂತರೆಂದು ನಿರ್ಣಯಿಸುವವನು" ಎಂದು ಬಣ್ಣಿಸಲ್ಪಟ್ಟಿದ್ದಾನೆ. "ಪಾಪಾತ್ಮರು" ಎಂಬ "ದೇವರ ಕಡೆಗೆ ಸ್ವಲ್ಪವೂ ಭಯಭಕ್ತಿಯ ಗೌರವ" ಹೊಂದಿಲ್ಲದೆ ಇರುವವನನ್ನು ಬಣ್ಣಿಸುತ್ತದೆ. ಇಲ್ಲಿ ಉಪಯೋಗಿಸಲ್ಪಟ್ಟಿರುವ ಮಾತುಗಳು ದೇವರು "ಸ್ವಲ್ಪವೂ ಯೋಗ್ಯತೆ" ಇಲ್ಲದವರನ್ನು ನೀತಿವಂತರೆಂದು ನಿರ್ಣಯಿಸುತ್ತಾನೆ ಎಂದು ಸೂಚಿಸುತ್ತವೆ.[9] ಆತನು ಇದನ್ನು ಮಾಡಲು ಶಕ್ತನಾಗಿದ್ದಾನೆ ಯಾಕೆಂದರೆ ಪಾಪದ ಪರಿಹಾರಕ್ಕಾಗಿ ಆತನು ತನ್ನ ಮಗನನ್ನು ಪ್ರಾಯಶ್ಚಿತ್ತವಾಗಿ ಕೊಟ್ಟನು (3:25); "ಕ್ರಿಸ್ತನು ಭಕ್ತಹೀನರಿಗೋಸ್ಕರ ಸತ್ತನು" (5:6). ಒಬ್ಬನು ತನ್ನ ವಿಶ್ವಾಸವನ್ನು ದೇವರಲ್ಲಿ (ಮತ್ತು ಆತನ ಮಗನಲ್ಲಿ) ಇಡುವಾಗ, "ಆತನ ನಂಬಿಕೆಯನ್ನು ನೀತಿಯೆಂದು ಎಣಿಸಲಾಗುತ್ತದೆ [*logizomai*]." TEV ಯು ಇದನ್ನು "ದೇವರು *ನಂಬಿಕೆ*ಯನ್ನೇ ಲೆಕ್ಕದಲ್ಲಿ ತೆಗೆದುಕೊಳ್ಳುತ್ತಾನೆ" (ಒತ್ತಿ ಹೇಳಿದ್ದು ನನ್ನದು).

**ವಚನಗಳು 6-8.** ಅಧ್ಯಾಯದ 4ರಲ್ಲಿ, ಪೌಲನು ಕ್ರಿಯೆಗಳಿಂದಲ್ಲದೆ ನಂಬಿಕೆಯಿಂದಲೇ ನೀತಿವಂತನೆಂದು ನಿರ್ಣಯಿಸಲ್ಪಟ್ಟವನಿಗೆ ಉದಾಹರಣೆಯಾಗಿ ಅಬ್ರಹಾಮನ ಮೇಲೆ ತನ್ನ ಮುಖ್ಯ ಗಮನವನ್ನು ಹರಿಸಿದನು. ಹೇಗೂ, ವಚನ 6 ರಿಂದ 8ರ ವರೆಗೆ, ಆತನು ಎರಡನೆಯ ಉದಾಹರಣೆಯನ್ನು ಸೇರ್ಪಡೆಗೊಳಿಸಿದನು, ಯೆಹೂದ್ಯರಿಂದ ಗೌರವಿಸಲ್ಪಡುತ್ತಿದ್ದ ಮತ್ತೊಬ್ಬ ವ್ಯಕ್ತಿ: ಅಸರನಾದ ದಾವೀದ. ಪೌಲನು ಈಗಷ್ಟೆ ದೇವರು "ಭಕ್ತಿಹೀನರನ್ನು ನೀತಿವಂತರೆಂದು ನಿರ್ಣಯಿಸುತ್ತಾನೆಂದು" ಹೇಳಿದ್ದನು. ಕೆಲವು ಯೆಹೂದ್ಯರ ಮನಸ್ಸುಗಳಲ್ಲಿ ಅಬ್ರಹಾಮನು "ಭಕ್ತಿಹೀನನೋ" ಎಂಬ ವಿಷಯದಲ್ಲಿ ಸಂಶಯಗಳನ್ನು ಹೊಂದಿದ್ದಿರಬಹುದು ಆದರೆ ದಾವೀದನ ವಿಚಾರದಲ್ಲಿ ಆ ಸಂಶಯಕ್ಕೆ ಅವಕಾಶವಿರಲಿಲ್ಲ. ದಾವೀದನು ಒಂದೇ ವಾರದಲ್ಲಿ ದಶಾಜ್ಞೆಯ ನಾಲ್ಕು ಆಜ್ಞೆಗಳನ್ನು ಉಲ್ಲಂಘಿಸಿದ್ದನು (2 ಸಮುವೇಲ 11; 12; ವಿಮೋಚನಕಾಂಡ 20:13, 14, 16, 17). ದಾವೀದನ ಉದಾಹರಣೆಯು ಹಳೇ ಒಡಂಬಡಿಕೆಯಲ್ಲಿ ಕಲಿಸಲಾಗಿರುವ ನಂಬಿಕೆಯಿಂದ ನೀತಿವಂತರೆಂಬ ನಿರ್ಣಯದ ನಿಯಮವನ್ನು ಮತ್ತಷ್ಟು ದೃಢಪಡಿಸುವದು ಮಾತ್ರವಲ್ಲದೆ, ಆ ನಿಯಮವು ಎಷ್ಟು ವಿಸ್ತಾರಕ್ಕೆ ಮುಟ್ಟುತ್ತದೆಂಬದನ್ನು ಸಹ ತೋರಿಸಿಕೊಡುತ್ತದೆ.

ಪೌಲನು ಹೇಳಿದ್ದೇನೆಂದರೆ, **ದೇವರು ಯಾವನನ್ನು ಪುಣ್ಯಕ್ರಿಯೆಗಳಿಲ್ಲದೆ ನೀತಿವಂತನೆಂದು ಎಣಿಸುತ್ತಾನೋ** [*logizomai*] **ಅವನು ಧನ್ಯನೆಂದು ದಾವೀದನು ಸಹ ಹೇಳುತ್ತಾನೆ.** ಈ ಸನ್ನಿವೇಶದಲ್ಲಿ "ನೀತಿವಂತನೆಂದು ಎಣಿಸುತ್ತಾನೋ" ಎಂಬುದು ದೇವರು ಅತ್ಯಂಥ ಅನೀತಿಯ ಅಪರಾಧವುಳ್ಳವನನ್ನು (ದಾವೀದ) "ನೀತಿವಂತನೆಂದು ಎಣಿಸುವದನ್ನು" ಸೂಚಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, 4:6ರಲ್ಲಿ, ದೇವರು "ನೀತಿವಂತನೆಂದು ಎಣಿಸುವಂಥದ್ದು" ತನ್ನ ತಪ್ಪು ಮಾಡುವ ಮಕ್ಕಳಲ್ಲೊಬ್ಬ ನನ್ನು ಕ್ಷಮಿಸುವದಕ್ಕೆ ಸಂಬಂಧಿಸಿದ್ದಾಗಿದೆ.

ಸಾಮಾನ್ಯವಾಗಿ ಪೌಲನು ಯಾವಾಗಲೂ ಮಾಡುವ ಪ್ರಕಾರವೇ, ಇಲ್ಲಿ ಸಹ ಹಳೇ ಒಡಂಬಡಿಕೆಯ (LXX) ಗ್ರೀಕ್ ತರ್ಜುಮೆಯಿಂದ ಈ ವಚನಗಳನ್ನು ಉಲ್ಲೇಖಿಸುತ್ತಾನೆ. 4:7, 8ರಲ್ಲಿ ಉಲ್ಲೇಖಿಸಲಾಗಿರುವ ವಾಕ್ಯಭಾಗವು ಕೀರ್ತನೆ 32:1, 2 ರಿಂದ ತೆಗೆದುಕೊಳ್ಳ ಲ್ಪಟ್ಟಿದೆ:

> **ಯಾರ ಅಪರಾಧಗಳು ಪರಿಹಾರವಾಗಿವೆಯೋ,**
> **ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು.**
> **ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು.**

ಅನೇಕ ಲೇಖಕರು ನಂಬುವ ಪ್ರಕಾರ, ಕೀರ್ತನೆ 51 ಮತ್ತು 32 ದಾವೀದನು ಬತ್ಷೆಬೆಳೊಂದಿಗೆ ಪಾಪ ಮಾಡಿದ್ದಕ್ಕೆ ಸಂಬಂಧಿಸಿವೆ- ಕೀರ್ತನೆ 51 ರಲ್ಲಿ ದಾವೀದನು ಕ್ಷಮಿಸುವಂತೆ[10] ಗೋಳಾಡುವದಾಗಿದ್ದು, 32ನೇ ಕೀರ್ತನೆಯು ದೇವರು ಆತನನ್ನು ಕ್ಷಮಿಸಿದ ಬಳಿಕ ಆತನು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವದು ಆಗಿರುತ್ತದೆ.[11]

ಕೀರ್ತನೆ 32:1, 2 ರಲ್ಲಿ, ದಾವೀದನು ದೇವರ ಕರುಣೆಗಾಗಿ ತನ್ನ ಕೃತಜ್ಞತೆಗಳನ್ನು ವ್ಯಕ್ತಪಡಿಸುವದಾಗಿದೆ. ತಾನು ಎಷ್ಟು ಕೃತಜ್ಞನಾಗಿದ್ದಾನೆಂಬದನ್ನು ತೋರಿಸಲು ವಿವಿಧ ಪದಗಳನ್ನು ಉಪಯೋಗಿಸುತ್ತಾನೆ. ಆರಂಭದಲ್ಲಿ ನೋಡುವದಾದರೆ, "ಧನ್ಯನು" (μακάριος, *makarios*) ಎಂಬ ಅನುವಾದಿಸಲ್ಪಟ್ಟ ಪದವು ದೇವರ ನಂಬಿಗಸ್ತ ಮಗುವು ಮಾತ್ರವೇ ತಿಳಿಯಬಹುದಾದ ವಿಭಿನ್ನವಾದ ಸಂತೋಷವನ್ನು ಸೂಚಿಸುತ್ತದೆ. ಅದೊಂದು "ಆನಂದ ಮತ್ತು ಅದಕ್ಕಿಂತಲೂ ಹೆಚ್ಚಿನ" ಭಾವನೆಯಾಗಿರಬಹುದು.

ಆತನ ಪಾಪವು ಎಷ್ಟು ಆಗಾಧವಾಗಿತ್ತೆಂಬದನ್ನು ಎರಡು ಪದಗಳು ಬಣ್ಣಿಸುತ್ತವೆ: ἀνομία (*anomia*) ಎಂಬುದರ ಬಹುವಚನ, ಅದು "ಅಧರ್ಮಕೃತ್ಯಗಳು" ಎಂದಾಗಿರುತ್ತದೆ, ಮತ್ತು ὁμαρτία (*hamartia*)ಅದು "ಪಾಪ" ಎಂದಾಗಿರುತ್ತದೆ (3:23ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ).

ಇತರ ಮೂರು ಪದಗಳು ಕರ್ತನ ಕರುಣೆಯ ಶ್ರೇಷ್ಠತೆಯನ್ನು ತೋರಿಸುತ್ತವೆ. ಮೊದಲನೆಯದು, ದಾವೀದನ ಅಧರ್ಮಕೃತ್ಯಗಳು "ಕ್ಷಮಿಸಲ್ಪಟ್ಟಿದ್ದವು" (ἀφίημι, *aphiēme*). Franz Delitzsch ಕೀರ್ತನೆ 32:1 ರಲ್ಲಿನ "ಕ್ಷಮಿಸಲ್ಪಟ್ಟಿವೆ" ಎಂಬ ಪದವನ್ನು "ಮೇಲಕ್ಕೆತ್ತಿ ತೆಗೆದು ಹಾಕುವದು" ಎಂಬದಾಗಿ ವ್ಯಾಖ್ಯಾನಿಸಿದನು.[12]

ಎರಡನೆಯದು, ದಾವೀದನ ಪಾಪಗಳು "ಮುಚ್ಚಲ್ಪಟ್ಟಿದ್ದವು." "ಮುಚ್ಚಲ್ಪಟ್ಟಿವೆ" ಎಂಬ ಅನುವಾದಿತ ಪದವು (ἐπικαλύπτω, *epikaluptō*), ಒಂದು ಸಂಯುಕ್ತ ಪದವಾಗಿದ್ದು ἐπί (*epi*, "ಮೇಲೆ") ಮತ್ತು καλύπτω (*kaluptō*, "ಮುಚ್ಚು") ಎಂಬ ಪದಗಳನ್ನೊಳಗೊಂಡಿರುತ್ತದೆ; ಇದರ ಅರ್ಥವು "ಮೇಲ್ಗಡೆ ಮುಚ್ಚಲ್ಪಟ್ಟಿರುವದು." NLT ಯು ಇದನ್ನು "ದೃಷ್ಟಿಯಿಂದ ಮರೆಯಾಗಿ ಇಡುವದು" ಎಂಬದಾಗಿಯೂ; ABಯು "ಮುಚ್ಚಲ್ಪಟ್ಟು ಸಂಪೂರ್ಣ ಹೂಣಿಡಲ್ಪಟ್ಟಿರುವದು" ಎಂದು ತರ್ಜುಮೆ ಮಾಡಿರುತ್ತದೆ. Delitzschನು "ಮುಚ್ಚಲ್ಪಟ್ಟಿರುವದು" ಎಂಬ ಪದವನ್ನು "ಒಂದು ಮುಚ್ಚುವಿಕೆ," "ಹೀಗೆ ಅದು ಪರಿಶುದ್ಧ ದೇವರಿಗೆ ಗೋಚರವಾ ಗುವದಿಲ್ಲ, ಮತ್ತು ಅದು ಎಂದಿಗೂ ನಡದೇ ಇಲ್ಲವೆಂಬಂತಿರುತ್ತದೆ"[13] ಎಂದು ಬಣ್ಣಿಸುತ್ತಾನೆ.

ಪೌಲನ ತರ್ಕಕ್ಕೆ ಅತ್ಯಂಥ ಮಹತ್ವವುಳ್ಳದ್ದಾಗಿ ಈ ಮೂರನೆಯ ಪದವು ಇರುತ್ತದೆ, "ಲೆಕ್ಕಕ್ಕೆ ಎಣಿಸುವದಿಲ್ಲವೋ" ಎಂಬುದು. ರೋಮಾಪುರ ಪತ್ರಿಕೆಯಲ್ಲಿ ಉಲ್ಲೇಖಿಸಲ್ಪಟ್ಟ ಪ್ರಕಾರವಾಗಿ ಈ ಕೀರ್ತನೆಯು ಹೇಳುವದೇನೆಂದರೆ, "ಕರ್ತನು ಯಾವನ ಲೆಕ್ಕಕ್ಕೆ ಅಪರಾಧವನ್ನು ಎಣಿಸುವದಿಲ್ಲವೋ." "ಲೆಕ್ಕಕ್ಕೆ ಎಣಿಸು" ಎಂಬುದು *logizomai* ಎಂಬ ಪದದ ಅನುವಾದವಾಗಿದೆ, ಉಳಿದ ಅಧ್ಯಾಯದಲ್ಲೆಲ್ಲಾ ಈ ಪದವು "ಎಣಿಸಲ್ಪಡು" ಎಂದು ಅನುವಾದಿಸಲ್ಪಟ್ಟಿರುತ್ತದೆ. ಪೌಲನು ದೇವರ ಆಶ್ಚರ್ಯಕರ ಲೆಕ್ಕಾಚಾರದ ವ್ಯವಸ್ಥೆಯ ಇನ್ನೊಂದು ದೃಷ್ಟಿಕೋನವನ್ನು ನಮ್ಮ ಮುಂದಿಡುತ್ತಿದ್ದಾನೆ. 3 ಮತ್ತು 5ನೇ ವಚನಗಳಲ್ಲಿ, ಆತನು ದೇವರ ಲೆಕ್ಕ ಪುಸ್ತಕವನ್ನು ನೋಡುವದರ ಸಕಾರಾತ್ಮಕ ರೀತಿಯನ್ನು ಮುಂದಿಟ್ಟನು: ದೇವರು "ಭಕ್ತಿ ಹೀನರ" ಲೆಕ್ಕಕ್ಕೆ ಲೆಕ್ಕಪುಸ್ತಕದ ಜಮಾಖಾತೆಯಲ್ಲಿ ನೀತಿಯನ್ನು ಬರೆದನು. ವಚನ 8ರಲ್ಲಿ, ಪೌಲನು ದೇವರ ಲೆಕ್ಕ ಪುಸ್ತಕದಲ್ಲಿ ನೋಡುವದರ ನಕಾರಾತ್ಮಕ ದೃಷ್ಟಿಕೋನವನ್ನು ಮುಂದಿಡುತ್ತಿದ್ದಾನೆ: ದೇವರು ಲೆಕ್ಕ ಪುಸ್ತಕದ ಬಾಕಿಯ

ಖಾತೆಯಲ್ಲಿ ಭಕ್ತಿಹೀನರಿಗೆ ಅನೀತಿಯನ್ನು ಸೇರಿಸಲಿಲ್ಲ. CJB ಯಲ್ಲಿ "[ಕರ್ತನು] ಯಾವನ ಪಾಪವನ್ನು ಲೆಕ್ಕಕ್ಕೆ ಎಣಿಸುವದಿಲ್ಲವೋ ಅವನು ಧನ್ಯನು" ಎಂದಿರುತ್ತದೆ.

ಇದು ಎಷ್ಟೊಂದು ಗಮನಾರ್ಹವಾದದ್ದೆಂಬದನ್ನು ಗ್ರಹಿಸಬೇಕೆಂದರೆ, ದಾವೀದನು ತಾನು ಮಾಡಿದ ಕೃತ್ಯಕ್ಕಾಗಿ ಎಂಥ ದಂಡನೆಗೆ *ಯೋಗ್ಯನಾಗಿದ್ದನು* ಎಂಬದನ್ನು ಒಬ್ಬನು ಪರಿಗಣಿಸಬೇಕು. ಮೋಶೆಯ ಧರ್ಮಶಾಸ್ತ್ರದ ಪ್ರಕಾರವಾಗಿ, ಎರಡು ಅಪರಾಧಗಳಿಗಾಗಿ ಆತನು ಕಲ್ಲುಗಳಿಂದ ಹೊಡೆಯಲ್ಪಟ್ಟು ಕೊಲ್ಲುವ ದಂಡನೆಗೆ ಯೋಗ್ಯನಾಗಿದ್ದನು: ವ್ಯಭಿಚಾರ (ಧರ್ಮೋಪದೇಶಕಾಂಡ 22:22, 24; ನೋಡಿರಿ ಯೋಹಾನ 8:5) ಮತ್ತು ನರಹತ್ಯೆ (ಯಾಜಕಕಾಂಡ 24:17). ಹೇಗೂ, ಆತನ ಪಾಪವು ಬಯಲಿಗೆ ಬಂದಾಗ, ಅವನನ್ನು ಪಟ್ಟಣದ ಹೊರಗೆ ಎಳೆದುಕೊಂಡು ಹೋಗಿ ಆತನ ಮುರಿದ ದೇಹದಿಂದ ಪ್ರಾಣವು ಹೋಗುವ ತನಕ ಕಲ್ಲುಗಳಿಂದ ಹೊಡೆಯಲ್ಪಡಲಿಲ್ಲ. ಬದಲಾಗಿ, ಆತನ ಪಾಪಗಳು ಕ್ಷಮಿಸಲ್ಪಟ್ಟವು. . . ಮುಚ್ಚಲ್ಪಟ್ಟವು. . . ಮತ್ತು ಆತನ ಲೆಕ್ಕಕ್ಕೆ ಎಣಿಸಲ್ಪಡಲಿಲ್ಲ! ಆತನು ತನ್ನನ್ನು "ಧನ್ಯನು" ಎಂದು ಕರೆದುಕೊಂಡದ್ದರಲ್ಲಿ ಆಶ್ಚರ್ಯವೇ ಇಲ್ಲ!

ಪೌಲನು ಹೇಳಿದ್ದೇನೆಂದರೆ ಕೀರ್ತನೆ 32:1, 2 ವಚನಗಳು ದೇವರು "ಕ್ರಿಯೆಗಳಿಲ್ಲದೆ" ನೀತಿವಂತರೆಂದು ನಿರ್ಣಯಿಸು ವದಕ್ಕೆ ಒಂದು ಉದಾಹರಣೆಯಾಗಿದೆ (4:6). ದಾವೀದನು ಕ್ಷಮಿಸಲ್ಪಡಬೇಕಾದರೆ ತಾನೇನೂ ಮಾಡಬೇಕಾಗಿರಲಿಲ್ಲ ಎಂದು ಪೌಲನು ಹೇಳುತ್ತಿಲ್ಲ. ದಾವೀದನ ಹೃದಯವು ಪಶ್ಚಾತ್ತಾಪದಿಂದ ಮುರಿಯಲ್ಪಡುವ ಅಗತ್ಯವಿತ್ತು (ಕೀರ್ತನೆ 51:17). ಆತನು ತನ್ನ ಪಾಪಗಳನ್ನು ಒಪ್ಪಿಕೊಂಡು ಕರ್ತನ ಮುಂದೆ ಅವುಗಳನ್ನು ಅರಿಕೆ ಮಾಡುವ ಅಗತ್ಯವಿತ್ತು (ನೋಡಿರಿ ಕೀರ್ತನೆ 32:5; 51:3, 4). ಆತನು ತನ್ನನ್ನು ಕ್ಷಮಿಸುವಂತೆ ಕರ್ತನನ್ನು ಪ್ರಾರ್ಥಿಸುವ ಅಗತ್ಯವಿತ್ತು (ನೋಡಿರಿ ಕೀರ್ತನೆ 32:6; 51:1, 2, 9). ದಾವೀದನು ದೇವರ ಕ್ಷಮೆಯನ್ನು ಸಂಪಾದಿಸಿ ಕೊಳ್ಳುವಂತೆ ಮಾಡಬಹುದಾದ ಯಾವ "ಕ್ರಿಯೆಗಳು" ಸಹ ಆತನಿಗೆ ಇರಲಿಲ್ಲ ಎಂಬದನ್ನು ಪೌಲನು ಹೇಳುತ್ತಿದ್ದಾನೆ. ಕರ್ತನು ಆತನನ್ನು ಕ್ಷಮಿಸಿದಾಗ, ಅದು ಕೃಪೆಯ ಆಧಾರದಲ್ಲಿಯೇ ಹೊರತು ಕ್ರಿಯೆಗಳ ಮೇಲಲ್ಲ.

ದಾವೀದನ ಉದಾಹರಣೆಯಲ್ಲಿ (4:6-8), ಪೌಲನು ನಂಬಿಕೆಯನ್ನು ಪ್ರಸ್ತಾಪಿಸಲಿಲ್ಲ; ಆದರೆ ಆತನ ಯೆಹೂದ್ಯ ವಾಚಕರಲ್ಲಿ ಅನೇಕರಿಗೆ ಕೀರ್ತನೆ 32 ಕಂಠಪಾಠವಾಗಿ ಗೊತ್ತಿದ್ದಿರಬೇಕು. ಮೊದಲ ಎರಡು ವಚನಗಳನ್ನು ಉಲ್ಲೇಖಿಸಿದ ತಕ್ಷಣ ಅವರಿಗೆ ಆ ಇಡೀ ಕೀರ್ತನೆಯ ನೆನಪು ಬಂದಿರಬಹುದಾಗಿದೆ-ಅವುಗಳಲ್ಲಿ ಈ ಮಾತುಗಳು ಸಹ ಸೇರಿದ್ದವು: "ಕರ್ತನಲ್ಲಿ ಭರವಸವಿಟ್ಟವರನ್ನು ಆತನ ಕೃಪೆಯು ಆವರಿಸಿಕೊಳ್ಳುವದು" (ಕೀರ್ತನೆ 32:10).

## ನೀತಿಯು ಸುನ್ನತಿಯ ಮೇಲೆಆಧಾರವಾಗಿಲ್ಲ (4:9-12)

**[9]ಈ ಶುಭವಚನವು ಸುನ್ನತಿಯಿದ್ದವರಿಗೆ ಮಾತ್ರವೋ? ಸುನ್ನತಿಯಿಲ್ಲದವರಿಗೆ ಸಹ ಆಗುತ್ತದೋ? ನೋಡೋಣ. ಅಬ್ರಹಾಮನ ಲೆಕ್ಕಕ್ಕೆ ಅವನ ನಂಬಿಕೆಯೇ ನೀತಿಯೆಂದು ಎಣಿಸಲ್ಪಟ್ಟಿತೆಂಬದಾಗಿ ಹೇಳುತ್ತೇವಲ್ಲಾ. [10]ಅದು ಯಾವಾಗ ಎಣಿಸಲ್ಪಟ್ಟಿತು? ಅವನಿಗೆ**

**ಸುನ್ನತಿಯಾದ ಮೇಲೆಯೋ? ಸುನ್ನತಿಯಾಗುವದಕ್ಕೆ ಮೊದಲೋ? ಸುನ್ನತಿಯಾದ ಮೇಲೆ ಅಲ್ಲ, ಸುನ್ನತಿಯಾಗುವದಕ್ಕೆ ಮೊದಲೇ ಎಣಿಸಲ್ಪಟ್ಟಿತು. [11]ಆ ಮೇಲೆ ಸುನ್ನತಿಯೆಂಬ ಸಂಸ್ಕಾರವನ್ನು ಗುರುತಾಗಿ ಹೊಂದಿದನು. ಇದು ಸುನ್ನತಿಯಾಗುವದಕ್ಕೆ ಮೊದಲೇ ಅವನಿಗಿದ್ದ ನಂಬಿಕೆಯಿಂದಾದ ನೀತಿಗೆ ಮುದ್ರೆಯಾಗಿತ್ತು. ಹೀಗಿರುವದರಿಂದ ಅವನು ನಂಬುವವರೆಲ್ಲರಿಗೂ ಅವರು ಸುನ್ನತಿಯಿಲ್ಲದವರಾದಾಗ್ಯೂ ಮೂಲತಂದೆ ಯಾದನು; ಅವರೂ ನೀತಿವಂತರೆಂದು ಎಣಿಸಲ್ಪಡುವರು. [12]ಇದಲ್ಲದೆ ಸುನ್ನತಿಯವರಲ್ಲಿ ಯಾರಾರು ಸುನ್ನತಿ ಹೊಂದಿದ್ದಲ್ಲದೆ ನಮ್ಮ ಪಿತೃವಾಗಿರುವ ಅಬ್ರಹಾಮನಿಗೆ ಸುನ್ನತಿಯಾಗುವದಕ್ಕೆ ಮುಂಚೆ ಇದ್ದ ನಂಬಿಕೆಯ ಹೆಜ್ಜೆಗಳನ್ನು ಹಿಡಿದು ನಡೆಯುತ್ತಾರೋ ಅವರಿಗೆ ಸಹ ಮೂಲತಂದೆಯಾಗಿದ್ದಾನೆ.**

ಅಧ್ಯಾಯ 4 ರಲ್ಲಿ, ನಂಬಿಕೆಯಿಂದ ನೀತಿನಿರ್ಣಯದ ಕುರಿತು ಪೌಲನ ಪ್ರಧಾನ ಉದಾಹರಣೆ ಅಬ್ರಹಾಮನಾಗಿದ್ದನು. ಅಬ್ರಹಾಮನು ಹಳೇಯ ಹಾಗೂ ಹೊಸ ಒಡಂಬಡಿಕೆಗಳೆರಡರಲ್ಲೂ ಪ್ರಮುಖ ವ್ಯಕ್ತಿಯಾಗಿದ್ದಾನೆ. ಹೊಸ ಒಡಂಬಡಿಕೆಯಲ್ಲಿ ಆತನ ಹೆಸರು ಪೌಲನ ಅಥವಾ ಪೇತ್ರನ ಹೆಸರಿಗಿಂತಲೂ ಹೆಚ್ಚು ಸಾರಿ ಉಲ್ಲೇಖಿಸಲ್ಪಟ್ಟಿದೆ![14] ಈ ಅಧ್ಯಾಯದಲ್ಲಿ ಒಂದು ಪ್ರಧಾನ ವಿಷಯವು ಅಬ್ರಹಾಮನ ಪಿತೃತ್ವ ಕುರಿತಾಗಿದೆ. 12ನೇ ವಚನದಲ್ಲಿ, ಪೌಲನು ಆತನನ್ನು "ನಮ್ಮ ಪಿತೃವಾಗಿರುವ" ಎಂದು ಕರೆದನು. 11ನೇ ವಚನದಲ್ಲಿ, ಆತನು "ನಂಬುವವರೆಲ್ಲರಿಗೂ . . . ಮೂಲತಂದೆ" ಎಂದು ಕರೆಯಲ್ಪಟ್ಟಿದ್ದಾನೆ. ನಂತರ, 16ನೇ ವಚನದಲ್ಲಿ, ಪೌಲನು "ನಮ್ಮೆಲ್ಲರಿಗೂ . . . ಮೂಲಪಿತೃವಾಗಿದ್ದಾನೆ" ಎಂದು ಹೇಳುತ್ತಾನೆ.

4:9-12 ರ ಮೇಲೆ ವ್ಯಾಖ್ಯಾನಮಾಡುವದಕ್ಕೆ ಮುಂಚೆ, ಅಬ್ರಹಾಮನ ಜೀವನದಲ್ಲಿ ನಡೆದ ಕೆಲವು ಪ್ರಮುಖ ಘಟನೆಗಳ ಬಗ್ಗೆ ಮತ್ತು ಅವುಗಳು ನಡೆದ ಕ್ರಮಾನುಸಾರದ ಬಗ್ಗೆ ಆಲೋಚಿಸೋಣ. ಅಬ್ರಹಾಮನು ಬಹುಶಃ ಆರವತ್ತು ವರ್ಷದವನಾಗಿದ್ದಾಗ, ದೇವರು ಆತನನ್ನು ಕಲ್ದೀಯರ ಊರ್ ದೇಶವನ್ನು ಬಿಟ್ಟು ಹೊರಬರುವಂತೆ ಕರೆದನು (ಆದಿಕಾಂಡ 11:31; 15:7). ಆತನು ಮತ್ತು ಆತನ ತಂದೆಯಾದ ತೆರಹನು, ಇತರ ಕುಟುಂಬ ಸದಸ್ಯರ ಸಂಗಡ ಹಾರಾನಿಗೆ ಬಂದು ನೆಲೆಸಿದನು. ತೆರಹನ ಮರಣದ ಬಳಿಕ (ಆದಿಕಾಂಡ 11:32), ಅಬ್ರಹಾಮನು ಎಪ್ಪತ್ತೈದು ವರ್ಷದವನಾಗಿದ್ದಾಗ (ಆದಿಕಾಂಡ 12:4) ದೇವರು ಆತನಿಗೆ ಕಾಣಿಸಿಕೊಂಡು ಹೇಳಿದ್ದೇನೆಂದರೆ,

> ನೀನು ಸ್ವದೇಶವನ್ನೂ ಬಂಧು ಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವಾದನಿಧಿಯಾಗುವಿ. ನಿನ್ನನ್ನು ಹರಸುವವರನ್ನು ಹರಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು. ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು (ಆದಿಕಾಂಡ 12:1-3).

ದೇವರು ಅಬ್ರಹಾಮನಿಗೆ ಒಂದು ಆಸ್ತಿಯ ವಾಗ್ದಾನ, ಒಂದು ಜನಾಂಗದ ವಾಗ್ದಾನ, ಮತ್ತು ಸುರಕ್ಷತೆಯ ವಾಗ್ದಾನವನ್ನು ಅನುಗ್ರಹಿಸಿದನು; ಆದರೆ ನಮಗೆ ಬಹಳ ಆಸಕ್ತಿ

ಕೆರಳಿಸುವಂತಹ ಸಂಗತಿಯೆಂದರೆ ಈ ವಾಗ್ದಾನದ ಉದ್ದೇಶ: "ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ (ಕುಟುಂಬಗಳಿಗೂ) ಆಶೀರ್ವಾದವುಂಟಾಗುವದು" (ನೋಡಿರಿ ಗಲಾತ್ಯ 3:8).

ಅಬ್ರಹಾಮನು ಕಾನಾನ್ ದೇಶಕ್ಕೆ ಬಂದು ನೆಲೆಸಿದನು; ಆದರೆ ಒಂದು ದಶಕ ಕಳೆದರೂ ಆತನಿಗೆ ಮತ್ತು ಸಾರಳಿಗೆ ಮಕ್ಕಳಾಗಿರಲಿಲ್ಲ. ದೇವರು ಅಬ್ರಹಾಮನಿಗೆ ಆತನ ಸಂತತಿಯು ಭೂಮಿಯ ದೂಳಿನಷ್ಟು (ಆದಿಕಾಂಡ 13:16) ಮತ್ತು ಆಕಾಶದ ನಕ್ಷತ್ರಗಳಷ್ಟು ಅಸಂಖ್ಯಾತವಾಗಿರುವದೆಂದು ದೃಢಪಡಿಸಿದನು (ಆದಿಕಾಂಡ 15:5). ಆ ಸಂದರ್ಭದ ಬಳಿಕ, "ಅಬ್ರಹಾಮನು ಯೆಹೋವನನ್ನು ನಂಬಿದನು; ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" ಎಂದು ಹೇಳಲಾಗುತ್ತದೆ (ಆದಿಕಾಂಡ 15:6).

ಇನ್ನೂ ಹದಿನಾಲ್ಕು ಅಥವಾ ಹೆಚ್ಚಿನ ವರ್ಷಗಳು ಗತಿಸಿದವು. ಆಗ ಅಬ್ರಹಾಮನು ತೊಂಬತ್ತೊಂಬತ್ತು ವರ್ಷದವನಾಗಿದ್ದನು, ಆಗ ದೇವರು ಅವನಿಗೆ ಕಾಣಿಸಿಕೊಂಡು ಹೀಗೆ ಹೇಳಿದನು,

> ನಾನಂತೂ ನಿನಗೆ ವಾಗ್ದಾನ ಮಾಡುತ್ತೇನೆ; ಏನಂದರೆ ನೀನು ಅನೇಕ ಜನಾಂಗಗಳಿಗೆ ಮೂಲಪುರುಷನಾಗುವಿ. ಇನ್ನು ಮುಂದೆ ನಿನಗೆ ಅಬ್ರಾಮ ["ಹೆಚ್ಚಿಸಲ್ಪಟ್ಟ ತಂದೆ"] ಎಂದು ಹೆಸರಿರುವದಿಲ್ಲ. ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲಪಿತೃವಾಗಿ ನೇಮಿಸಿರುವದರಿಂದ ನಿನಗೆ ಅಬ್ರಹಾಮನೆಂದು ["ಜನಸಮೂಹಗಳ ತಂದೆ"] ಹೆಸರಿರುವದು. ನಿನಗೆ ಅತ್ಯಧಿಕವಾದ ಸಂತಾನವನ್ನು ಕೊಡುವೆನು . . . (ಆದಿಕಾಂಡ 17:4-6).

ಆ ಗಳಿಗೆಯಲ್ಲಿ, ದೇವರು ಸುನ್ನತಿಯ ಸಂಸ್ಕಾರವನ್ನು ಏರ್ಪಡಿಸಿದನು (ಆದಿಕಾಂಡ 17:9-14, 23-27). ದೇವರು "ಅದೇ ನಿಮಗೂ ನನಗೂ ಒಡಂಬಡಿಕೆಗೆ ಗುರುತು" ಎಂದು ಹೇಳಿದನು (ಆದಿಕಾಂಡ 17:11; ಒತ್ತಿ ಹೇಳಿದ್ದು ನನ್ನದು).

ಇನ್ನೊಂದು ಘಟನೆಯು ಇಲ್ಲಿ ಗಮನಿಸತಕ್ಕದ್ದಾಗಿದೆ: ಅಬ್ರಹಾಮನು ತನ್ನ ನಂಬಿಕೆಯ ಅತ್ಯಂಥ ಕಠಿಣ ಪರೀಕ್ಷೆಯನ್ನು ಸಂಧಿಸಿದ ಬಳಿಕ (ಇಸಾಕನನ್ನು ಯಜ್ಞವೇದಿಯ ಮೇಲೆ ಅರ್ಪಿಸುವದು), ದೇವರು ಅವನ ಸಂಗಡದ ತನ್ನ ಒಡಂಬಡಿಕೆಯನ್ನು ವಿನೂತನಗೊಳಿಸಿಕೊಂಡು ಹೇಳಿದ್ದೇನೆಂದರೆ, "ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು" (ಆದಿಕಾಂಡ 22:18). ನಾವು ವಾಕ್ಯಭಾಗವನ್ನು ಪರೀಕ್ಷಿಸುತ್ತಿರುವ ಹಾಗೆ ಘಟನೆಗಳ ಈ ಕಾಲಾನುಕ್ರಮವನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ.[15]

ಯೆಹೂದ್ಯರ ಹೃದಯಗಳಿಗೆ ಎರಡು ಅಂಶಗಳು ಬಹಳ ಅಚ್ಚುಮೆಚ್ಚಾಗಿದ್ದವು: ತಾವು ಸುನ್ನತಿಯಾಗಿರುವವರು ಎಂಬ ಅಂಶ ಮತ್ತು ತಮ್ಮ ಬಳಿಯಲ್ಲಿ ಧರ್ಮಶಾಸ್ತ್ರವಿತ್ತು ಎಂಬ ಅಂಶ. ಇವುಗಳು ಅವರನ್ನು *ಯೆಹೂದ್ಯರನ್ನಾಗಿಸಿದ್ದವು* ಮತ್ತು ದೇವರ ದೃಷ್ಟಿಯಲ್ಲಿ *ವಿಶೇಷವಾಗಿಸಿದ್ದವು.* ಅವರು ತಮ್ಮನ್ನು ನೀತಿವಂತರೆಂದು ನಿರ್ಣಯಿಸಿಕೊಳ್ಳಲು ಸುನ್ನತಿ ಹಾಗೂ ಧರ್ಮಶಾಸ್ತ್ರದ ಮೇಲೆ ಅವಲಂಭಿತರಾಗಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 15:1). ಅಧ್ಯಾಯ 2 ರಲ್ಲಿ, ಪೌಲನು ಮೊದಲು ಧರ್ಮಶಾಸ್ತ್ರದ ಬಗ್ಗೆ ಚರ್ಚಿಸುತ್ತಾನೆ (2:17-

24) ಮತ್ತು ನಂತರ ಸುನ್ನತಿಯ ಬಗ್ಗೆ ಚರ್ಚಿಸುತ್ತಾನೆ (2:25-29). ಅಧ್ಯಾಯ 4 ರಲ್ಲಿ, ಆತನು ದೇವರ ಆಶ್ಚರ್ಯವಾದ ಲೆಕ್ಕಿಸುವ ವ್ಯವಸ್ಥೆಯ ಕುರಿತ ತನ್ನ ಸಂಭಾಷಣೆಯನ್ನು ಮುಂದುವರೆಸಿದಂತೆ, ಆತನು ಆ ಅಂಶಗಳನ್ನು ಮತ್ತೊಮ್ಮೆ-ವಿರುದ್ಧ ಕ್ರಮಾಂಕದಲ್ಲಿ-ಚರ್ಚಿಸುತ್ತಾನೆ (4:9-12, 13-15).

**ವಚನ 9.** ಪೌಲನು ಕೇಳುತ್ತಾನೆ, **ಈ ಶುಭವಚನವು ಸುನ್ನತಿಯಿದ್ದವರಿಗೆ ಮಾತ್ರವೋ? ಸುನ್ನತಿಯಿಲ್ಲದವರಿಗೆ ಸಹ ಆಗುತ್ತದೋ?**[16] ಬೇರೆ ಮಾತುಗಳಲ್ಲಿ ಹೇಳುವದಾದರೆ, ಯೆಹೂದ್ಯರು ಮಾತ್ರವೇ ಪಾಪಗಳ ಕ್ಷಮೆಯನ್ನು ಹೊಂದುವರೋ ಅಥವಾ ಅನ್ಯಜನರು ಸಹ ಕ್ಷಮಿಸಲ್ಪಡಬಲ್ಲರೋ? ಅನೇಕ ಯೆಹೂದ್ಯರು, "ಅಂಥ ಆಶೀರ್ವಾದಗಳು ಯೆಹೂದ್ಯರಿಗೆ ಮಾತ್ರವೇ ಇರುತ್ತವೆ!" ಎಂದು ಉತ್ತರಿಸಿರುತ್ತಿದ್ದರು . ಹೇಗೂ, ಪೌಲನು ದೇವರ ಕೃಪಾಭರಿತ ಕೊಡುಗೆಗಳು *ಎಲ್ಲರಿಗಾಗಿಯೂ* ಎಂಬದನ್ನು ಸ್ಥಾಪಿಸಲಿದ್ದನು.

ಪೌಲನು ತನ್ನ ವಾಚಕಕರಿಗೆ ಮೊದಲು ಸಾಕ್ಷ್ಯಾಧಾರದ ವಾಕ್ಯಭಾಗವನ್ನು ನೆನಪಿಸುತ್ತಾನೆ (ಆದಿಕಾಂಡ 15:6): **ಅಬ್ರಹಾಮನ ಲೆಕ್ಕಕ್ಕೆ ಅವನ ನಂಬಿಕೆಯೇ ನೀತಿಯೆಂದು ಎಣಿಸಲ್ಪಟ್ಟಿತೆಂಬದಾಗಿ** (*logizomai*) **ಹೇಳುತ್ತೇವಲ್ಲಾ.**

**ವಚನ 10.** ಬಳಿಕ ಆತನು ಹೀಗೆ ಕೇಳಿದನು, **ಅದು ಯಾವಾಗ ಎಣಿಸಲ್ಪಟ್ಟಿತು** (*logizomai*)**? ಅವನಿಗೆ ಸುನ್ನತಿಯಾದ ಮೇಲೆಯೋ? ಸುನ್ನತಿಯಾಗುವದಕ್ಕೆ ಮೊದಲೋ?** ಈ ಪ್ರಶ್ನೆಗಳು ಅಬ್ರಹಾಮನು ನಂಬಿಕೆಯಿಂದ ನೀತಿವಂತನೆಂದು ನಿರ್ಣಯಿಸಲ್ಪಟ್ಟ ವೇಳೆಯಲ್ಲಿ ಆತನಿದ್ದ ಸಂದರ್ಭಗಳನ್ನೊಳಗೊಂಡಿರುತ್ತವೆ. ಇದು ಬಹುಪಾಲು ಯೆಹೂದ್ಯರು ಎಂದಿಗೂ ಪರಿಗಣನೆಗೆ ತೆಗೆದುಕೊಂಡಿರದ ಪ್ರಶ್ನೆಯಾಗಿತ್ತು.

ಪೌಲನು ತಾನು ಹಾಕಿದ ಪ್ರಶ್ನೆಗೆ ತಾನೇ ಉತ್ತರಿಸುತ್ತಾನೆ: **ಸುನ್ನತಿಯಾದ ಮೇಲೆ ಅಲ್ಲ, ಸುನ್ನತಿಯಾಗುವದಕ್ಕೆ ಮೊದಲೇ ಎಣಿಸಲ್ಪಟ್ಟಿತು.** ಅಬ್ರಹಾಮನು ನಂಬಿಕೆಯಿಂದ ನೀತಿವಂತನೆಂದು ನಿರ್ಣಯಿಸಲ್ಪಟ್ಟ ಕುರಿತ ಹೇಳಿಕೆಯು ಆದಿಕಾಂಡ 15ರಲ್ಲಿ ಮಾಡಲ್ಪಟ್ಟಿರುತ್ತದೆ, ಸುನ್ನತಿಯ ಸಂಸ್ಕಾರವನ್ನು ಏರ್ಪಡಿಸುವ ಕುರಿತ ವಿವರಣೆಯು ಆದಿಕಾಂಡ 17ರಲ್ಲಿ-ಕನಿಷ್ಠ ಹದಿನಾಲ್ಕು ವರ್ಷಗಳ ಬಳಿಕ[17]-ಇರುತ್ತದೆ. ಯೆಹೂದ್ಯ ಪುರುಷರು ಸುನ್ನತಿಯು ಒಂದು ಅರ್ಥದಲ್ಲಿ ಅವರನ್ನು "ಯೆಹೂದಿಗಳನ್ನಾಗಿ" ಮಾಡುವದಾಗಿತ್ತು ಎಂದು ನಂಬಿದ್ದರು; ಅವರು ಯೆಹೂದ್ಯರನ್ನು "ಸುನ್ನತಿಯವರು" ಎಂದೂ ಅನ್ಯಜನರನ್ನು "ಸುನ್ನತಿಯಿಲ್ಲದವರು" ಎಂದೂ ಕರೆಯುತ್ತಿದ್ದರು. ಹೀಗೆ, ಅವರ ಸ್ವಂತ ತರ್ಕದ ಪ್ರಕಾರ, ಅಬ್ರಹಾಮನು ತಾನೊಬ್ಬ "ಯೆಹೂದ್ಯ" ಆಗುವದಕ್ಕೆ ಮುಂಚೆಯೇ-ಆತನು ಇನ್ನೂ "ಒಬ್ಬ ಅನ್ಯಜನಾಂಗದವನು" ಆಗಿರುವಾಗಲೇ-ನಂಬಿಕೆಯಿಂದ ನೀತಿವಂತನೆಂದು ಎಣಿಸಲ್ಪಟ್ಟನು!

**ವಚನ 11.** ಅದು ಇನ್ನೊಂದು ಪ್ರಶ್ನೆಯನ್ನು ಎಬ್ಬಿಸುತ್ತದೆ: ಹಾಗಾದರೆ, ಏಕೆ ದೇವರು ಆಬ್ರಹಾಮ ಹಾಗೂ ಆತನ ಕುಟುಂಬದ ಗಂಡು ಮಕ್ಕಳು ಸುನ್ನತಿ ಮಾಡಿಸಿಕೊಳ್ಳಬೇಕೆಂದು ಆಜ್ಞಾಪಿಸಿದನು? ಆ ಸಂಸ್ಕಾರವು ರಕ್ಷಣೆಯನ್ನುಂಟು ಮಾಡುವದಕ್ಕಲ್ಲವಾಗಿದ್ದರೆ ಅದರ ಉದ್ದೇಶವಾದರೂ ಏನಾಗಿತ್ತು? ಪೌಲನು

ಮುಂದುವರೆದು ಹೇಳುತ್ತಾನೆ, **ಆಮೇಲೆ** [ಅಬ್ರಹಾಮನು] **ಸುನ್ನತಿಯೆಂಬ ಸಂಸ್ಕಾರವನ್ನು ಗುರುತಾಗಿ** [σημεῖον, *sēmeion*] **ಹೊಂದಿದನು. ಇದು ಸುನ್ನತಿಯಾಗುವದಕ್ಕೆ ಮೊದಲೇ ಅವನಿಗಿದ್ದ ನಂಬಿಕೆಯಿಂದಾದ ನೀತಿಗೆ ಮುದ್ರೆಯಾಗಿತ್ತು** [σφραγίς, *sphragis*]. ಸಂಸ್ಕಾರವನ್ನು ಸ್ಥಾಪಿಸುವ ಮೂಲಕ ದೇವರು ಅಬ್ರಹಾಮನಿಗೆ ಹೇಳಿದ್ದೇನೆಂದರೆ, "ನೀನು ಸುನ್ನತಿ ಹೊಂದುವಿ . . . ಮತ್ತು ಅದು ನನ್ನ ಮತ್ತು ನಿನ್ನ ನಡುವಿನ ಒಡಂಬಡಿಕೆಗೆ ಗುರುತು (*sēmeion*; LXX) ಆಗಿರುವದು" (ಆದಿಕಾಂಡ 17:11; ಒತ್ತಿ ಹೇಳಿದ್ದು ನನ್ನದು). ಸುನ್ನತಿಯು ಯೆಹೂದ್ಯರಿಗೆ ಅವರನ್ನು ರಕ್ಷಿಸುವದಕ್ಕಾಗಿ ಕೊಡಲ್ಪಟ್ಟಿರಲಿಲ್ಲ, ಆದರೆ ಬದಲಾಗಿ ಒಂದು "ಗುರುತು" ಅಥವಾ ಒಂದು "ಮುದ್ರೆ" ಯಾಗಿ ಕೊಡಲ್ಪಟ್ಟಿತ್ತು: "ಅವರನ್ನು ಗುರುತಿಸಲು ಒಂದು ಗುರುತು" ಮತ್ತು "ಅವರನ್ನು ಪ್ರಮಾಣೀಕರಿಸಲು ಒಂದು ಮುದ್ರೆ."[18]

ಈ ಸಂದರ್ಭದಲ್ಲಿ, ಅನೇಕ ಪಂಗಡಗಳ ವ್ಯಾಖ್ಯಾನಗ್ರಂಥಗಳು ಇದನ್ನು ಸೇರ್ಪಡೆಗೊಳಿಸುವವು, "ದೀಕ್ಷಾಸ್ನಾನದ ವಿಷಯದಲ್ಲಿಯೂ ಹಾಗೆಯೇ ಆಗಿದೆ. ಅದಕ್ಕೂ ನಮ್ಮ ರಕ್ಷಣೆಗೂ ಯಾವ ಸಂಬಂಧವೂ ಇಲ್ಲ, ಆದರೆ ಅದು ನಮ್ಮ ನೀತಿವಂತಿಕೆಗೆ ಒಂದು ಗುರುತು ಮತ್ತು ಒಂದು ಮುದ್ರೆ ಆಗಿದೆಯಷ್ಟೆ." ಪೌಲನು ಅಂಥ ಯಾವದೇ ರೀತಿ ಅನ್ವಯಿಕೆಯ ಸುಳಿವು ನೀಡಲಿಲ್ಲ ಎಂಬದನ್ನು ತಿಳಿದಾಗ್ಯೂ ಅವರು ಈ ರೀತಿಯ ದಿಟ್ಟ ಪ್ರತಿವಾದವನ್ನು ಮಾಡುತ್ತಾರೆ. ಒಂದು ಪಂಗಡದ ವ್ಯಾಖ್ಯಾನಕಾರನು ಇದನ್ನು ಒಪ್ಪಿಕೊಳ್ಳಬೇಕಾಯಿತು, "ರೋಮಾ 4ರಲ್ಲಿ ದೀಕ್ಷಾಸ್ನಾನದ ಕುರಿತು ಏನಾದರೂ ಇರುವ ಸಾಧ್ಯತೆಯು ಬಹಳ ಕಡಿಮೆಯಿದೆ."[19] ಪೌಲನು ಪವಿತ್ರಾತ್ಮನ ವರವನ್ನು (ಅದು ನಮಗೆ ನಾವು ದೀಕ್ಷಾಸ್ನಾನ ಹೊಂದುವಾಗ ಸಿಕ್ಕುತ್ತದೆ; ಅಪೊಸ್ತಲರ ಕೃತ್ಯಗಳು 2:38) ಒಂದು ಮುದ್ರೆ ಎಂದು ಸೂಚಿಸಿ ಹೇಳಿದನು (ಎಫೆಸ 1:13, 14). (ದೀಕ್ಷಾಸ್ನಾನದ ಉದ್ದೇಶದ ಬಗ್ಗೆ ತಿಳಿಸಲು, 6:3, 4ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ.)

ಅಬ್ರಹಾಮನು ಸುನ್ನತಿಯಾಗುವ ಮೊದಲೇ ನಂಬಿಕೆಯಿಂದ ನೀತಿವಂತನೆಂದು ನಿರ್ಣಯಿಸಲ್ಪಟ್ಟನೆಂದು ಪೌಲನು ಮುಕ್ತಾಯಕ್ಕೆ ಬಂದನು, **ಹೀಗಿರುವದರಿಂದ ಅವನು ನಂಬುವವರೆಲ್ಲರಿಗೂ ಅವರು ಸುನ್ನತಿಯಿಲ್ಲದವರಾದಾಗ್ಯೂ ಮೂಲತಂದೆಯಾದನು.** ಅಬ್ರಹಾಮನು ಯೆಹೂದ್ಯರಿಗೆ ವಂಶಾನುಕ್ರಮದಲ್ಲಿ (ಶಾರೀರಿಕವಾಗಿ) "ಮೂಲಪಿತೃ" (*propatōr*) ಆಗಿದ್ದನೆಂದು ಪೌಲನು ಗಮನಕ್ಕೆ ತಂದನು (4:1); ಈಗ ಆತನು ಘೋಷಿಸಿದ್ದೇನೆಂದರೆ ಅಬ್ರಹಾಮನು ಯೇಸುವಿನಲ್ಲಿ ನಂಬಿಕೆಯಿಟ್ಟಿರುವ ಅನ್ಯಜನರಿಗೆ ಆತ್ಮೀಕ "ತಂದೆ" (*patēr*) ಆಗಿದ್ದಾನೆ. ಅನ್ಯಜನರು ನಂಬಿದರೆ, ಅಬ್ರಹಾಮನಿಗೆ ಸಂಭವಿಸಿದ ಪ್ರಕಾರವೇ **ಅವರೂ ನೀತಿವಂತರೆಂದು** (ದೇವರ ಸಂಗಡ ಸರಿಯಾದ ಸಂಬಂಧ) **ಎಣಿಸಲ್ಪಡುವರು** (*logizomai*). AB ಹೇಳುವದೇನೆಂದರೆ, ಅದು ಅವರ "ಖಾತೆಗೆ ಜಮೆ ಮಾಡಲ್ಪಡುವದು." ದೇವರ ಆಶ್ಚರ್ಯವಾದ ಲೆಕ್ಕದ ವ್ಯವಸ್ಥೆಯು ಎಲ್ಲರಿಗೂ ಲಭ್ಯವಿರುತ್ತದೆ!

**ವಚನ 12.** ಇದರಿಂದ ಯೆಹೂದ್ಯರು ಹೊರಗುಳಿದರೋ? ಇಲ್ಲ, ಅಬ್ರಹಾಮನು ಈಗಲೂ ಸುನ್ನತಿಯವರಿಗೆ ತಂದೆಯಾಗಿದ್ದನು (*patēr*). ಹೇಗೂ, ಅಬ್ರಹಾಮನು ಸುನ್ನತಿಯವರಲ್ಲಿ ಯಾರಾರು ಸುನ್ನತಿ ಹೊಂದಿದ್ದಲ್ಲದೆ ನಮ್ಮ ಪಿತೃವಾಗಿರುವ

ಅಬ್ರಹಾಮನಿಗೆ ಸುನ್ನತಿಯಾಗುವದಕ್ಕೆ ಮುಂಚೆ ಇದ್ದ ನಂಬಿಕೆಯ ಹೆಜ್ಜೆಗಳನ್ನು ಹಿಡಿದು ನಡೆಯುತ್ತಾರೋ ಅವರಿಗೂ ಸಹ ಮೂಲತಂದೆಯಾಗಿದ್ದಾನೆ (ಒತ್ತಿ ಹೇಳಿದ್ದು ನನ್ನದು) ಎಂಬದನ್ನು ಯೆಹೂದ್ಯರು ಗ್ರಹಿಸಿಕೊಳ್ಳಬೇಕಾಗಿತ್ತು. ಯೇಸು ತನ್ನ ಟೀಕೆಕಾರರಿಗೆ ಹೇಳಿದ್ದೇನೆಂದರೆ, "ನೀವು (ನಿಜವಾಗಿಯೂ) ಅಬ್ರಹಾಮನ ಮಕ್ಕಳಾಗಿದ್ದರೆ ಅಬ್ರಹಾಮನು ಮಾಡಿದಂಥ ಕೃತ್ಯಗಳನ್ನು ಮಾಡುತ್ತಿದ್ದಿರಿ" (ಯೋಹಾನ 8:39; NIV). ನಿರ್ದಿಷ್ಟವಾಗಿ, ಅವರು ಅಬ್ರಹಾಮನಿಗೆ (ಆತನು ಇನ್ನೂ) ಸುನ್ನತಿ ಹೊಂದಿರದವನಾಗಿದ್ದಾಗ ಇದ್ದ *ನಂಬಿಕೆ*ಯನ್ನು ಹೊಂದಿರುವ ಅಗತ್ಯವಿತ್ತು.

"ಅಬ್ರಹಾಮನು ನಂಬುವವರೆಲ್ಲರ ತಂದೆ" ಎಂಬುದಕ್ಕೆ ಪೌಲನಿಗಿದ್ದ ಮೊದಲ ಸಾಕ್ಷ್ಯಾಧಾರವು (4:11) ಯಾವದೆಂದರೆ ಆತನು ಒಂದು ಅರ್ಥದಲ್ಲಿ "ಒಬ್ಬ ಯೆಹೂದ್ಯನಾಗುವ" ಅನೇಕ ವರ್ಷಗಳ ಮುಂಚೆಯೇ ನಂಬಿಕೆಯಿಂದ ನೀತಿವಂತ ನಾಗಿದ್ದನು ಎಂಬದೆ. ಆದ್ದರಿಂದ ನೀತಿನಿರ್ಣಯವು ನಂಬಿಕೆಯಿಂದಲೇ ಹೊರತು ಶಾರೀರಿಕವಾಗಿಯಲ್ಲ.[20] ಅನೇಕ ಯೆಹೂದ್ಯರಿಗೆ ಇದು ಆಘಾತಕಾರಿಯಾಗಿ ಕಂಡಿರಬಹುದು, ಏನೆಂದರೆ, ದೇವರು *ಒಬ್ಬ ಸುನ್ನತಿಯಿಲ್ಲದ ವಿಶ್ವಾಸಿಯನ್ನು* ಅಂಗೀಕರಿಸಬಲ್ಲನು ಆದರೆ *ಒಬ್ಬ ಸುನ್ನತಿಯಿರುವ ಅವಿಶ್ವಾಸಿಯನ್ನು ತಿರಸ್ಕರಿಸುವನು!* ಎಂಬದೇ. ಈ ನಿಯಮವು ಈ ದಿನವೂ ಅಷ್ಟೇ ಸತ್ಯವಾಗಿರುತ್ತದೆ. ದೇವರು ಈ ದಿನವೂ "ನಮ್ಮ ಪಿತೃವಾದ ಅಬ್ರಹಾಮನ ನಂಬಿಕೆಯ ಹೆಜ್ಜೆಗಳಲ್ಲಿ ನಡೆಯುವವರನ್ನು" ಸ್ವೀಕರಿಸಿಕೊಳ್ಳುತ್ತಾನೆ.

## ನಂಬಿಕೆಯ ಮೂಲಕ ಮಾಡಲ್ಪಟ್ಟ ವಾಗ್ದಾನ ಹೊರತು ಧರ್ಮಶಾಸ್ತ್ರದಿಂದಲ್ಲ (4:13-15)

**13ನೀನು ಲೋಕಕ್ಕೆ ಬಾಧ್ಯನಾಗುವಿ ಎಂಬ ವಾಗ್ದಾನವು ಅಬ್ರಹಾಮನಿಗಾಗಲಿ ಅವನ ಸಂತತಿಯವರಿಗಾಗಲಿ ಧರ್ಮಶಾಸ್ತ್ರದಿಂದ ಆದದ್ದಲ್ಲ; ನಂಬಿಕೆಯೆಂಬ ನೀತಿಯಿಂದ ಆದದ್ದೇ. 14ಧರ್ಮಶಾಸ್ತ್ರದವರು ಬಾಧ್ಯರಾಗಿದ್ದರೆ ನಂಬಿಕೆಯು ವ್ಯರ್ಥವಾಯಿತು, ವಾಗ್ದಾನವೂ ಬರೀದಾಯಿತು. 15ಯಾಕಂದರೆ ಧರ್ಮಶಾಸ್ತ್ರವು ಜನರನ್ನು ದೇವರ ಕೋಪಕ್ಕೆ ಗುರಿ ಮಾಡುವಂಥದು. ಧರ್ಮಶಾಸ್ತ್ರವಿಲ್ಲದ ಪಕ್ಷದಲ್ಲಿ ಮೀರೋಣವೆಂಬದೂ ಇಲ್ಲ.**

ಯೆಹೂದ್ಯರನ್ನು ಇತರರಿಗಿಂತ ವಿಶೇಷವಾಗಿಸಿದ ಮತ್ತೊಂದು ಸಂಗತಿಯೆಡೆಗೆ ಪೌಲನು ತನ್ನ ಗಮನವನ್ನು ಹರಿಸುತ್ತಾನೆ: ಮೋಶೆಯ ಧರ್ಮಶಾಸ್ತ್ರ. F. F. Bruce ಪ್ರಕಾರವಾಗಿ, ಪೌಲನು ಹೇಳುತ್ತಿರುವದೇನೆಂದರೆ, "ಅಬ್ರಹಾಮನು ದೇವರಿಂದ ನೀತಿವಂತನಾಗುವದರಲ್ಲಿ ಸುನ್ನತಿಗೆ ಯಾವ ಸಂಬಂಧವೇ ಇರಲಿಲ್ಲವಾದಲ್ಲಿ, . . . ಧರ್ಮಶಾಸ್ತ್ರಕ್ಕಂತೂ ಇನ್ನೂ ಅಲ್ಪ ಪಾತ್ರವಿತ್ತು."[21]

**ವಚನ 13.** ಪೌಲನು ಮೊದಲು **ನೀನು ಲೋಕಕ್ಕೆ ಬಾಧ್ಯನಾಗುವಿ ಎಂಬ ವಾಗ್ದಾನವು ಅಬ್ರಹಾಮನಿಗಾಗಲಿ ಅವನ ಸಂತತಿಯವರಿಗಾಗಲಿ**[22] ನೀಡಲಾದ ಕುರಿತು ಮಾತಾಡುತ್ತಾನೆ. ಅನುವಾದಿಸಲ್ಪಟ್ಟ "ವಾಗ್ದಾನ" (ἐπαγγελία, *epangelia*) ಎಂಬುದು

4:13-21 ರಲ್ಲಿ ಮುಖ್ಯ ಪದವಾಗಿದೆ. ಈ ನಾಮವಾಚಕ ಪದವು ನಾಲ್ಕು ಸಾರಿ ಕಂಡುಬರುತ್ತದೆ (4:13, 14, 16, 20), ಅದೇ ವೇಳೆಯಲ್ಲಿ ಕ್ರಿಯಾಪದವಾದ ἐπαγγέλλω (*epangellō*) ಎಂಬುದು ಒಂದೇ ಸಾರಿ ಸಿಕ್ಕುತ್ತದೆ (4:21). ಈ ಪದಗಳು ಕಾಣಿಸಿಕೊಂಡ ಎಲ್ಲಾ ಕಡೆಗಳಲ್ಲಿಯೂ ಅಬ್ರಹಾಮ ಮತ್ತು ಆತನ ಸಂತತಿಯವರು "ಲೋಕಕ್ಕೆಲ್ಲಾ ಬಾಧ್ಯರಾಗುವ" ಕುರಿತಾದ "ವಾಗ್ದಾನ" ವನ್ನು ಸೂಚಿಸುತ್ತದೆ. ಅಧ್ಯಾಯದ ಮಿಕ್ಕ ಭಾಗದಲ್ಲಿ, ನಾವು ಇದನ್ನು "ವಾಗ್ದಾನ" ಎಂದು ಕರೆಯಲಿದ್ದೇವೆ.

ಅಬ್ರಹಾಮನು "ಲೋಕಕ್ಕೆ ಬಾಧ್ಯನಾಗುವನೆಂಬ"[23] ನಿರ್ದಿಷ್ಟವಾದ ವಾಗ್ದಾನವು ಆದಿಕಾಂಡದಲ್ಲಿ ಇರುವದಿಲ್ಲ, ಆದ್ದರಿಂದ ಇದು ಅಬ್ರಹಾಮನಿಗೆ ದೇವರು ಮಾಡಿದ ಅನೇಕ ವಾಗ್ದಾನಗಳನ್ನು ಸಾರಾಂಶಗೊಳಿಸುವದಕ್ಕೆ ಪೌಲನು ಅನುಸರಿಸಿದ ವಿಧವಾಗಿತ್ತು. ಬಹುಶಃ ಇವುಗಳಲ್ಲೊಂದು ಅಪೊಸ್ತಲನ ಮನಸ್ಸಿನಲ್ಲಿ ಅತ್ಯಂಥ ಉನ್ನತ ಸ್ಥಾನ ಹೊಂದಿದ್ದಿರಬಹುದು: "ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು" (ಆದಿಕಾಂಡ 22:18; ಒತ್ತಿ ಹೇಳಿದ್ದು ನನ್ನದು; ನೋಡಿರಿ 12:3). ಬೇರೊಂದು ಕಡೆಯಲ್ಲಿ ಪೌಲನು ಇದೊಂದು ಮೆಸ್ಸೀಯನ ವಾಗ್ದಾನ ಎಂಬದಾಗಿ ಗಮನಕ್ಕೆ ತರುತ್ತಾನೆ: "ದೇವರು ಅಬ್ರಹಾಮನಿಗೂ ಆತನ ಸಂತತಿಗೂ ವಾಗ್ದಾನಗಳನ್ನು ಮಾಡಿದನು. ಆತನು ನಿನ್ನ ಸಂತತಿಗಳಿಗೆ ಎಂದು ಹೇಳಿ ಅನೇಕರನ್ನು ಸೂಚಿಸದೆ ನಿನ್ನ ಸಂತಿತಿಗೆ ಎಂದು ಹೇಳಿ ಒಬ್ಬನನ್ನೇ ಸೂಚಿಸುತ್ತಾನೆ. ಆ ಒಬ್ಬನು ಕ್ರಿಸ್ತನೇ" (ಗಲಾತ್ಯ 3:16).

ಕ್ರಿಸ್ತನ ಮೂಲಕ, ಅಬ್ರಹಾಮನ ಆತ್ಮೀಕ ಸಂತತಿಯು "ಭೂಮಿಗೆ ಬಾಧ್ಯರಾಗುವವರು" (ನೋಡಿರಿ ಮತ್ತಾಯ 5:5). ಪೌಲನು ಕೊರಿಂಥದ ಸಭೆಯವರಿಗೆ ಬರೆದಾಗ, ಹೀಗೆ ಹೇಳಿದನು, "ಸಮಸ್ತವೂ ನಿಮ್ಮದು . . . ಲೋಕವಾಗಲಿ, ಜೀವವಾಗಲಿ, ಮರಣವಾಗಲಿ, ಈಗಿನ ಸಂಗತಿಗಳಾಗಲಿ, ಮುಂದಣ ಸಂಗತಿಗಳಾಗಲಿ ಸಮಸ್ತವೂ ನಿಮ್ಮದೇ" (1 ಕೊರಿಂಥ 3:21, 22). ಸಮಸ್ತವೂ ದೇವರಿಗೆ ಸೇರಿದ್ದು ಮತ್ತು ನಾವು ಆತನ ಮಕ್ಕಳಾಗಿರುವದರಿಂದ ಆ ರೀತಿಯಲ್ಲಿ ಸಮಸ್ತವೂ "ನಮ್ಮದೇ." ದೇವರು ತನ್ನ ಮಕ್ಕಳನ್ನು ಪರಾಂಬರಿಸುತ್ತಾನೆ ಮತ್ತು ನಮಗೆ ಅಗತ್ಯವಾದದ್ದನ್ನು ತಪ್ಪದೆ ಅನುಗ್ರಹಿಸುತ್ತಾನೆ (ಮತ್ತಾಯ 6:25-33).

ದೇವರು ಅಬ್ರಹಾಮ ಮತ್ತು ಆತನ ಸಂತತಿಗೆ ವಾಗ್ದಾನವನ್ನು ಕೊಟ್ಟನು, ಆದರೆ ಅದಕ್ಕೆ ಕಾರಣ ಅವನಿಗೆ ಮೋಶೆಯ ಧರ್ಮಶಾಸ್ತ್ರವು ಕೊಡಲ್ಪಟ್ಟಿತ್ತು ಎಂಬದಾಗಿರಲಿಲ್ಲ.[24] ಅದು **ಧರ್ಮಶಾಸ್ತ್ರದಿಂದ ಆದದ್ದಲ್ಲ** ಎಂದು ಪೌಲನು ಹೇಳುತ್ತಾನೆ: ಅದು ಧರ್ಮಶಾಸ್ತ್ರದ ಮೂಲಕ ಆಗಿರಲಿಕ್ಕೆ ಸಾಧ್ಯವಿರಲಿಲ್ಲ, ಯಾಕೆಂದರೆ ಮುಂದಿನ "ನಾನೂರು ಮೂವತ್ತು ವರ್ಷಗಳ ವರೆಗೆ" ಮೋಶೆಯಿಂದ ಧರ್ಮಶಾಸ್ತ್ರವು ಕೊಡಲ್ಪಟ್ಟಿರಲಿಲ್ಲ (ಗಲಾತ್ಯ 3:17). ಬದಲಾಗಿ, ಪೌಲನು ಹೇಳಿದ್ದೇನೆಂದರೆ ವಾಗ್ದಾನವು **ನಂಬಿಕೆಯೆಂಬ ನೀತಿಯಿಂದ ಆದದ್ದೇ.**

ಮೋಶೆಯ ಧರ್ಮಶಾಸ್ತ್ರವು ಶತಮಾನಗಳ ನಂತರದಲ್ಲಿ ಕೊಡಲ್ಪಟ್ಟಿತೆಂಬ ಅಂಶವು ವಾಗ್ದಾನದೊಂದಿಗೆ ಧರ್ಮಶಾಸ್ತ್ರಕ್ಕೆ ಯಾವ ಸಂಬಂಧವೂ ಇರಲಿಲ್ಲ ಎಂಬದಕ್ಕೆ ಸಾಕಾದ ಸಾಕ್ಷ್ಯಾಧಾರವಾಗಿದೆ. ಪೌಲನಂತೂ ಅಷ್ಟಕ್ಕೆ ನಿಲ್ಲಿಸಲಿಲ್ಲ. ಆತನು ಅದೇ ಅವಕಾಶವನ್ನು ಉಪಯೋಗಿಸಿಕೊಂಡು ಒಂದು ಧರ್ಮಶಾಸ್ತ್ರ/ಕ್ರಿಯೆಗಳ ಮತ್ತು ಕೃಪೆ/ನಂಬಿಕೆಯ

ವ್ಯವಸ್ಥೆಗಳ ನಡುವಿನ ವ್ಯತ್ಯಾಸ ತೋರಿಸುವದನ್ನು ಮುಂದುವರೆಸುತ್ತಾನೆ. ಮೂಲಪ್ರತಿಯಲ್ಲಿ, 13 ಮತ್ತು 14 ವಚನಗಳಲ್ಲಿ "ಧರ್ಮಶಾಸ್ತ್ರ" (νόμος, *nomos*) ಎಂಬದರ ಮುಂಚೆ ಯಾವದೇ ನಿಖರ ಲೇಖನ (ಆಂಗ್ಲದಲ್ಲಿ "the") ಎಂಬುದಿಲ್ಲ. ಸನ್ನಿವೇಶವು ನಮಗೆ ಅಲ್ಲಿ ಪೌಲನು ಪ್ರಾಥಮಿಕವಾಗಿ ಮೋಶೆಯ ಧರ್ಮಶಾಸ್ತ್ರವನ್ನು ಮನಸ್ಸಿನಲ್ಲಿ ಹೊಂದಿದ್ದನೆಂಬದನ್ನು ಖಚಿತಪಡಿಸುತ್ತದೆ, ಆದರೆ "the" ಎಂಬ ನಿಖರ ಲೇಖನ ಇಲ್ಲದಿರುವದು ಅದನ್ನು ಸಾಮಾನ್ಯ ಅರ್ಥದಲ್ಲಿ ಕೂಡಾ ಅನ್ವಯಿಸಿಕೊಳ್ಳಬಹು ದೆಂದು ಸೂಚಿಸುವದಾಗಿದೆ. ವಾಗ್ದಾನದ ನೆರವೇರುವಿಕೆಯು ಧರ್ಮಶಾಸ್ತ್ರವನ್ನು ಪಾಲಿಸುವದರ ಮೇಲೆ ಅವಲಂಭಿತವಾಗಿದ್ದರೆ, ವಾಗ್ದಾನವು ಸದಾಕಾಲವೂ ನೆರವೇರದೆಯೇ ಉಳಿಯುತ್ತಿತ್ತು ಯಾಕೆಂದರೆ ಯಾರೂ-ಅಬ್ರಹಾಮನು ಸಹ-ದೋಷವಿಲ್ಲದೆ ಧರ್ಮಶಾಸ್ತ್ರವನ್ನು (ಯಾವದೇ ಧರ್ಮಶಾಸ್ತ್ರ) ಕೈಕೊಂಡು ನಡೆಯುವದಕ್ಕೆ ಸಾಧ್ಯವಿರಲಿಲ್ಲ. ಪೌಲನ ಮುಕ್ತಾಯವೇನಾಗಿತ್ತೆಂದರೆ, ವಾಗ್ದಾನದ ನೆರವೇರುವಿಕೆಯು ಕೃಪೆ/ನಂಬಿಕೆಯ ವ್ಯವಸ್ಥೆಯ ಮೇಲೆ ಆಧಾರವಾಗಿತ್ತು: ಅದು "ನಂಬಿಕೆಯೆಂಬ ನೀತಿಯಿಂದ ಆದದ್ದೇ."

**ವಚನ 14.** ಪೌಲನು **ಧರ್ಮಶಾಸ್ತ್ರದವರು** ಎಂಬ ಮಾತನ್ನು ಉಪಯೋಗಿಸಿದಾಗ, ಆತನು ಪ್ರಾಥಮಿಕವಾಗಿ ಮನಸ್ಸಿನಲ್ಲಿ ಯೆಹೂದ್ಯರನ್ನಿಟ್ಟುಕೊಂಡು ಹೇಳುತ್ತಿದ್ದಾನೆ (ನೋಡಿರಿ 4:16). ಹೇಗೂ, ವಚನ 14 ರಲ್ಲಿ "ಧರ್ಮಶಾಸ್ತ್ರ" ಎಂಬುದು ಮೂಲಪ್ರತಿಯಲ್ಲಿ ಸಾಮಾನ್ಯ ಪದವಾಗಿ ಉಪಯೋಗಿಸಲ್ಪಟ್ಟಿರುವದರಿಂದ, ಅದು ಒಂದು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯನ್ನು ಅವಲಂಭಿಸಿದ ಯಾರನ್ನಾದರೂ ಸೂಚಿಸುವದಾಗಿದೆ ಎಂದು ಹೇಳಬಹುದು. ವಾಗ್ದಾನವನ್ನು ಪಡೆಯುವದು ಧರ್ಮಶಾಸ್ತ್ರ/ಕ್ರಿಯೆಗಳ ಆಧಾರದಲ್ಲಾಗಿದ್ದರೆ, ಆಗ ಎರಡು ಫಲಿತಗಳು ಸಂಭವಿಸುತ್ತಿದ್ದವು.

ಒಂದು, **ನಂಬಿಕೆ**ಯು ವ್ಯರ್ಥಗೊಳಿಸಲ್ಪಡುತ್ತಿತ್ತು (κενόω, *kenoō*). ಗ್ರೀಕ್ ಪದವು ಮೂಲತಃ "ಬರಿದುಗೊಳಿಸು" ಎಂಬ ಅರ್ಥವನ್ನು ಕೊಡುತ್ತದೆ.[25] AB ಯಲ್ಲಿ "ಎಲ್ಲಾ ಅರ್ಥಗಳನ್ನು ಟೊಳ್ಳು ಮಾಡುತ್ತಿತ್ತು" ಎಂದಿದೆ. ಒಂದು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆ ಹಾಗೂ ಕೃಪೆ/ನಂಬಿಕೆಯ ವ್ಯವಸ್ಥೆಗಳು ಒಂದಕ್ಕೊಂದು ಹೊಂದಾಣಿಕೆಯಾಗಲಾರವು. ಒಂದು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆ ಸ್ಥಾಪಿಸಲ್ಪಟ್ಟರೆ, ಕೃಪೆ/ನಂಬಿಕೆಯ ವ್ಯವಸ್ಥೆಯು ಅಳಿಸಿ ಹಾಕಲ್ಪಡುವದು (ಅದರ ಅರ್ಥವು ನಾವು ಸರ್ವನಾಶವಾದೆವು ಎಂಬದಾಗಿ, ಯಾಕೆಂದರೆ ಯಾರೂ ಧರ್ಮಶಾಸ್ತ್ರವನ್ನು ಪರಿಪೂರ್ಣವಾಗಿ ಕೈಕೊಳ್ಳಲು ಸಾಧ್ಯವಿಲ್ಲ).

ಎರಡನೆಯ ಫಲಿತವು ಏನಾಗುವದೆಂದರೆ, **ವಾಗ್ದಾನವೂ ಬರೀದಾಯಿತು.** "ಬರೀದಾಯಿತು" ಎಂಬುದು καταργέω (*katargeō*) ಎಂಬದರಿಂದ ಅನುವಾದಿಸ ಲ್ಪಟ್ಟಿದೆ, ಅದೊಂದು ಸಂಯುಕ್ತ ಪದವಾಗಿದ್ದು κατά (*kata*, "ಇಳಿಸು") ಹಾಗೂ ἀργός (*argos*, "ನಿಷ್ಕ್ರೀಯ") ಎಂಬ ಎರಡು ಪದಗಳನ್ನೊಳಗೊಂಡಿರುತ್ತದೆ. ಅದು ಅಕ್ಷರಶಃ "ಕ್ರಿಯೆಯಿಲ್ಲದಂತೆ ಮಾಡು" ಎಂದರ್ಥವಾಗಿರುತ್ತದೆ.[26] Bauerನ ಶಬ್ಧಕೋಶವು ಈ ಪದವನ್ನು ಹೀಗೆ ವ್ಯಾಖ್ಯಾನಿಸುತ್ತದೆ, "ಅಸಿಂಧುಗೊಳಿಸು" ಅಥವಾ "ಶಕ್ತಿಹೀನಗೊಳಿಸು".[27] ಅಬ್ರಹಾಮನು ದೇವರ ಧರ್ಮಪ್ರಮಾಣಗಳನ್ನು ಪರಿಪೂರ್ಣವಾಗಿ ಕೈಕೊಂಡು

ನಡೆದನೆಂಬ ಕಾರಣಕ್ಕೆ ಆತನಿಗೆ ವಾಗ್ದಾನವು ಕೊಡಲ್ಪಟ್ಟಿರಲಿಲ್ಲ, ಆದರೆ ಆತನು ನಂಬಿಕೆಯಿಟ್ಟದ್ದರಿಂದಲೇ ಆಗಿತ್ತು (ನೋಡಿರಿ ಗಲಾತ್ಯ 3:18). ಪೌಲನು ಏನು ಹೇಳುತ್ತಿದ್ದಾನೆಂದರೆ ನಾವು ವಾಗ್ದಾನವನ್ನು ಪಡೆಯುವದು ಧರ್ಮಶಾಸ್ತ್ರ ಕೈಕೊಂಡು ನಡೆಯುವದರ ಮೇಲೆ ಅವಲಂಭಿತವಾಗಿದ್ದರೆ (ನಾವು ಹೇಳಿಕೊಳ್ಳುವ ಪ್ರಕಾರ) "ಅದನ್ನು ಮರೆತುಬಿಡಬೇಕು" -ಯಾಕೆಂದರೆ ಅದು ಎಂದಿಗೂ ನೆರವೇರುವದಿಲ್ಲ.

**ವಚನ 15.** ಅದು ಹಾಗೇಕೆ ಆಗಿತ್ತು? ಯಾಕೆಂದರೆ ಧರ್ಮಶಾಸ್ತ್ರ ಕೈಕೊಂಡು ನಡೆಯುವದು ಆಶೀರ್ವಾದಗಳನ್ನುಂಟು ಮಾಡುವದರ ಬದಲಿಗೆ, **ಧರ್ಮಶಾಸ್ತ್ರವು . . . ದೇವರ ಕೋಪಕ್ಕೆ** (ὀργή, *orgē*) **ಗುರಿಮಾಡುವಂಥದು** ಎಂದು ಪೌಲನು ಹೇಳಿದನು. ಈ ವಚನವು "ಧರ್ಮಶಾಸ್ತ್ರ" ಎಂಬುದರ ಮುಂಚೆ ನಿಖರ ಲೇಖನವನ್ನು ("The") ಹೊಂದಿರುವದಿಲ್ಲ, ಆದ್ದರಿಂದ ಪೌಲನು ಧರ್ಮಶಾಸ್ತ್ರ/ಕ್ರಿಯೆಗಳ ವಿಷಯದಲ್ಲಿ ಮೋಶೆಯ ಧರ್ಮಶಾಸ್ತ್ರವನ್ನು ಹೊರತುಪಡಿಸುವ ಮಾನದಂಡವೆಂದು ಪರಿಗಣಿಸಿದ್ದ ಯೆಹೂದ್ಯರನ್ನು ನೇರವಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದಾನೆ.

ಪೌಲನು "ಧರ್ಮಶಾಸ್ತ್ರವು ದೇವರ ಕೋಪಕ್ಕೆ ಗುರಿಮಾಡುತ್ತದೆ" ಎಂದು ಹೇಳಿದಾಗ, ಆತನು ಮೋಶೆಯ ಧರ್ಮಶಾಸ್ತ್ರಕ್ಕೆ ಯಾವ ಬೆಲೆಯೂ ಇಲ್ಲವೆಂದು ಹೇಳುತ್ತಿಲ್ಲ (ನೋಡಿರಿ 7:12); ಯಾಕೆಂದರೆ ಅದು ದೇವರಿಂದಲೇ ಕೊಡಲ್ಪಟ್ಟಿತ್ತಷ್ಟೇ. ಬದಲಾಗಿ, ಆತನು ಏನು ಹೇಳುತ್ತಿದ್ದಾನೆಂದರೆ, ಯಾವನೂ ಧರ್ಮಶಾಸ್ತ್ರಕ್ಕೆ ಪರಿಪೂರ್ಣ ವಾಗಿ ವಿಧೇಯನಾಗಲು ಸಾಧ್ಯವಿಲ್ಲವಾದ್ದರಿಂದ, ಅಂತ್ಯದಲ್ಲಿ ಧರ್ಮಶಾಸ್ತ್ರದಿಂದ ಉಂಟಾಗುವದು ಕೋಪವೇ. ಈ ಪರಿಕಲ್ಪನೆಯನ್ನು ಮುಂದೆ 7ನೇ ಅಧ್ಯಾಯದಲ್ಲಿ ಹೆಚ್ಚು ಪೂರ್ಣವಾಗಿ ಚರ್ಚಿಸಲಾಗುವದು. ಈಗ ಸಧ್ಯಕ್ಕೆ, ಈ ರೀತಿಗಳಲ್ಲಿ "ಧರ್ಮಶಾಸ್ತ್ರವು ಕೋಪಕ್ಕೆ ಗುರಿಮಾಡುವದು" ಎಂಬದನ್ನು ಗಮನಿಸೋಣ:

> ಪಾಪದ ಅರುಹು ಉಂಟುಮಾಡುವ ಮೂಲಕ, ಪಾಪ ಏನೆಂದು ತೋರಿಸಿ ಕೊಡುವ ಮೂಲಕ (3:20).
>
> ಒಂದು ಅರ್ಥದಲ್ಲಿ, ಅದು ಪಾಪ ಮಾಡುವಂತೆ ಪ್ರೋತ್ಸಾಹಿಸುತ್ತದೆ, ಹೇಗೆ ಮಕ್ಕಳಿಗೆ ಇಂಥಿಂಥದನ್ನು ಮಾಡಬೇಡವೆಂದರೆ ಅವರು ವಿರುದ್ಧವಾಗಿಯೇ ನಡೆದುಕೊಳ್ಳು ವರೋ ಹಾಗೆಯೇ (5:20; 7:5).
>
> ಅದು ಪಾಪವನ್ನು ಖಂಡಿಸುತ್ತದೆ (ನೋಡಿರಿ ಧರ್ಮೋ 28:58,59).

ಧರ್ಮಶಾಸ್ತ್ರದಲ್ಲಿರುವ ಸಮಸ್ಯೆಯೇನೆಂದರೆ ಅದು "ಸಮಸ್ಯೆಯು ಏನೆಂದು ಕಂಡು ಹಿಡಿದು ಹೇಳಬಹುದು ಆದರೆ ಯಾವ ಪರಿಹಾರವನ್ನು ಸಹ ಕೊಡುವದಕ್ಕಾಗುವದಿಲ್ಲ."[28]

"ಧರ್ಮಶಾಸ್ತ್ರವು ಕೋಪಕ್ಕೆ ಗುರಿಮಾಡುವದು" ಎಂದು ಹೇಳಿಯಾದ ಮೇಲೆ, ಪೌಲನು ವಾಚಕರಿಗೆ ಗೊಂದಲವನ್ನುಂಟು ಮಾಡಿದ ಒಂದು ಹೇಳಿಕೆಯನ್ನು ನೀಡುತ್ತಾನೆ: **ಧರ್ಮಶಾಸ್ತ್ರವಿಲ್ಲದ ಪಕ್ಷದಲ್ಲಿ ಮೀರೋಣವೆಂಬದೂ ಇಲ್ಲ.** "ಮೀರೋಣ" ಎಂಬ ಅನುವಾದಿಸಲ್ಪಟ್ಟ ಪದವು παράβασις (*parabasis*) ಎಂಬುದು ,ಇದು ಅನೇಕ ವೇಳೆ

"ಅಪರಾಧ" ಎಂದು ಅನುವಾದಿಸಲ್ಪಟ್ಟಿ ರುತ್ತದೆ (ನೋಡಿರಿ ಗಲಾತ್ಯ 3:19; 1 ತಿಮೊಥೆ 2:14; ಇಬ್ರಿಯ 2:2; 9:15; NASB). ಈ ಪದವು ಧರ್ಮಶಾಸ್ತ್ರದ *ನೇರ ಉಲ್ಲಂಘನೆಯನ್ನು* ಸೂಚಿಸುತ್ತದೆ.

ಬಹುಶಃ ನಾವು ಈ ವಿಚಾರವನ್ನು ವಿಸ್ತಾರವಾಗಿ ಅಭ್ಯಾಸಿಸುವದಾದರೆ ಪೌಲನ ತಾತ್ಪರ್ಯವನ್ನು ಇನ್ನಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳುವೆವು. ಗ್ರೀಕ್ ಪ್ರತಿಯಲ್ಲಿ "ಧರ್ಮಶಾಸ್ತ್ರ" ಎಂಬದರ ಮುಂಚೆ ನಿಖರ ಲೇಖನ ("ದಿ") ಎಂಬುದಿಲ್ಲವಾದ್ದರಿಂದ, ಪೌಲನು ಸಾಮಾನ್ಯ ಅರ್ಥದಲ್ಲಿ ಧರ್ಮಶಾಸ್ತ್ರದ ಒಂದು ನಿಯಮವನ್ನು ಸೂಚಿಸಿ ಹೇಳುತ್ತಿದ್ದಾನೆ.

> "ಧರ್ಮಶಾಸ್ತ್ರವಿಲ್ಲದ ಪಕ್ಷದಲ್ಲಿ ಮೀರೋಣವೆಂಬದೂ . . . ಇಲ್ಲ." ಇದರಿಂದ ನಾವು ಧರ್ಮಶಾಸ್ತ್ರವಿದ್ದಲ್ಲಿ ಮೀರುವಿಕೆ ಸಹ ಇರುತ್ತದೆಂಬ ಮುಕ್ತಾಯಕ್ಕೆ ಬರಬಹುದು.
>
> ಎಲ್ಲಾ ಮನುಷ್ಯರಿಗೂ ಧರ್ಮಪ್ರಮಾಣಗಳಿದ್ದವು, ಲಿಖಿತ ಅಥವಾ ಲಿಖಿತವಲ್ಲದ-ಆದರೆ ಯಾವನೂ ತನ್ನ ವಶದಲ್ಲಿರುವ ಧರ್ಮಪ್ರಮಾಣಗಳಿಗೆ ದೋಷವಿಲ್ಲದೆ ವಿಧೇಯನಾಗಿರುವದಿಲ್ಲ.ಅಂತಿಮವಾಗಿ, ಎಲ್ಲರೂ ಧರ್ಮಶಾಸ್ತ್ರದ ಮೀರಿದವರೇ ಆಗಿದ್ದಾರೆ.
>
> ವಿಷಯವು ಹಾಗಿರುವಾಗ, ಧರ್ಮಶಾಸ್ತ್ರವು ಎಲ್ಲರನ್ನೂ ಕೋಪಕ್ಕೆ ಗುರಿಮಾಡುತ್ತದೆ.

## ಅಬ್ರಹಾಮನು, ಎಲ್ಲಾ ನಿಜ ವಿಶ್ವಾಸಿಗಳಿಗೆ ಪಿತೃ (4:16-25)

**[16]ಆದಕಾರಣ ಆ ಬಾಧ್ಯತೆಯು ಕೃಪೆಯಿಂದಲೇ ದೊರೆಯುವಂಥದಾಗಿರುವಂತೆ ಅದು ನಂಬಿಕೆಯ ಮೂಲಕ ಸಿಕ್ಕುತ್ತದೆ. ಹೀಗೆ ಆ ವಾಗ್ದಾನವು ಅಬ್ರಹಾಮನ ಸಂತತಿಯವರೆಲ್ಲರಿಗೂ, ಅಂದರೆ ಧರ್ಮಶಾಸ್ತ್ರವನ್ನು ಆಧಾರಮಾಡಿಕೊಂಡವರಿಗೆ ಮಾತ್ರವಲ್ಲದೆ ಅಬ್ರಹಾಮನಲ್ಲಿದ್ದಂಥ ನಂಬಿಕೆಯುಳ್ಳವರಿಗೆ ಸಹ ಸ್ಥಿರವಾಗಿ ನಿಲ್ಲುವದು.**

**[17]ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರದಲ್ಲಿ ಬರೆದಿರುವ ಪ್ರಕಾರ ಅಬ್ರಹಾಮನು ನಮ್ಮೆಲ್ಲರಿಗೂ ದೇವರ ಸನ್ನಿಧಿಯಲ್ಲಿ ಮೂಲ ಪಿತೃವಾಗಿದ್ದಾನೆ. ದೇವರು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇದ್ದಾನೆಂದು ಅಬ್ರಹಾಮನು ನಂಬಿದನು. [18]ನಿನ್ನ ಸಂತಾನವು ನಕ್ಷತ್ರಗಳಷ್ಟಾಗುವದು ಎಂಬದಾಗಿ ತನಗೆ ಹೇಳಲ್ಪಟ್ಟ ಮಾತು ನೆರವೇರುವದಕ್ಕೆ ಮಾರ್ಗ ತೋರದೆ ಇರುವದರಿಂದ ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು. [19]ಅವನು ಹೆಚ್ಚುಕಡಿಮೆ ನೂರುವರುಷದವನಾಗಿದ್ದು ತನ್ನ ದೇಹವು ಆಗಲೇ**

ಮೃತಪ್ರಾಯವಾಯಿತೆಂದೂ ಸಾರಳಿಗೆ ಗರ್ಭಕಾಲ ಕಳೆದು ಹೋಯಿತೆಂದೂ ಯೋಚಿಸಿದಾಗ್ಯೂ ಅವನ ನಂಬಿಕೆಯು ಕುಂದಲಿಲ್ಲ. [20]ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ. [21]ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು ಪೂರಾ ಭರವಸವಿಟ್ಟು ದೃಢನಂಬಿಕೆಯುಳ್ಳವನಾದನು. [22]ಆದದರಿಂದ ಆ ನಂಬಿಕೆಯು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು. [23]ಆದರೆ ಅದು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತೆಂಬದು ಅವನಿಗೋಸ್ಕರ ಮಾತ್ರವಲ್ಲದೆ ನಮಗೋಸ್ಕರವೂ ಬರೆದಿರುವದು. [24]ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರನ್ನು ನಂಬುವ ನಮಗೂ ನಂಬಿಕೆಯು ನೀತಿಯೆಂದು ಎಣಿಸಲ್ಪಡುವದು. [25]ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು.**

**ವಚನ 16.** ಪೌಲನು ತಾನು ಮುಂಚೆ ಮುಕ್ತಾಯಗೊಳಿಸಿದ್ದರ ಮೇಲೆ ಮತ್ತಷ್ಟು ಸೇರಿಸುವವನಾಗಿ **ಆದಕಾರಣ . . . ಅದು ನಂಬಿಕೆಯ ಮೂಲಕ ಸಿಕ್ಕುತ್ತದೆ** ಎಂದು ಹೇಳುತ್ತಾನೆ. "ಆದಕಾರಣ" ಎಂಬುದು ಧರ್ಮಶಾಸ್ತ್ರವು ಆಶೀರ್ವಾದವನ್ನಲ್ಲ ಆದರೆ ಕೋಪವನ್ನು ತರುತ್ತದೆ (4:15) ಎಂಬದನ್ನು ಸೂಚಿಸುತ್ತದೆ. "ಅದು" ಎಂಬ ಸರ್ವನಾಮವು ಪುನಃ ವಾಗ್ದಾನವನ್ನು ಪಡೆದುಕೊಳ್ಳುವ ವಿಚಾರವನ್ನು ಬೆರಳುಮಾಡಿ ತೋರಿಸುತ್ತದೆ. ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯು ಕೋಪಕ್ಕೆ ಮಾತ್ರವೇ ಗುರಿಮಾಡುವದಾದಲ್ಲಿ, ವಾಗ್ದಾನವು ಒಂದು ಕೃಪೆಯ/ನಂಬಿಕೆಯ ವ್ಯವಸ್ಥೆಯಿಂದ ಮಾತ್ರವೇ ನೆರವೇರಿಸಲ್ಪಡಬಲ್ಲದ್ದಾಗಿದೆ. Goodspeed ತರ್ಜುಮೆಯು ಇದನ್ನು ಹೀಗೆ ಅನುವಾದಿಸುತ್ತದೆ, "ಆದ್ದರಿಂದಲೇ ಇದೆಲ್ಲವೂ ನಂಬಿಕೆಯ ಮೇಲೆಯೇ ತಿರಿಗಿಕೊಳ್ಳುತ್ತದೆ."

ಆ ವಾಗ್ದಾನವು **ಕೃಪೆಯಿಂದಲೇ ದೊರೆಯುವಂಥದಾಗಿರುವಂತೆ** ನಂಬಕೆಯ ಮೂಲಕವೇ ಸಿಕ್ಕುತ್ತದೆ. Phillips ಇದನ್ನು ಹೀಗೆ ತರ್ಜುಮೆಗೊಳಿಸುತ್ತದೆ, "ಮಾನವನ ಕಡೆಯಿಂದ ನಂಬಿಕೆಯ ಒಂದು ವಿಷಯ ಮತ್ತು ದೇವರ [ಕಡೆಯಿಂದ] ಉದಾರತೆ ಆಗಿರುತ್ತದೆ." ವಾಗ್ದಾನವು ಅಬ್ರಹಾಮನಿಗೆ ಅನುಗ್ರಹಿಸಲಾದ ಒಂದು ವರದಾನವಾಗಿತ್ತು- ಆತನು ಏನು ಮಾಡಿದ್ದಾನೆಂಬದರ ಆಧಾರದಲ್ಲಿ ಅಲ್ಲ, ಆದರೆ ಆತನ ನಂಬಿಕೆಯ ಆಧಾರದ ಮೇಲೆಯೇ. ಯೆಹೂದ್ಯರು ತಾವು "ಕೃಪೆಯಿಂದ ರಕ್ಷಿಸಲ್ಪಟ್ಟಿದ್ದಾರೆಯೇ ಹೊರತು ಕುಲದಿಂದಾಗಿ ಅಲ್ಲ (saved by grace, not race)"[29] ಎಂಬದನ್ನು ಅರ್ಥಮಾಡಿಕೊಳ್ಳುವ ಅಗತ್ಯವಿತ್ತು (ನೋಡಿರಿ ಲೂಕ 3:7-9). ಅಲ್ಲದೆ ನಾವು ಸಹ ಅರ್ಥಮಾಡಿಕೊಳ್ಳಬೇಕು, ಏನೆಂದರೆ ನಮ್ಮ ರಕ್ಷಣೆಯು ಕೃಪೆಯಿಂದಲೇ ದೊರಕುವಂಥದಾಗಿ ರುವಂತೆ "ನಂಬಿಕೆಯ ಮೂಲಕವೇ" ಆಗಿರುತ್ತದೆ!

ವಾಗ್ದಾನದ ನೆರವೇರುವಿಕೆಯು ನಂಬಿಕೆ ಮತ್ತು ಕೃಪೆಗಳ ಮೂಲಕ ಆಯಿತು, **ಹೀಗೆ ಆ ವಾಗ್ದಾನವು ಅಬ್ರಹಾಮನ ಸಂತತಿಯವರೆಲ್ಲರಿಗೂ . . . ಸ್ಥಿರವಾಗಿ ನಿಲ್ಲುವದು.** ಒಂದು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯು ವಾಗ್ದಾನವನ್ನು *ಬರಿದುಗೊಳಿಸುವದು* (4:14), ಆದರೆ

ಕೃಪೆಯ/ನಂಬಿಕೆಯ ವ್ಯವಸ್ಥೆಯು ಆದನ್ನು *ಸ್ಥಿರವಾಗಿ ನಿಲ್ಲಿಸುವದು.* "ಸಂತತಿಯವರು" ಎಂಬುದು σπέρμα (*sperma*) ಎಂಬದರಿಂದ ಅನುವಾದಿಸಲ್ಪಟ್ಟಿದೆ, ಅದು "ಸಂತಾನ" ಎಂಬುದನ್ನು ಸೂಚಿಸುವದಕ್ಕೆ ಉಪಯೋಗಿಸುವ ಪದ (ನೋಡಿರಿ KJV). ಅದು ಸಾಮಾನ್ಯವಾಗಿ ಒಬ್ಬರು ಅಥವಾ ಹೆಚ್ಚು ಶಾರೀರಿಕ ಸಂತಾನದ (ಮಕ್ಕಳನ್ನು) ಸೂಚಿಸುತ್ತದೆ, ಆದರೆ ಇಲ್ಲಿ ಆ ಪದವು *ಆತ್ಮೀಕ ಸಂತತಿ* ಯನ್ನು ಸೂಚಿಸುತ್ತದೆ.

ಸ್ಥಿರವಾಗಿ ನಿಲ್ಲುವದೆಂಬ ಖಚಿತತೆಯು **ಧರ್ಮಶಾಸ್ತ್ರವನ್ನು ಆಧಾರಮಾಡಿಕೊಂಡ ವರಿಗೆ ಮಾತ್ರವಲ್ಲದೆ ಅಬ್ರಹಾಮನಲ್ಲಿದ್ದಂಥ ನಂಬಿಕೆಯುಳ್ಳವರಿಗೆ ಸಹ** ಆಗಿರುತ್ತದೆ. ಈ ವಚವನದಲ್ಲಿ "ಧರ್ಮಶಾಸ್ತ್ರ" ಎಂಬುದಕ್ಕೆ ಮುಂಚೆ ನಿಖರ ಲೇಖನ ("The") ಇರುತ್ತದೆ, ಆದ್ದರಿಂದ ಪೌಲನು ವಿಶೇಷವಾಗಿ ಯೆಹೂದ್ಯರನ್ನು ಸೂಚಿಸಿ ಹೇಳುತ್ತಿದ್ದಾನೆ. ಕೆಲವರು 16ನೇ ವಚನವು ರಕ್ಷಣೆಗೆ ಎರಡು ದಾರಿಗಳಿವೆಯೆಂದು ಉಪದೇಶಿಸುವ ಹಾಗೆ ತಿರುಚುವದಕ್ಕೆ ಪ್ರಯತ್ನಿಸಿರುತ್ತಾರೆ: ಯೆಹೂದ್ಯರಿಗೋಸ್ಕರ ಒಂದು ದಾರಿ ಮತ್ತು ಅನ್ಯಜನರಿಗೋಸ್ಕರ ಮತ್ತೊಂದು. ಒಬ್ಬನು ಇಡೀ ಅಧ್ಯಾಯವನ್ನು ಓದಿದ ಬಳಿಕವೂ ಹೇಗೆ ಈ ರೀತಿಯ ಮುಕ್ತಾಯಕ್ಕೆ ಬರಬಲ್ಲನೆಂಬದು ನಿಜಕ್ಕೂ ವಿವರಿಸಲಿಕ್ಕಾಗದ್ದಾಗಿದೆ. ಪೌಲನು "ಧರ್ಮಶಾಸ್ತ್ರವನ್ನು ಆಧಾರಮಾಡಿಕೊಂಡಿರುವವರು" ಎಂದು ಹೇಳಿದಾಗ, ಆತನು ಮನಸ್ಸಿನಲ್ಲಿ ಯೇಸುವನ್ನು ನಂಬಿದ್ದ ಯೆಹೂದ್ಯರನ್ನಿಟ್ಟುಕೊಂಡು ಆ ಮಾತನ್ನು ಹೇಳಿದ್ದನು.

ದೃಢನಿಶ್ಚಯವು ಯೇಸುವಿನಲ್ಲಿ ನಂಬಿಕೆಯಿಟ್ಟಿರುವ ಯೆಹೂದ್ಯರಿಗೆ ಮಾತ್ರವಲ್ಲದೆ, "ತಮ್ಮ ಪಿತೃವಾಗಿರುವ ಅಬ್ರಹಾಮನಲ್ಲಿದ್ದಂಥ ನಂಬಿಕೆಯ ಹೆಜ್ಜೆಗಳಲ್ಲಿ ನಡೆಯುವವರಾದ" ಅನ್ಯಜನರಿಗೆ ಸಹ ಆಗಿರುತ್ತದೆ (4:12). ಅಬ್ರಹಾಮನು ಹೀಗೆ "ನಮ್ಮೆಲ್ಲರಿಗೆ ಆತ್ಮೀಕ ತಂದೆಯಾಗಿದ್ದಾನೆ"; ಅಂದರೆ, ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ, ನಂಬುವವರೆಲ್ಲರಿಗೂ ತಂದೆಯಾಗಿದ್ದಾನೆ.

**ವಚನ 17.** ಇದು ಅಬ್ರಹಾಮನಿಗೆ ಕೊಡಲ್ಪಟ್ಟಿರುವ ವಾಗ್ದಾನಗಳೊಂದರಲ್ಲಿ ಮುಂತಿಳಿಸಲ್ಪಟ್ಟಿದೆಯೆಂದು ಪೌಲನು ಹೇಳುತ್ತಾನೆ: "**ನಾನು ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲ ಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರದಲ್ಲಿ ಬರೆದಿರುವ ಪ್ರಕಾರ.**" ಈ ಪ್ರಕ್ಷೇಪ ಉಲ್ಲೇಖವು ಅಬ್ರಹಾಮನು ತೊಂಬತ್ತೊಂಬತ್ತು ವರ್ಷದವನಾಗಿದ್ದಾಗ ದೇವರು ಆತನಿಗೆ ಕಾಣಿಸಿಕೊಂಡು ಆತನ ಸಂಗಡ ತನ್ನ ಒಡಂಬಡಿಕೆಯನ್ನು ವಿನೂತನಗೊಳಿಸಿದ ಸಂದರ್ಭವಾಗಿರುತ್ತದೆ. ಆ ಸಂದರ್ಭದಲ್ಲಿ ದೇವರು ಅಬ್ರಹಾಮನಿಗೆ ಹೇಳಿದ್ದೇನೆಂದರೆ, "ನಿನ್ನನ್ನು ಅನೇಕ ಜನಾಂಗಗಳಿಗೆ ಮೂಲಪಿತೃವಾಗಿ ನೇಮಿಸಿರುವದರಿಂದ" (ಆದಿಕಾಂಡ 17:5). "ನೇಮಿಸಿರುವದರಿಂದ" ಎಂಬುದು ಇಬ್ರಿಯ ಪ್ರತಿಯಲ್ಲಿ ಒಂದು ಪರಿಪೂರ್ಣ ಪ್ರವಾದಾತ್ಮಕ ಕ್ರಿಯಾಪದವಾಗಿ ಅನುವಾದಿಸಲ್ಪಟ್ಟಿದೆ. ದೇವರ ವಾಗ್ದಾನವು ನೆರವೇರುತ್ತದೆಂಬದು ಎಷ್ಟೊಂದು ನಿಶ್ಚಯವಾಗಿತ್ತೆಂದರೆ, ಆತನು ಅದು ಈಗಾಗಲೇ ನೆರವೇರಿಬಿಟ್ಟಿದೆ ಎಂಬಂತೆ ಹೇಳಿದನು.

ಅಬ್ರಹಾಮನು "ಅನೇಕ ಜನಾಂಗಗಳಿಗೆ" ಶಾರೀರಿಕ ತಂದೆಯಾದನು. ಆತನು ತನ್ನ ಮಗನಾದ ಇಸಾಕನ ಹಾಗೂ ತನ್ನ ಮೊಮ್ಮಗನಾಗ ಯಾಕೋಬನ ಮೂಲಕವಾಗಿ ಇಸ್ರಾಯೇಲ್ ಜನಾಂಗದ ಪಿತೃವಾಗಿದ್ದನು. ಇನ್ನೊಬ್ಬ ಮಗನಾದ ಇಸ್ಮಾಯೇಲನು,

“ಅರಬ್ಬರ ಮೂಲಪಿತೃವೆಂದು ಪರಿಗಣಿಸಲ್ಪಟ್ಟಿದ್ದಾನೆ.”[30] ಅಬ್ರಹಾಮನು ಕೆಟೂರಳೆಂಬ ಇನ್ನೊಬ್ಬ ಹೆಂಡತಿಯಲ್ಲಿ ಬೇರೆ ಪುತ್ರರನ್ನು ಪಡೆದನು (ಆದಿಕಾಂಡ 25:1-4); ಇವರಲ್ಲೊಬ್ಬನು ಮಿದ್ಯಾನ್ಯರ ಮೂಲಪಿತೃವಾಗಿದ್ದನು. ಅಬ್ರಹಾಮನ ಮೊಮ್ಮಗನಾದ ಏಸಾವನ ಸಂತತಿಯವರು ಎದೋಮ್ಯ ಜನಾಂಗವಾದರು (ಆದಿಕಾಂಡ 36).

ಹೇಗೂ, ಆತ್ಮನಿಂದ ನಡಿಸಲ್ಪಟ್ಟವನಾಗಿ, ಪೌಲನು ಆತ್ಮೀಕ ಪ್ರವಾದನೆಯು ಆದಿಕಾಂಡ 17:5 ರಲ್ಲಿ ಅಡಕವಾಗಿತ್ತೆಂದು ಹೇಳಿದನು: ಅಬ್ರಹಾಮನು “ಅನೇಕ ಜನಾಂಗಗಳಿಗೆ (*ಆತ್ಮೀಕ)* ತಂದೆ” ಸಹ ಆಗಲಿದ್ದನು. ಪೌಲನು ಇಲ್ಲಿ ಪದಗಳನ್ನು ಚಾತುರ್ಯದಿಂದ ಉಪಯೋಗಿಸುತ್ತಿರಬಹುದಾಗಿದೆ. “ಜನಾಂಗಗಳು” ಎಂಬದಕ್ಕೆ ಗ್ರೀಕ್ ಪದವು ἔθνος (*ethnos,* ನಾವು ಈ ಪದವನ್ನು “ethnic” -ಜನಾಂಗೀಯ- ಎಂಬದರಿಂದ ಪಡೆಯುತ್ತೇವೆ) ಎಂದಾಗಿರುತ್ತದೆ, ಅದು ಯಾವಾಗಲೂ “ಅನ್ಯಜನಾಂಗ” ಎಂದು ಅನುವಾದಿಸಲ್ಪಟ್ಟಿರುತ್ತದೆ. ರೋಮಾ 4:17 ರಲ್ಲಿನ ಉಲ್ಲೇಖವನ್ನು ಹೀಗೆ ಹೇಳಬಹುದು “ನಾನು ನಿನ್ನನ್ನು ಅನೇಕ *ಅನ್ಯಜನಾಂಗಗಳಿಗೆ* ಮೂಲಪಿತೃವಾಗಿ ನೇಮಿಸಿರುವದರಿಂದ” !

ಅಬ್ರಹಾಮನು **ನಮ್ಮೆಲ್ಲರಿಗೂ ದೇವರ ಸನ್ನಿಧಿಯಲ್ಲಿ ಮೂಲಪಿತೃವಾ**ಗಿದ್ದಾನೆ ಎಂದು ಪೌಲನು ಹೇಳಿದನು (4:16). ಈ ವಾಕ್ಯಭಾಗವು ದೇವರ ವಿಷಯವಾಗಿ ಅಬ್ರಹಾಮನು ನಂಬಿದ ಎರಡು ಸಂಗತಿಗಳನ್ನು ತಿಳಿಸುತ್ತದೆ.

ಮೊದಲನೆಯದಾಗಿ, ಅಬ್ರಹಾಮನು ನಂಬಿದ್ದೇನೆಂದರೆ ದೇವರು **ಸತ್ತವರನ್ನು ಬದುಕಿಸುವವನು** ಎಂಬದಾಗಿ. ಈ ಸನ್ನಿವೇಶದಲ್ಲಿ, ಇದು ಅಬ್ರಹಾಮ ಮತ್ತು ಸಾರಳ “ಮೃತ” ಪ್ರಾಯದ ದೇಹಗಳನ್ನು ಸೂಚಿಸುತ್ತದೆ (4:19). ದೇವರು ಅವರ ದೇಹಗಳನ್ನು “ಜೀವಕಳೆಯಿಂದ ತುಂಬಿಸಿ” ಅವರು ಒಬ್ಬ ಮಗನನ್ನು ಪಡೆಯುವಂತೆ ಮಾಡುವವನಾಗಿದ್ದನು. ಇದರಲ್ಲಿ ಅಬ್ರಹಾಮನ ಜೀವಿತದಲ್ಲಿ ನಂತರ ನಡೆಯಲಿದ್ದ ಘಟನೆಯ ಸುಳಿವು ಸಹ ಇರಬಹುದಾಗಿದೆ, ಅದು ಅಬ್ರಹಾಮನಿಗೆ ತನ್ನ ಮಗನನ್ನು ಯಜ್ಞವಾಗಿ ಅರ್ಪಿಸೆಂದು ಕೇಳುವ ಘಟನೆ (ಆದಿಕಾಂಡ 22:1-19). ದೇವರು “ಸತ್ತವರನ್ನು ಸಹ ಜೀವಂತಗೊಳಿಸುವದಕ್ಕೆ ಸಮರ್ಥನಾಗಿದ್ದಾನೆಂದು” ಅಬ್ರಹಾಮನು ನಂಬಿದ್ದರಿಂದ ಆ ಪರೀಕ್ಷೆಯನ್ನು ಸಂಧಿಸುವದಕ್ಕೆ ಶಕ್ತಾನಾದನೆಂದು ಇಬ್ರಿಯ ಪುಸ್ತಕದ ಲೇಖಕನು ಹೇಳುತ್ತಾನೆ (ಇಬ್ರಿಯ 11:19). “ಸತ್ತವರನ್ನು ಬದುಕಿಸುವವನು” ಎಂಬ ಪದಗಳು ಮುಂದೆ ರೋಮಾ 4ನೇ ಅಧ್ಯಾಯದ ಕಡೇ ವಚನದಲ್ಲಿ ಇನ್ನಷ್ಟು ನಿರೀಕ್ಷಿಸಬಹುದು, ಏನೆಂದರೆ ಅದು ಕ್ರಿಸ್ತನು ಮರಣದಿಂದ ಪುನರುತ್ಥಾನಗೊಳ್ಳುವ ಬಗ್ಗೆ ಮಾತಾಡುತ್ತದೆ (4:25).

ಗಮನಾರ್ಹ ಸಂಗತಿಯೇನೆಂದರೆ ದೇವರು ಸತ್ತವರಿಗೆ ಜೀವವನ್ನು ತುಂಬಬಲ್ಲನು ಎಂದು ಅಬ್ರಹಾಮನು ನಂಬಿದನು. ದೇವರು ಅಬ್ರಹಾಮನಿಗೆ ಕಾಣಿಸಿಕೊಂಡಿದ್ದನು; ಅದರ ಹೊರತಾಗಿ, ನಮಗೆ ಗೊತ್ತಿರುವ ಹಾಗೆ ಅಬ್ರಹಾಮನು ಬೇರೆ ಯಾವದೇ ಅದ್ಭುತವನ್ನು ಕಂಡಿರುವದಿಲ್ಲ. ಖಂಡಿತವಾಗಿಯೂ, ಯಾವನಾದರೂ ಮರಣದಿಂದ ಎಬ್ಬಿಸಲ್ಪಟ್ಟಿದ್ದನ್ನಂತೂ ಆತನು ನೋಡಿಯೇ ಇರಲಿಲ್ಲ. ಹಾಗಿದ್ದರೂ, ದೇವರು ದೇವರೇ- ಮತ್ತು ದೇವರು ಬಯಸುವದಾದರೆ ಸತ್ತವರನ್ನು ಸಹ ಬದುಕಿಸಬಲ್ಲನು ಎಂದು ಅಬ್ರಹಾಮನು ನಂಬಿದನು!

ಎರಡನೆಯದಾಗಿ, ಅಬ್ರಹಾಮನು **ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇರುವ** ಒಬ್ಬ ದೇವರಲ್ಲಿ ನಂಬಿದನು. ಇದು ಆದಿಕಾಂಡ 1ನೇ ಅಧ್ಯಾಯವನ್ನು ಸೂಚಿಸಬಹುದಾಗಿದೆ, ದೇವರು ಅಲ್ಲಿ ಬಾಯಿ ಮಾತಿನಿಂದ ಹಿಂದೆಂದೂ ಅಸ್ತಿತ್ವವಿಲ್ಲದ ಜಗತ್ತನ್ನು ಉಂಟುಮಾಡಿದನು (ಇಬ್ರಿಯ 11:3). ಈ ಸನ್ನಿವೇಶದಲ್ಲಿ, ಅದು ಬಹುಶಃ ಅಬ್ರಹಾಮನಿಗೆ ಕೊಡಲಾದ ವಾಗ್ದಾನ(ಗಳ) ಬಗ್ಗೆ ಮಾತಾಡುತ್ತಿದೆ. ಅಬ್ರಹಾಮನ ಮಗನಾದ ಇಸಾಕನು ಅಸ್ತಿತ್ವದಲ್ಲಿರಲಿಲ್ಲ, ಆದರೆ ದೇವರು ಆತನನ್ನು ಅಸ್ತಿತ್ವದಲ್ಲಿ ಬರುವಂತೆ ಕರೆದನು (ಆದಿಕಾಂಡ 17:15, 16; 18:10). ಅಲ್ಲದೆ ದೇವರು ಅಸ್ತಿತ್ವದಲ್ಲಿಲ್ಲದ "ಒಂದು ದೊಡ್ಡ ಜನಾಂಗ" (ಇಸ್ರಾಯೇಲ್)ವನ್ನು ಸಹ ಕರೆದನು ಮತ್ತು ಅದನ್ನು ಉಂಟಾಗುವಂತೆ ಮಾಡಿದನು (ಆದಿಕಾಂಡ 12:2; 46:3). ದೇವರು ಅಬ್ರಹಾಮನ ಆತ್ಮೀಕ ಸಂತತಿ (ಕ್ರೈಸ್ತರು) ಬಗ್ಗೆ ಸಹ ಸೂಚಿಸಿದನು ಮತ್ತು ಕೊನೆಗೆ, ಕ್ರಿಸ್ತನ ಮುಖಾಂತರ ಅವರನ್ನು ಅಸ್ತಿತ್ವಕ್ಕೆ ಬರುವಂತೆ ಕರೆದನು (ಗಲಾತ್ಯ 3:29).

ಇಲ್ಲಿ ವಿಷಯವೇನೆಂದರೆ, ಅಬ್ರಹಾಮನ ವಿಚಾರದಲ್ಲಾದರೋ, ದೇವರು ಏನಾದರೂ ಹೇಳಿದರೆ ಅದು ನೆರವೇರಿತೆಂದೇ ಅರ್ಥವೆಂದು ಆತನು ನಂಬಿದ್ದನು. ದೇವರು ಏನಾದರೂ ಸಂಭವಿಸಲಿಕ್ಕಿದೆ ಎಂದು ಹೇಳಿದರೆ, ಅದು ಸಂಭವಿಸುವದು-ಅಲ್ಲಿ ಪ್ರಶ್ನೆಗೆ ಅವಕಾಶವಿಲ್ಲ.

**ವಚನ 18.** ಅಬ್ರಹಾಮನ ನಂಬಿಕೆಯು ದೇವರ ಮೇಲೆ ನೆಟ್ಟಿತ್ತಾದ್ದರಿಂದ, **ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು.** ರೋಮಾಪುರ ಪತ್ರಿಕೆಯಲ್ಲಿ ಇದೇ ಮೊದಲ ಬಾರಿಗೆ "ನಿರೀಕ್ಷೆ" ಎಂಬ ಪದವು ಕಾಣಿಸಿಕೊಳ್ಳುತ್ತದೆ, ಆದರೆ ಇದು ಕೊನೆಬಾರಿ ಆಗುವದಿಲ್ಲ (ನೋಡಿರಿ 5:2, 4, 5; 8:20, 24, 25; 12:12; 15:4, 12, 13, 24). "ನಿರೀಕ್ಷೆ" ಎಂಬುದು ಗ್ರೀಕ್‌ನ ἐλπίς (*elpis*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, "ಇದು ಖಚಿತವಾಗಿ ಪೌಲನ ಪದವಾಗಿದೆ, . . . ಹೊಸ ಒಡಂಬಡಿಕೆಯ ಬೇರೆ ಯಾವದೇ ಪುಸ್ತಕಕ್ಕಿಂತಲೂ ಹೆಚ್ಚಾಗಿ ರೋಮಾಪುರ ಪತ್ರಿಕೆಯಲ್ಲಿ ಅಧಿಕ ಸಾರಿ ಕಾಣಿಸಿಕೊಳ್ಳುತ್ತದೆ."[31] ನಿರೀಕ್ಷೆ ಎಂಬುದು ನಂಬಿಕೆಯೊಂದಿಗೆ ನಿಕಟ ಸಂಬಂಧ ಹೊಂದಿದೆ (ನೋಡಿರಿ ಇಬ್ರಿಯ 11:6), ಆದರೆ ಅವುಗಳು ಒಂದೇ ಅಲ್ಲ. ಪೌಲನು ಬರೆದ ನಿರೀಕ್ಷೆ ಎಂಬುದು *ಬಯಕೆ* ಮತ್ತು *ಎದುರು ನೋಡುವಿಕೆ*ಗಳ ಸಮ್ಮಿಲನವಾಗಿದೆ; ಅವೆರಡೂ ಸೇರಿದರೆ ನಿರೀಕ್ಷೆ ಆಗುತ್ತದೆ.[32] ಒಬ್ಬನು ಕೋಟಿ ರೂಪಾಯಿಗಳನ್ನು ಬಯಸಬಹುದು; ಆದರೆ ಆತನು ಅದನ್ನು ಪಡೆಯುವೆನೆಂದು ಎದುರು ನೋಡುವದಿಲ್ಲವಾದ್ದರಿಂದ, ಅದು ನಿರೀಕ್ಷೆಯಾಗು ವದಿಲ್ಲ. ಒಬ್ಬ ಮರಣದಂಡನೆಗೆ ಗುರಿಯಾದ ಅಪರಾಧಿಯು ಮರಣಾಂತಿಕ ಚುಚ್ಚುಮದ್ದಿನಿಂದ ಕೊಲ್ಲಲ್ಪಡುವದನ್ನು ಎದುರು ನೋಡಬಹುದು; ಆದರೆ ಆತನು ಅದನ್ನು ಬಯಸುವದಿಲ್ಲವಾದ್ದರಿಂದ ಅದು ನಿರೀಕ್ಷೆಯಾಗುವದಿಲ್ಲ. ಕ್ರಿಸ್ತನಲ್ಲಿ ನಮಗೆ ನಿರೀಕ್ಷೆಯಿದೆ: ಬಯಕೆ *ಜೊತೆಗೆ* ಎದುರು ನೋಡುವಿಕೆ.

ಪೌಲನು "ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸುವ" ಬಗ್ಗೆ ಮಾತಾಡಿದನು: *ಲೋಕದ* ದೃಷ್ಟಿಕೋನದಿಂದ ನೋಡುವದಾದರೆ, ಅಬ್ರಹಾಮನಿಗೆ ಒಬ್ಬ ಮಗನನ್ನು ಪಡೆಯುವ ನಿರೀಕ್ಷೆಯೇ ಇರಲಿಲ್ಲ. ಆತನು ಒಬ್ಬ ಮಗನನ್ನು *ಬಯಸಿದನು* ಆದರೆ "ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದೂ" (4:19), ಎದುರು ನೋಡುವದಕ್ಕೆ ಆತನಿಗೆ

ಲೋಕದ ಯಾವ ಕಾರಣವೂ ಇರಲಿಲ್ಲ. ಹಾಗಿದ್ದರೂ, *ಪರಲೋಕದ ದೃಷ್ಟಿಕೋನದಿಂದ*, ಆತನಿಗೆ ಅನೇಕ ಸಂತತಿಗಳಾಗುವವೆಂದು ದೇವರು ಹೇಳಿದ್ದನು, ಆದ್ದರಿಂದ ಅಬ್ರಹಾಮನು ಒಬ್ಬ ಮಗನನ್ನು ಪಡೆಯುವದಕ್ಕೆ ಬಯಸಿದ್ದು ಮಾತ್ರವಲ್ಲದೆ ಆತನು ಅದನ್ನು ಎದುರುನೋಡಿದನು. ಆದ್ದರಿಂದ "ಆತನು ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು" ಎಂದು ಪೌಲನು ಹೇಳಿದನು. Eugene Peterson ಇದನ್ನು ಈ ರೀತಿಯಲ್ಲಿ ಹೇಳುತ್ತಾನೆ, "ಎಲ್ಲವೂ ಆಶಾರಹಿತವಾಗಿತ್ತು ,ಹೀಗಿದ್ದರೂ ಆಬ್ರಹಾಮನಂತೂ ನಂಬಿದನು" (MSG).

**ನಾನು ನಿನ್ನನ್ನು ಅನೇಕ ಜನಾಂಗಗಳಿಗೆ** [ಶಾರೀರಿಕ ಹಾಗೂ ಆತ್ಮೀಕ] **ಮೂಲಪಿತೃವಾಗಿ ನೇಮಿಸಿದ್ದೇನೆಂದು ಶಾಸ್ತ್ರದಲ್ಲಿ ಬರೆದಿರುವ ಪ್ರಕಾರ** ತಾನು ಅನೇಕ ಜನಾಂಗಗಳಿಗೆ ಪಿತೃವಾಗುವೆನೆಂಬದಾಗಿ ಅಬ್ರಹಾಮನಿಗೆ ನಂಬಿಕೆಯಿತ್ತು. ಈ ವಚನದಲ್ಲಿ ಉಲ್ಲೇಖಿಸಲಾಗಿರುವ "ಅನೇಕ ಜನಾಂಗಗಳ ಮೂಲಪಿತೃ" ಎಂಬುದು ಆದಿಕಾಂಡ 17:4, 5 ವಚನಗಳಿಂದಾಗಿದ್ದರೆ, ಉಲ್ಲೇಖವು ಆದಿಕಾಂಡ 15:5 ರಿಂದ ತೆಗೆದುಕೊಳ್ಳಲ್ಪಟ್ಟಿ ದ್ದಾಗಿದೆ. ಅಲ್ಲಿ ದೇವರು ಅಬ್ರಹಾಮನಿಗೆ ಆತನ ಸಂತಾನದವರು ಆಕಾಶದ ನಕ್ಷತ್ರಗಳಷ್ಟು ಅಸಂಖ್ಯಾತರಾಗುವರೆಂದು ಹೇಳಿದನು. ಅಬ್ರಹಾಮನು ಈ ವಾಗ್ದಾನಗಳು ನಿಜವಾಗುವವೆಂದು ವಿಶ್ವಾಸಿಸಿದನು-ಅವು ನೆರವೇರುವದಕ್ಕೆ ಯಾವ ದಾರಿಯೂ ಇಲ್ಲವೆಂಬಂತೆ ಕಂಡರೂ ಆತನು ವಿಶ್ವಾಸಿಸಿದನು.

**ವಚನ 19.** ಲೋಕದ ಜನರಿಗಾದರೋ, ಈ ರೀತಿಯ ನಂಬಿಕೆಯು ವಿವೇಕಹೀನ, ತರ್ಕಹೀನವಾಗಿ ಕಾಣಬಹುದು. ಅದು "ವಾಸ್ತವತೆಯ ಅರಿವು ಇಲ್ಲದ" ನಂಬಿಕೆ, ಅದು "ವಸ್ತುಸ್ಥಿತಿಗಳನ್ನು ಎದುರಿಸುವದಕ್ಕೆ ವಿಫಲವಾದದ್ದರ" ಫಲಿತವಾಗಿರುತ್ತದೆ. ನಾವು ಕಲಿಯುತ್ತಿರುವ ಪ್ರಕಾರ, ಅಬ್ರಹಾಮನ ವಿಷಯದಲ್ಲಿ ಅದು ಆ ರೀತಿಯಾಗಿರಲಿಲ್ಲ.

ಮಾನವ ಇತಿಮೀತಿಗಳ ನಡುವೆಯೂ ಅಬ್ರಹಾಮನು **ಚಂಚಲ ಚಿತ್ತನಾಗಲಿಲ್ಲ** ದೇವರ ವಾಗ್ದಾನಗಳಲ್ಲಿ ತನ್ನ ನಂಬಿಕೆಯನ್ನು ಕಾಪಾಡಿಕೊಂಡನು. "ಚಂಚಲಚಿತ್ತ" ಎಂಬುದು ἀσθενέω (*astheneō*) ಎಂಬದರಿಂದ ತೆಗೆದುಕೊಳ್ಳಲ್ಪಟ್ಟಿದೆ, ಅದು "ದೈಹಿಕ ಅಸ್ವಸ್ಥತೆ" ಯನ್ನು ಸೂಚಿಸುತ್ತದೆ, ಆದರೆ "ಯಾವದೇ ರೀತಿಯ ಬಲಹೀನತೆಯನ್ನು" ಸೂಚಿಸುವದಕ್ಕೆ ಉಪಯೋಗಿಸಲ್ಪಡಬಲ್ಲದು.[33] ಈ ವಚನದಲ್ಲಿ, ಇದು ಆತ್ಮೀಕ ಬಲಹೀನತೆ (ಚಂಚಲಚಿತ್ತ) ಯನ್ನು ಸೂಚಿಸುತ್ತದೆ.

**ತನ್ನ ದೇಹವು ಆಗಲೇ ಮೃತಪ್ರಾಯವಾಯಿತೆಂದೂ . . . ಯೋಚಿಸಿದಾಗ್ಯೂ** ಎಂಬ ಹೇಳಿಕೆಯಲ್ಲಿ ಒಂದು ವಾಕ್ಯದ ಕಠಿಣತೆಯು ಕಾಣಿಸಿಕೊಳ್ಳುತ್ತದೆ. ಕೆಲವು ಪ್ರಾಚೀನ ಗ್ರೀಕ್ ಹಸ್ತಪ್ರತಿಗಳಲ್ಲಿ ಹೀಗೆಯೇ ಇರುತ್ತಾದರೂ, ಇತರ ಪ್ರತಿಗಳಲ್ಲಿ "ಆತನು ತನ್ನ ದೇಹವು ಸತ್ತದೆಂದು ಪರಿಗಣಿಸಿಕೊಳ್ಳಲಿಲ್ಲ" ಎಂದಿರುತ್ತದೆ (ನೋಡಿರಿ KJV). ಆಶ್ಚರ್ಯಕರವಾಗಿ, ಈ ಎರಡು ಒಂದಕ್ಕೊಂದು ತದ್ವಿರುದ್ಧವಾದ ವಚನಗಳು, ಚೆನ್ನಾಗಿ ದೃಢೀಕರಿಸಲ್ಪಟ್ಟ ವುಗಳು ಮತ್ತು ಸನ್ನಿವೇಶಕ್ಕೆ ಹೋಲಿಸಿದರೆ ಅರ್ಥಗರ್ಭಿತವೇನಿಸುತ್ತವೆ. ಮೊದಲ ವಿಷಯಕ್ಕೆ ಸಂಬಂಧಿಸಿದಂತೆ, ಅಬ್ರಹಾಮನು ತನ್ನ ದೇಹವನ್ನು ಮೃತಪ್ರಾಯವೆಂದು ಯೋಚಿಸಿಕೊಂಡನು, ಆದಾಗ್ಯೂ ಅದರ ಮೂಲಕ ದೇವರಂತೂ ತನ್ನ ಚಿತ್ತವನ್ನು

ನೆರವೇರಿಸುವನೆಂದು ನಂಬಿದನು. ಎರಡನೆಯ ವಿಚಾರದಲ್ಲಿ ನೋಡುವದಾದರೆ, ಅಬ್ರಹಾಮನು ತನ್ನ ದೇಹವನ್ನು ಮೃತವೆಂದು ಪರಿಗಣಿಸಲಿಲ್ಲ ಯಾಕೆಂದರೆ ದೇವರು ಅದರ ಮೂಲಕ ತನ್ನ ಚಿತ್ತವನ್ನು ನೆರವೇರಿಸಲಿದ್ದನು.[34]

ಈ ವಚನವನ್ನು ಒಬ್ಬನು ಯಾವ ರೀತಿಯಲ್ಲಿ ಅರ್ಥೈಸಿದರೂ, ದೇವರು ತೊಂಬತ್ತೊಂಬತ್ತು ವಯಸ್ಸಿನ ಅಬ್ರಹಾಮನಿಗೆ ಅವನೊಬ್ಬ ಮಗನನ್ನು ಪಡೆಯುವನೆಂದು ಹೇಳಿದಾಗ (ಆದಿಕಾಂಡ 17:1, 16), ಆತನು ಮಕ್ಕಳಿಗೆ ತಂದೆಯಾಗುವ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ದೇಹವು "ಸತ್ತದ್ದಕ್ಕೆ ಸಮ" ಎಂಬ ಸತ್ಯವನ್ನು ನಿರ್ಲಕ್ಷಿಸಲಿಲ್ಲ (ನೋಡಿರಿ ಇಬ್ರಿಯ 11:12). **ಸಾರಳಿಗೆ ಗರ್ಭಕಾಲವು ಕಳೆದು ಹೋಯಿತೆಂಬ** ಸತ್ಯವನ್ನು ಸಹ ಆತನು ಅಲ್ಲಗಳೆಯಲಿಲ್ಲ. ಅಬ್ರಹಾಮನ ವಿಷಯದಲ್ಲಿ, "ಮೃತ" ಎಂಬುದು νεκρόω (*nekroō*) ಎಂಬ ಕ್ರಿಯಾಪದದಿಂದ ತೆಗೆದುಕೊಳ್ಳಲ್ಪಟ್ಟಿದೆ, ಸಾರಳ ವಿಷಯದಲ್ಲಾದರೋ, ಅವಳ "ಕಳೆದುಹೋಗಿರುವಿಕೆ" ಎಂಬುದು ಅದಕ್ಕೆ ಸಂಬಂಧಿತ ನಾಮಪದ νέκρωσις (*nekrōsis*) ಎಂಬದರಿಂದ ಬರುತ್ತದೆ. ಎರಡನೆಯ ಪದವನ್ನು "ಬಂಜೆತನ" ಎಂದು ಸಹ ಅನುವಾದಿಸಬಹುದು (NRSV). ಸಾರಳ ಗರ್ಭವು ಮುಂಚಿನಿಂದಲೂ "ಮೃತ" ಅಥವಾ "ಬಂಜೆತನ" ದಿಂದ ಕೂಡಿತ್ತು, ಆದರೆ ಈಗ ಅಬ್ರಹಾಮನ ದೇಹವು "ಮೃತಪ್ರಾಯದ" ದೇಹವಾಗಿತ್ತು. ಹಿಂದಿನ ದಿನಗಳಲ್ಲಿ, ಆತನ ದೇಹವು ಮಕ್ಕಳನ್ನು ಪಡೆಯುವ ವಿಚಾರದಲ್ಲಿ "ಮೃತಪ್ರಾಯ" ವಾಗಿರಲಿಲ್ಲ (ಆದಿಕಾಂಡ 16:4) ಆದರೆ "ಈಗ" ಹಾಗೆ ಆಗಿತ್ತು.

ಅಬ್ರಹಾಮನು "ವಾಸ್ತವತೆಗಳನ್ನು" ಗಮನಿಸಿದನು: ತಾನು ಮತ್ತು ಸಾರಳು ಶಾರೀರಿಕವಾಗಿ ಮಕ್ಕಳನ್ನು ಪಡೆಯಲು ಅಸಮರ್ಥರಾಗಿದ್ದರು. ಆತನು "ವಾಸ್ತವಿಕತೆ" ಯನ್ನು ಎದುರಿಸಿದನು: ಆತನಿಗೆ ಸಂತಾನಗಳಾಗುವದಕ್ಕೆ ಲೋಕದ ರೀತಿಯಲ್ಲಿ ಯಾವ ದಾರಿಯೂ ಇರಲಿಲ್ಲ. ಹಾಗಿದ್ದರೂ, ತನಗೆ ಮತ್ತು ಸಾರಳಿಗೆ ಒಬ್ಬ ಮಗನು ಹುಟ್ಟುವನೆಂದು, ಆತನ ಸಂತತಿಯು ಆಕಾಶದ ನಕ್ಷತ್ರಗಳಷ್ಟಾಗುವದೆಂದು ಆತನು ನಂಬಿದನು. ಏಕೆ? ಯಾಕೆಂದರೆ ಶಾರೀರಿಕ ಅಂಶಗಳು ನಿಜವಾದ ಅಂಶಗಳೇ ಅಲ್ಲ ಎಂಬದನ್ನು ಗ್ರಹಿಸಿಕೊಂಡನು; ನಿಜದಲ್ಲಿ, ಅವುಗಳು ಅಷ್ಟೇನೂ ಪ್ರಾಮುಖ್ಯವೇ ಆಗಿರಲಿಲ್ಲ. ಅಷ್ಟು ಮಾತ್ರವಲ್ಲದೆ, ಭೂಲೋಕದ ವಾಸ್ತವಿಕತೆಯನ್ನು ಮೀರಿ ಅತ್ಯುನ್ನತವಾಗಿರುವ ಮತ್ತೊಂದು ವಾಸ್ತವತೆ ಇದೆ ಎಂಬದನ್ನು ಆತನು ಗ್ರಹಿಸಿದನು: ಅದು ದೇವರ ವಾಸ್ತವಿಕತೆ. ಅಬ್ರಹಾಮನು ಶಾರೀರಿಕ ಅಂಶಗಳನ್ನು ಮತ್ತು ಭೂಲೋಕದ ವಾಸ್ತವಿಕತೆಯನ್ನು ನಿರ್ಲಕ್ಷಿಸಲಿಲ್ಲ, ಆದರೆ ಅವುಗಳಿಂದ ಭಯಭಿತನಾಗುವದಕ್ಕೆ ಅಥವಾ ಮೀತಿಗೊಳಗಾಗುವದಕ್ಕೆ ಆತನು ನಿರಾಕರಿಸಿದನು. ಆತನು ಸರ್ವಶಕ್ತನಾದ ದೇವರಲ್ಲಿ ನಂಬಿದನು, ಆತನು ಮಾಡುತ್ತೇನೆಂದು ಹೇಳಿದ್ದನ್ನು ಮಾಡುವದಕ್ಕೆ ಸಮರ್ಥನಾದ ದೇವರು (ನೋಡಿರಿ 4:17; ಆದಿಕಾಂಡ 17:1, 16; ಲೂಕ 1:37).

ವಚನ 19ರ ಭಾಷೆಯು ಒಂದು ಗೊಂದಲಕರವಾದ ಪ್ರಶ್ನೆಯನ್ನು ಎಬ್ಬಿಸುತ್ತದೆ: ಇಸಾಕನು ಹುಟ್ಟುವ ಮುಂಚೆ ಅಬ್ರಹಾಮನು ತಂದೆಯಾಗುವದಕ್ಕೆ ಸಾಧ್ಯವಿಲ್ಲದಷ್ಟು ವೃದ್ಧನಾಗಿರುವದಾದರೆ, ಆದಿಕಾಂಡ 25:1-6 ವಚನಗಳು ಅಬ್ರಹಾಮನಿಗೆ ಕೆಟೂರಳಲ್ಲಿ ಮಗನು ಹುಟ್ಟಿದ್ದನೆಂದು ಹೇಗೆ ಹೇಳಲು ಸಾಧ್ಯ? ಒಂದು ಸಾಧ್ಯತೆ ಏನೆಂದರೆ, ಬರೆಯಲ್ಪಟ್ಟ

ಘಟನಾವಳಿಗಳು ಕಾಲಕ್ರಮಾನುಸಾರದಲ್ಲಿ ಇರುವದಿಲ್ಲ ಮತ್ತು ಅಬ್ರಹಾಮನು ಕೆಟೂರಳಲ್ಲಿ ಮುಂಚೆಯೇ ಮಕ್ಕಳನ್ನು ಪಡೆದಿರುವ ಸಾಧ್ಯತೆಯಿದೆ. ಇನ್ನೊಂದು ಸಾಧ್ಯತೆಯೇನೆಂದರೆ ಇಸಾಕನನ್ನು ಪಡೆಯುವಂತೆ ಅಬ್ರಹಾಮನನ್ನು ಸಮರ್ಥಗೊಳಿಸಿದ ಅದೇ ದೇವರ ಆಶೀರ್ವಾದವು ಇತರ ಮಕ್ಕಳನ್ನು ಪಡೆಯುವಂತೆ ಸಮರ್ಥಗೊಳಿಸಿರಬಹುದು.

**ವಚನ 20.** ಅಬ್ರಹಾಮನು ದೇವರ ಶಕ್ತಿಯಲ್ಲಿ ನಂಬಿದ್ದು ಮಾತ್ರವಲ್ಲದೆ, ಆತನು ದೇವರ ವಾಗ್ದಾನದಲ್ಲಿ ದೃಢ ವಿಶ್ವಾಸ ಹೊಂದಿದ್ದನು: **ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ.** "ದೇವರು ಮಾಡಿದ ವಾಗ್ದಾನ" ವು ಅಬ್ರಹಾಮ ಮತ್ತು ಆತನ ಸಂತತಿಯವರು "ಲೋಕಕ್ಕೆ ಬಾಧ್ಯರಾಗುವರು" ಎಂಬ ವಾಗ್ದಾನವೇ ಆಗಿದೆ (4:13), ಅದೊಂದು ವಾಗ್ದಾನಗಳ "ಗಂಟು" ಆಗಿತ್ತು, ಅದರಲ್ಲಿ ಅಬ್ರಹಾಮನು ಒಬ್ಬ ಮಗನನ್ನು ಪಡೆಯುವದು ಮತ್ತು ಅನೇಕ ಸಂತತಿ ಹುಟ್ಟುವದು ಸೇರಿತ್ತು. ವಾಗ್ದಾನದ ನೆರವೇರಿಕೆಯು ಅಸಾಧ್ಯವೆಂದು ತೋರಿದಾಗ್ಯೂ ಮೂಲಪಿತೃವು "ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ." "ಚಂಚಲಚಿತ್ತ" ಎಂಬುದು διακρίνω (*diakronō*) ಎಂಬದರ ಅನುವಾದವಾಗಿದೆ, ಅದೊಂದು ಸಂಯುಕ್ತ ಪದವಾಗಿದ್ದು ಕೆಲವು ಸಾರಿ "ಹಿಂದೇಟುಹಾಕು" ಅಥವಾ "ಸಂಶಯಿಸು" ಎಂಬ ಅರ್ಥವಾಗಿರುತ್ತದೆ.[35]

ಅಬ್ರಹಾಮನ ನಂಬಿಕೆಯು ಪರಿಪೂರ್ಣವಾಗಿರಲಿಲ್ಲ. ಆತನು ಮನುಷ್ಯನಾಗಿದ್ದನು, ಅಂದರೆ ಆತನು ಪರಿಪೂರ್ಣನಾಗಿರಲಿಲ್ಲ ಎಂದಾಗುತ್ತದೆ ಮತ್ತು ಆತನ ನಂಬಿಕೆಯು ಪರಿಪೂರ್ಣವಾಗಿರಲಿಲ್ಲ. ಆದಿಕಾಂಡ 15:2, 3ರಲ್ಲಿ, ಆತನಿಗೆ ಇನ್ನೂ ಮಕ್ಕಳಾಗಿರಲಿಲ್ಲವಾದ್ದರಿಂದ, ತನ್ನ ಸೇವಕರಲ್ಲೊಬ್ಬನನ್ನು ನನಗೆ ಬಾಧ್ಯಸ್ಥನನ್ನಾಗಿ ಮಾಡೆಂದು ದೇವರನ್ನು ಅಬ್ರಹಾಮನು ಕೇಳಿಕೊಳ್ಳುತ್ತಾನೆ. ಆದಿಕಾಂಡ 17:15-18 ರಲ್ಲಿ, ಸಾರಳಿಗೆ ಒಬ್ಬ ಮಗನು ಹುಟ್ಟುವನೆಂದು ದೇವರು ಹೇಳಿದ ಮೇಲೆ, ಅಬ್ರಹಾಮನು ತನ್ನೊಳಗೆ ನಕ್ಕು, ಅಂದುಕೊಂಡದ್ದೇನೆಂದರೆ, "ನೂರು ವರ್ಷದವನಿಗೆ ಮಗ ಹುಟ್ಟುವದುಂಟೇ? ತೊಂಭತ್ತು ವರ್ಷದವಳಾದ ಸಾರಳು ಹೆತ್ತಾಳೇ?" ಆಮೇಲೆ ಆತನು ಇಸ್ಮಾಯೇಲನನ್ನು ತನ್ನ ಬಾಧ್ಯಸ್ಥನನ್ನಾಗಿ ಮಾಡುವಂತೆ ದೇವರನ್ನು ಮನವೊಲಿಸಲು ಪ್ರಯತ್ನಿಸಿದನು. ಪ್ರಮಾಣಿಕವಾಗಿ ಹೇಳುವದಾದರೆ, ತಿಂಗಳುಗಳು ವರ್ಷಗಳಾದಾಗ, ವರ್ಷಗಳು ದಶಕಗಳಾದಾಗ, "ತಾನು ಅಸಂಖ್ಯಾತ ಸಂತತಿಗೆ ತಂದೆಯಾಗುವೆನು" ಎಂಬ ವಾಗ್ದಾನದ ವಿಷಯದಲ್ಲಿ ಅಬ್ರಹಾಮನಿಗೆ ಹೋರಾಟ ಉಂಟಾಗಿತ್ತು.

ಹಾಗಾದರೆ, ಅಬ್ರಹಾಮನು "ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ," ಆತನು "ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ. ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು ಪೂರಾ ಭರವಸವಿಟ್ಟು ದೃಢನಂಬಿಕೆಯುಳ್ಳವನಾದನು" ಎಂದು ಪೌಲನು ಏಕೆ ಹೇಳಿದನು (4:20, 21)? ಇದಕ್ಕೆ ಉತ್ತರಿಸಬಹುದಾದ ಒಂದು ರೀತಿಯೆಂದರೆ, ಅಬ್ರಹಾಮನಿಗೆ ವಾಗ್ದಾನದ ಬಗ್ಗೆಯೇ ಯಾವ ಸಂಶಯವಿರಲಿಲ್ಲ ಆದರೆ ಅದು ಹೇಗೆ ನೆರವೇರುವದೆಂಬ ಬಗ್ಗೆ ಹೋರಾಟಗಳಿದ್ದವು.

ಅಬ್ರಹಾಮನು ತನ್ನ ನಂಬಿಕೆಯ ವಿಷಯದಲ್ಲಿ ಹೋರಾಟ ಅನುಭವಿಸಿರಬಹುದು, ಲೋಪಗಳನ್ನು ಹೊಂದಿರಬಹುದು, ತಾತ್ಕಲಿಕವಾಗಿ ಸಂಶಯಗಳನ್ನು ಸಹ ಎದುರಿಸಿರಬಹುದು-ಆದರೆ ದೇವರ ಮೇಲಿನ ತನ್ನ ದೃಷ್ಟಿಯನ್ನು ಆತನು ಎಂದಿಗೂ ತೆಗೆಯಲಿಲ್ಲ. ಅಬ್ರಹಾಮನ ನಂಬಿಕೆಯ ಪ್ರಮಾಣ ಮತ್ತು ಗುಣಮಟ್ಟವು ಅಷ್ಟೊಂದು ಪ್ರಾಮುಖ್ಯವಾಗಿರಲಿಲ್ಲ, ಆತನ ಮುಖ್ಯ ಗಮನವು ಯಾರ ಮೇಲಿದೆ ಎಂಬುದೇ ಹೆಚ್ಚು ಪ್ರಾಮುಖ್ಯವಾಗಿತ್ತು.

ಅಪನಂಬಿಕೆಯಿಂದ ಚಂಚಲಚಿತ್ತನಾಗುವ ಬದಲಿಗೆ, ಅಬ್ರಹಾಮನು **ದೃಢನಂಬಿಕೆಯುಳ್ಳವನಾದನು**. "ದೃಢನಂಬಿಕೆಯುಳ್ಳವ ನಾದನು" ಎಂಬುದು ἐνδυναμόω (*endunamoō*) ಎಂಬದರಿಂದ ತೆಗೆದುಕೊಳ್ಳಲ್ಪಟ್ಟಿದೆ, ಅದು "ಶಕ್ತಿ" ಎಂಬದಕ್ಕಿರುವ δύναμις (*dunamis*) ಎಂಬದಕ್ಕೆ ಸಂಬಂಧಿಸಿದೆ. ಈ ವಚನದಲ್ಲಿರುವ ಕ್ರಿಯಾಪದವು ತಟಸ್ಥ ಸ್ವರದಲ್ಲಿದೆ, ಆದ್ದರಿಂದ ಅದು "ಬಲಗೊಳಿಸಲ್ಪಟ್ಟನು" ಅಥವಾ "ಶಕ್ತಗೊಂಡನು" ಎಂದು ಅನುವಾದಿಸಲ್ಪಡಬಹುದು (ನೋಡಿರಿ NIV; NKJV).

"ನಂಬಿಕೆಯುಳ್ಳವನಾದನು" ಎಂಬ ಪದವು τῇ πίστει (*tē pistei*) ಎಂಬದರಿಂದ ಅನುವಾದಿಸಲ್ಪಟ್ಟಿದೆ, ಅದು ಯಾವ ಪೂರ್ವಪ್ರತ್ಯಯ ಇಲ್ಲದ ಸಂಪ್ರದಾನ ಸಂದರ್ಭದಲ್ಲಿರುತ್ತದೆ.[36] NASB ಮತ್ತು ಇತರ ಬಹುಪಾಲು ತರ್ಜುಮೆಗಳು "ಯಲ್ಲಿ" ಎಂಬ ಪೂರ್ವಪ್ರತ್ಯಯವನ್ನು ಸೇರ್ಪಡೆಗೊಳಿಸುತ್ತವೆ, ಆದರೆ ಕೆಲವು ತರ್ಜುಮೆಗಳು "ಮೂಲಕ" ಅಥವಾ "ಇಂದ" ಎಂಬ ಪದಗಳನ್ನು ಸೇರಿಸುತ್ತವೆ. "ಗ್ರೀಕ್‌ನಲ್ಲಿ 'ಆತನು ತನ್ನ ನಂಬಿಕೆಯಲ್ಲಿ ಬಲಗೊಂಡನು' (ಆತನ ನಂಬಿಕೆ ಮತ್ತಷ್ಟು ದೃಢವಾಯಿತು), ಅಥವಾ 'ಆತನು ತನ್ನ ನಂಬಿಕೆ ಮೂಲಕ ದೃಢಗೊಂಡನು' ಎಂದು ಅರ್ಥಮಾಡಿಕೊಳ್ಳಬಹುದು."[37] ಯಾವ ರೀತಿ ತೆಗೆದುಕೊಂಡರೂ, ಅಬ್ರಹಾಮನು ಕರ್ತನಲ್ಲಿ ಹಾಗೂ ಆತನ ವಾಗ್ದಾನಗಳಲ್ಲಿನ ತನ್ನ ನಂಬಿಕೆಯಲ್ಲಿ ಮತ್ತಷ್ಟು ದೃಢಗೊಂಡು ಬೆಳೆದನು. ಶಾರೀರಿಕ ವ್ಯಾಯಾಮಗಳು ದೇಹವನ್ನು ಬಲಗೊಳಿಸುವಂತೆಯೇ, ಒಬ್ಬನು ತನ್ನ ನಂಬಿಕೆಯನ್ನು ಅಭ್ಯಾಸಮಾಡಿಕೊಳ್ಳುವದರಿಂದ (ಅದರ ಮೇಲೆ ಅವಲಂಭಿತನಾಗಿ ಅಭ್ಯಾಸಿಸುವದು) ಆ ನಂಬಿಕೆಯು ಬಲಗೊಳಿಸಲ್ಪಡುತ್ತದೆ.

ಅಬ್ರಹಾಮನ ನಂಬಿಕೆ ಬಲಗೊಂಡು ಬೆಳೆಯುತ್ತಿರುವಾಗ, ಆತನು **ದೇವರನ್ನು ಘನಪಡಿಸುವವನಾಗಿ** ಇದ್ದನು. ದೇವರಿಗೆ "ಘನ" (δόξα, *doxa*) ಸಲ್ಲಿಸುವದೆಂದರೆ ಆತನಿಗೆ ಸಲ್ಲತಕ್ಕ ಮಹಿಮೆಯನ್ನು ನೀಡುವದು ಎಂದಾಗಿರುತ್ತದೆ. ಅಧ್ಯಾಯ 1ರಲ್ಲಿ, ಪೌಲನು "ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನ ಪಡಿಸಲಿಲ್ಲ" ಎಂದು ಹೇಳಿದ್ದನು (ರೋಮಾ 1:21). ಅಬ್ರಹಾಮನು ಆ ಕೃತಘ್ನರಂತೆ ಇರಲಿಲ್ಲ; ಆತನು ಕರ್ತನನ್ನು ಘನಪಡಿಸಿದನು. ಈ ವಿಚಾರದಲ್ಲಿ ನಾವು ಪಿತೃವಾದ ಅಬ್ರಹಾಮನ ಹೆಜ್ಜೆ ಜಾಡುಗಳಲ್ಲಿ ನಡೆಯಬೇಕಾಗಿರುತ್ತದೆ. "ಆತನಿಗೆ [ದೇವರು] ಈಗಲೂ ಸದಾಕಾಲವೂ ಸ್ತೋತ್ರ (ಘನ)" (2 ಪೇತ್ರ 3:18).

**ವಚನ 21.** ಈ ವಚನವು ಅಬ್ರಹಾಮನ ನಂಬಿಕೆಯ ಸಾರಾಂಶವಾಗಿದೆ, ಸಂಪೂರ್ಣ ವಿಶ್ವಾದ ಒಂದು ಸಂಕ್ಷಿಪ್ತ ಹೇಳಿಕೆ: **ಆತನು (ದೇವರು) ತನ್ನ ವಾಗ್ದಾನವನ್ನು**

**ನೆರವೇರಿಸುವದಕ್ಕೆ ಸಮರ್ಥನೆಂದು ಪೂರಾ ಭರವಸವಿಟ್ಟು ದೃಢನಂಬಿಕೆಯುಳ್ಳನಾದನು.** "ಪೂರಾ ಭರವಸವಿಟ್ಟು" ಎಂಬುದು πληροφορέω (*plērophoreō*) ಎಂಬದರಿಂದ ಬಂದಿದ್ದು, ಅದು πλήρης (*plērēs*, "ಪೂರ್ಣ" ಅಥವಾ "ಪೂರ್ತಿ") ಮತ್ತು φέρω (*pherō*, "ಹೊರು" ಅಥವಾ "ಹೊತ್ತುಕೊ") ಎಂಬ ಪದಗಳ ಸಮ್ಮೀಲನವಾಗಿರುತ್ತದೆ. ಅದರರ್ಥವು "ಪೂರ್ಣ ಸಾಮರ್ಥ್ಯ ಹೊತ್ತುಕೊ" ಎಂದಾಗಿರುತ್ತದೆ. ಈ ಸನ್ನಿವೇಶದಲ್ಲಿ, *plērophoreō* "ನಿಶ್ಚತತೆ ಸಾಧಿಸುವದನ್ನು" ಸೂಚಿಸುತ್ತದೆ.[38]

ದೇವರು ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸುವದಕ್ಕೆ "ಸಮರ್ಥನು" ಎಂಬದಾಗಿ ಅಬ್ರಹಾಮನು ನಂಬಿದನು. ಹಳೇ ಮತ್ತು ಹೊಸ ಒಡಂಬಡಿಕೆಯಲ್ಲಿನ ಮುಖ್ಯ ಚರ್ಚೆಯ ಅಂಶ ಏನೆಂದರೆ ನಮ್ಮ ದೇವರು "ಸಮರ್ಥನು" ಎಂಬುದೇ (ನೋಡಿರಿ ದಾನಿ 3:17; ರೋಮಾ 11:23; 14:4; 2 ಕೊರಿಂಥ 9:8; ಇಬ್ರಿಯ 7:25). "ಸಮರ್ಥನು" ಎಂಬುದು δυνατός (*dunatos*) ಎಂಬದರಿಂದ ಅನುವಾದಿಸಲ್ಪಟ್ಟಿದೆ, ಅದು *ಡುನಾಮಿಸ್* ಎಂಬ ಪದದ ಕುಟುಂಬದಿಂದಲೇ ಬಂದದ್ದಾಗಿದೆ, *dunamis* ಅಂದರೆ "ಶಕ್ತಿ." ನಮ್ಮ ದೇವರು ಸರ್ವಶಕ್ತನು, ಸಮಸ್ತವನ್ನು ಮಾಡಲು ಬಲವುಳ್ಳವನು! TEV ಹೇಳುವದೇನೆಂದರೆ, ಅಬ್ರಹಾಮನು "ತಾನು ವಾಗ್ದಾನ ಮಾಡಿದ್ದನ್ನು ದೇವರು ಖಂಡಿತವಾಗಿಯೂ ನೆರವೇರಿಸುತ್ತಾನೆಂಬ ಸಂಪೂರ್ಣ ನಿಶ್ಚಿತತೆ" ಹೊಂದಿದ್ದನು. ಆಗಾಗ ನಾವು ಕಾಪಾಡಿಕೊಳ್ಳಲು ಅಸಮರ್ಥರಾಗುವ ವಾಗ್ದಾನಗಳನ್ನು ಮಾಡುತ್ತಿರುತ್ತೇವೆ. ನಮ್ಮ ವಾಗ್ದಾನಗಳನ್ನು ಕಾಪಾಡಿಕೊಳ್ಳಬೇಕೆಂಬ ಎಲ್ಲಾ ಉದ್ದೇಶಗಳು ನಮಗಿದ್ದಾಗ್ಯೂ ಮತ್ತು ಸಾಧ್ಯವಾದಷ್ಟು ಪ್ರಯತ್ನಿಸಿದಾಗ್ಯೂ, ಕೆಲವು ಸಾರಿ ವಿಫಲರಾಗುತ್ತೇವೆ. ನಮ್ಮ ದೇವರು ಆ ರೀತಿಯಲ್ಲ. ಆತನು ಒಂದು ವಾಗ್ದಾನ ಮಾಡಿದರೆ, ಆತನು ಕಾಪಾಡಿಕೊಳ್ಳಲು ಸಮರ್ಥನಾಗಿದ್ದಾನೆ.

ದೇವರು ವಾಗ್ದಾನ ಮಾಡಿದ್ದನ್ನು ನೆರವೇರಿಸುವದಕ್ಕೆ ಶಕ್ತನಾಗಿದ್ದಾನೆಂದು ಅಬ್ರಹಾಮನು ನಂಬಿದ್ದು ಮಾತ್ರವಲ್ಲದೆ, ದೇವರು ಅದನ್ನು ಮಾಡುವನೆಂದು ಸಹ ಅಬ್ರಹಾಮನು ನಂಬಿದನು. ದೇವರು ನಂಬಿಗಸ್ತನೆಂದು ಆತನು ನಂಬಿದನು (ನೋಡಿರಿ ಧರ್ಮೋಪದೇಶಕಾಂಡ 7:9; 1 ಕೊರಿಂಥ 1:9). ದೇವರಿಗೆ ಮಾಡಲಾಗದ ಒಂದು ಸಂಗತಿಯೆಂದರೆ ಸುಳ್ಳು ಹೇಳುವದು (ತೀತನು 1:2; ಇಬ್ರಿಯ 6:18). ಜನರು ಯಾವಾಗಲೂ ತಮ್ಮ ಮಾತನ್ನು ಉಳಿಸಿಕೊಳ್ಳುವದಿಲ್ಲ, ಆದರೆ ದೇವರು ಉಳಿಸಿಕೊಳ್ಳುತ್ತಾನೆ. ಆತನು ವಾಗ್ದಾನ ಮಾಡಿದ್ದನ್ನು ತಪ್ಪದೆ ನೆರವೇರಿಸುವನು!

ದೇವರು ತನ್ನ ವಾಗ್ದಾನವನ್ನು ನೆರವೇರಿಸುವನೆಂದು ನಂಬುವದು ಅಬ್ರಹಾಮನಿಗೆ ಸುಲಭವಾಗಿತ್ತೋ? ಅಬ್ರಾಮನಿಗೆ (ಮುಂಚಿನ ಹೆಸರು) ವರ್ಷಗಳು ಗತಿಸಿದಂತೆ ಮಗನಿಲ್ಲದೆ ಇರುವದು ಎಷ್ಟು ನಿರಾಶದಾಯಕವಾಗಿ ಇದ್ದಿರಬಹುದೆಂಬದನ್ನು Donald Barnhouse ಚಿತ್ರಿಸುತ್ತಾನೆ. ಆತನು ಕಲ್ಪಿಸಿಕೊಂಡಿದ್ದೇನೆಂದರೆ, ಕಾನಾನ್ ದೇಶವನ್ನು ಹಾದು ಹೋಗುತ್ತಿದ್ದ ಶ್ರೀಮಂತ ವ್ಯಾಪಾರಿಗಳ ತಂಡವು ಅಬ್ರಾಮನ ಬಾವಿಯ ಬಳಿಯಲ್ಲಿ ವಿಶ್ರಮಿಸಿ ಆತನ ಸೇವಕರಿಂದ ಆಹಾರವನ್ನು ಖರೀದಿಸಿದ್ದಿರಬಹುದು. ಅವರು ಅಬ್ರಾಮನಿಗೆ ತಮ್ಮ ಗೌರವನ್ನು ಸಲ್ಲಿಸಿದ ಬಳಿಕ, ಅವರು ಸಹಜವಾಗಿಯೇ ಆತನು

ಯಾರು, ಎಲ್ಲಿಂದ ಬಂದವನು ಮತ್ತು ಎಷ್ಟು ವರ್ಷಗಳ ಕಾಲದಿಂದ ಅಲ್ಲಿರುತ್ತಾನೆಂದು ವಿಚಾರಿಸಿರುತ್ತಾರೆ. ಆತನು ಕಾಲಕಾಲಕ್ಕೆ ತನ್ನನ್ನು ಅಬ್ರಾಮ ("ಹೆಚ್ಚಿಸಲ್ಪಟ್ಟ ತಂದೆ") ಎಂದು ಹೇಳಿದಾಗ, ಅವರು ಆತನಿಗೆ "ನಿನಗೆ ಎಷ್ಟು ಪುತ್ರರಿದ್ದಾರೆ?" ಎಂದು ಕೇಳಿರಬೇಕು. ಅವಮಾನ ಮತ್ತು ನಾಚಿಕೆಯಲ್ಲಿ, ಆತನು "ಒಬ್ಬರೂ ಇಲ್ಲ" ಎಂದು ಉತ್ತರಿಸಿರಬಹುದಾಗಿದೆ. ಮೂಲ ಪಿತೃವಿಗೆ ದೊಡ್ಡ ಅಧಿಕಾರ, ಬೃಹತ್ ಸಂಖ್ಯೆಯ ಪಶುಗಳು, ಮತ್ತು ಹಲವಾರು ಸೇವಕರು ಇದ್ದರು-ಆದರೆ ಆತನಿಗೆ ಮಕ್ಕಳೇ ಇರಲಿಲ್ಲ.[39]

ಅನೇಕ ವರ್ಷಗಳಿಂದ ಕಾಯಬೇಕಾಗಿ ಬಂದಿದ್ದರೂ, "ದೇವರು ವಾಗ್ದಾನ ಮಾಡಿದ್ದಾನೆ ಮತ್ತು ಆತನು ಅದನ್ನು ನೆರವೇರಿಸಲು ಸಮರ್ಥನಾಗಿದ್ದಾನೆ" ಎಂಬದಾಗಿ ಅಬ್ರಹಾಮನು ಪೂರ್ಣ ಭರವಸವುಳ್ಳವನಾಗಿದ್ದನು. ಅಬ್ರಹಾಮನ ನಂಬಿಕೆಯು ಆತನು ಮಾಡಿಕೊಂಡ ಯಾವದೋ ಕಲ್ಪನೆ ಅಥವಾ ಕಂಡ ಕನಸಿನ ಮೇಲೆ ಆಧಾರವಾಗಿರಲಿಲ್ಲ; ಅದು ದೇವರು ಹೇಳಿದ *ಮಾತಿನ* ಮೇಲೆ ದೃಢವಾಗಿ ಬೇರೂರಿದ್ದಾಗಿತ್ತು.

**ವಚನ 22.** ಪೌಲನು ಅಬ್ರಹಾಮನ ಜೀವನದ ಕುರಿತಾದ ತನ್ನ ಸಮೀಕ್ಷೆಯನ್ನು ಪುನಃ ಆದಿಕಾಂಡ 15:6 ರಿಂದ ಉಲ್ಲೇಖಿಸುವ ಮೂಲಕ ಮುಕ್ತಾಯಗೊಳಿಸುತ್ತಾನೆ: **ಆದದರಿಂದ ಆ ನಂಬಿಕೆಯು** (ಅಬ್ರಹಾಮನ ನಂಬಿಕೆ) **ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು** (*logizomai*). ಆತನ ನಂಬಿಕೆ ಪರಿಪೂರ್ಣವಾದದ್ದಾಗಿರಲಿಲ್ಲ, ಆದರೆ ಆಗಲೂ ಅದು ನಂಬಿಕೆಯೇ ಆಗಿತ್ತು. ಆ ನಂಬಿಕೆಯ ಕಾರಣದಿಂದ, ದೇವರು ಅಬ್ರಹಾಮನನ್ನು ನೀತಿವಂತನೆಂದು ಎಣಿಸಿದನು.

**ವಚನಗಳು 23, 24.** ನಂತರ ಪೌಲನು ತನ್ನ ವಾಚಕರಿಗೆ ಅನ್ವಯಿಕೆಯನ್ನು ನೀಡುತ್ತಾನೆ, ಅದರಲ್ಲಿ ಇಂದಿನ ನಾವು ಸಹ ಸೇರಿರುತ್ತೇವೆ: **ಆದರೆ ಅದು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತೆಂಬದು** (*logizomai*) **ಅವನಿಗೋಸ್ಕರ** (ಅಬ್ರಹಾಮನಿಗೋಸ್ಕರ) **ಮಾತ್ರವಲ್ಲದೆ ನಮಗೋಸ್ಕರವೂ ಬರೆದಿರುವದು.** ಆದಿಕಾಂಡ 15:6 ಕೇವಲ "ಅಬ್ರಹಾಮನು ಮನುಷ್ಯರ ನೆನಪಿನಲ್ಲಿ ಉಳಿಯುವಂತೆ ಆತನಿಗೆ ಸ್ಮರಣಾರ್ಥವಾಗಿ ಮಾತ್ರವೇ ಬರೆಯಲ್ಪಟ್ಟಿಲ್ಲ."[40] ಮೋಶೆಯ ಕಾಲದ ಜನರು ಒಂದು ಸಂಗತಿಯನ್ನು ಕಲಿತುಕೊಳ್ಳಬೇಕೆಂಬದಕ್ಕಾಗಿ ದೇವರು ಮೋಶೆಯ ಮೂಲಕ ಆ ಮಾತುಗಳನ್ನು ಬರೆಯಿಸಿಟ್ಟನು ಮತ್ತು ಈ ದಿನವೂ ಜನರು ಆ ಮಾತುಗಳಿಂದ ಕಲಿತುಕೊಳ್ಳಬೇಕೆಂದು ದೇವರು ಇಚ್ಛಿಸುತ್ತಾನೆಂದು ಪೌಲನು ಹೇಳುತ್ತಾನೆ. ಅಪೊಸ್ತಲನಿಗೆ ಇತಿಹಾಸವನ್ನು ಪಠಿಸುವದರಲ್ಲಿ ಅಷ್ಟೇನೂ ಆಸಕ್ತಿಯಿರಲಿಲ್ಲ, ಆದರೆ ಆತನಿಗೆ ಹೃದಯಗಳನ್ನು ಮತ್ತು ಜೀವಿತಗಳನ್ನು ಮಾರ್ಪಡಿಸಬೇಕೆಂಬ ಮಹದಾಶೆಯಿತ್ತು.

ಆದಿಕಾಂಡ 15:6 ಕ್ರೈಸ್ತರಿಗೋಸ್ಕರ ಬರೆಯಲ್ಪಟ್ಟಿದೆ, ಅವರ ಲೆಕ್ಕಕ್ಕೆ ನಂಬಿಕೆಯು ಎಣಿಸಲ್ಪಡುವದು (*logizomai*). ಅಬ್ರಹಾಮನ ನಂಬಿಕೆಯಂತೆಯೇ ನಮ್ಮ ನಂಬಿಕೆಯು ನಮ್ಮ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಡುವದು ಯಾಕೆಂದರೆ ನಾವಿಬ್ಬರೂ ಕೃಪೆಯ/ನಂಬಿಕೆಯ ವ್ಯವಸ್ಥೆಯ ಅಡಿಯಲ್ಲಿಯೇ ಇದ್ದೇವೆ. 22 ರಿಂದ 24 ವಚನಗಳಲ್ಲಿ *logizomai* ಎಂಬ ಪದದ ಮೂರು ರೀತಿಯ ಉಪಯೋಗವು ದೇವರ ಆಶ್ಚರ್ಯವಾದ ಲೆಕ್ಕದ ವ್ಯವಸ್ಥೆಯನ್ನು ತೋರ್ಪಡಿಸುತ್ತದೆ (4:3-8 ರ ಮೇಲಿನ ವ್ಯಾಖ್ಯಾನವನ್ನು

ನೋಡಿರಿ). CJB ಯಲ್ಲಿ ಹೀಗಿರುತ್ತದೆ, "ಆದರೆ ವಾಕ್ಯಗಳು . . . ನಮಗೋಸ್ಕರ ಸಹ ಬರೆಯಲ್ಪಟ್ಟವು, ನಮ್ಮ ಲೆಕ್ಕಕ್ಕೆ ಸಹ ಎಣಿಸಲ್ಪಡುವದು." 25 ನೇ ವಚನದಲ್ಲಿ, ಕ್ರಿಸ್ತನು ನಮ್ಮ "ಲೆಕ್ಕವನ್ನು ಸಮತೋಲನಗೊಳಿಸಲು" ಮರಣಿಸಿದನು ಎಂಬದಾಗಿ AB ಗಮನಕ್ಕೆ ತರುತ್ತದೆ. ದೇವರು ಹೇಗೆ ತನ್ನ "ಲೆಕ್ಕ ಪುಸ್ತಕಗಳನ್ನು ಬರೆದಿಡುತ್ತಾನೆ" ಎಂಬದರ ಬಗ್ಗೆ ಇದು ರೋಮಾಪುರ ಪತ್ರಿಕೆಯ ಕಡೇ ವಚನವಾಗಿದೆ, ಆದರೆ ಇದು ಪತ್ರಿಕೆಯ ಮಿಕ್ಕ ಭಾಗಕ್ಕೆ ಒಂದು ಪರಾಮರ್ಶೆಯನ್ನು ಒದಗಿಸುತ್ತದೆ.

ಕ್ರೈಸ್ತರನ್ನು **ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರನ್ನು ನಂಬುವವರು** ಎಂಬದಾಗಿ ಬಣ್ಣಿಸಲಾಗಿರುತ್ತದೆ. ನಾವು ನಂಬುವ ಮತ್ತು ಆಬ್ರಹಾಮನು ನಂಬಿದ ವಿಷಯಗಳಲ್ಲಿ ಒಂದು ಸೂಚಿತ ಹೋಲಿಕೆಯಿರುತ್ತದೆ. ದೇವರು "ಸತ್ತವರನ್ನು ಬದುಕಿಸಲು ಸಮರ್ಥನು" ಎಂಬದಾಗಿ ಮೂಲಪಿತೃವು ನಂಬಿದನು (4:17), ಮತ್ತು ನಾವು ಸಹ ಅದೇ ರೀತಿಯ ನಂಬಿಕೆಯನ್ನು ಹೊಂದಿರಬೇಕಾಗಿರುತ್ತದೆ. ನಿಜವೇನೆಂದರೆ, ಯೇಸುವಿನ ಪುನರುತ್ಥಾನವು ನಮ್ಮ ನಂಬಿಕೆಯ ಕೇಂದ್ರ ಬಿಂದುವಾಗಿರುತ್ತದೆ. 1:4ರಲ್ಲಿ, ಯೇಸು "ಸತ್ತ ಮೇಲೆ ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟನು" ಎಂಬದಾಗಿ ಪೌಲನು ಹೇಳಿದನು. 10:9ರಲ್ಲಿ, ಆತನು ಹೇಳಿದ್ದೇನೆಂದರೆ, ರಕ್ಷಣೆ ಹೊಂದಬೇಕೆಂದರೆ ನೀನು "ದೇವರು ಆತನನ್ನು [ಯೇಸು] ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಬೇಕು." ಕ್ರಿಸ್ತನ ಪುನರುತ್ಥಾನವಿಲ್ಲದೆ, ನಮಗೆ "ಜೀವಕರವಾದ ನಿರೀಕ್ಷೆ" ಇರುವದಿಲ್ಲ (1 ಪೇತ್ರ 1:3) ಮತ್ತು ನಮ್ಮ ನಂಬಿಕೆಯು "ನಿಷ್ಪ್ರಯೋಜನವಾಗಿದೆ" (1 ಕೊರಿಂಥ 15:17).

**ವಚನ** 25. ಯೇಸುವಿನ ವಿಷಯವಾಗಿ, ಪೌಲನು ಹೇಳಿದ್ದೇನೆಂದರೆ **ದೇವರು** . . . **ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು**. ಪೌಲನು ಇಲ್ಲಿ ಆದಿಕಾಂಡ ಕ್ರೈಸ್ತರು ಉಪಯೋಗಿಸುತ್ತಿದ್ದಂಥ "ವಿಶ್ವಾಸ ಅರಿಕೆ" ಯನ್ನು ಉಲ್ಲೇಖಿಸುತ್ತಿದ್ದಾನೆಂದು ಅನೇಕ ಲೇಖಕರು ಅಭಿಪ್ರಾಯ ಪಡುತ್ತಾರೆ. ಇದು ನಿಜವೋ ಅಲ್ಲವೋ ಎಂದು ನಮಗೆ ತಿಳಿಯದು. ನಾವು ತಿಳಿದುಕೊಳ್ಳಬೇಕಾದದ್ದೆಲ್ಲಾ ಇಷ್ಟೆ, ಏನೆಂದರೆ ಇದನ್ನು ಒಬ್ಬ ದೈವಪ್ರೇರಿತ ಮನುಷ್ಯನು ಬರೆದನು ಮತ್ತು ಆದಕಾರಣ ಅದು ಕರ್ತನಿಂದಲೇ ಬಂದದ್ದಾಗಿದೆ.

ಯೇಸು "ಒಪ್ಪಿಸಿಕೊಡಲ್ಪಟ್ಟನು" ಎಂದು ಪೌಲನು ಹೇಳಿದಾಗ, ಆತನು ಶಿಲುಬೆಗೆ ಹಾಕಲ್ಪಡುವದಕ್ಕಾಗಿ ತನ್ನ ವೈರಿಗಳ ಕೈಗೆ ಒಪ್ಪಿಸಿಕೊಡಲ್ಪಟ್ಟನು ಎಂದು ಅರ್ಥವಾಗುತ್ತದೆ. ಆದ್ದರಿಂದ NIV ಯಲ್ಲಿ "ಆತನು ಮರಣಕ್ಕೆ ಒಪ್ಪಿಸಿಕೊಡಲ್ಪಟ್ಟನು" ಎಂದಿದೆ. "ಆತನು ಒಪ್ಪಿಸಿಕೊಡಲ್ಪಟ್ಟನು" ಎಂಬುದು παραδίδωμι (*paradidōmi*) ಎಂಬದರಿಂದ ಅನುವಾದಿಸಲ್ಪಟ್ಟಿದೆ. ಅದು παρά (*para*, "ಜೊತೆಗೆ") ಮತ್ತು δίδωμι (*didōmi*, "ಕೊಡು") ಎಂಬ ಪದಗಳ ಸಮ್ಮಿಲನವಾಗಿದೆ. ಈ ಪದವು ಯೇಸುವಿನ ವೈರಿಗಳು ಆತನನ್ನು ಒಪ್ಪಿಸಿಕೊಡುವದಕ್ಕೆ ಸಂಬಂಧಿಸಿದಂತೆ ಉಪಯೋಗಿಸಲ್ಪಟ್ಟಿತ್ತು, ಆದರೆ 25ನೇ ವಚನವು ಯೇಸುವಿನ ವೈರಿಗಳನ್ನು ಸೂಚಿಸುವದಿಲ್ಲ. ಕ್ರಿಸ್ತನ ವೈರಿಗಳಿಗೆ "ನಮ್ಮ

ಅಪರಾಧಗಳ"[41] ಬಗ್ಗೆ ಯಾವ ಆಸಕ್ತಿಯೂ ಇರಲಿಲ್ಲ; ಅವರ ಚಿಂತೆಯೆಲ್ಲಾ ತಾವು ದ್ವೇಷಿಸಿದ ಒಬ್ಬನನ್ನು ತೊಲಗಿಸಿಕೊಳ್ಳುವದಾಗಿತ್ತು. 25ನೇ ವಚನವು ನಮ್ಮ ಪಾಪಗಳಿಗೆ "ಪ್ರಾಯಶ್ಚಿತ್ತವಾಗಿ" ದೇವರು ಯೇಸುವನ್ನು ಒಪ್ಪಿಸಿಕೊಡುವ ಬಗ್ಗೆ ಮಾತಾಡುತ್ತಿದೆ (3:25). 8:32 ರಲ್ಲಿ, ಪೌಲನು ಹೇಳಿದ್ದೇನೆಂದರೆ, ದೇವರು "ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ."

25ನೇ ವಚನದ ಹಲವಾರು ಗುಣಲಕ್ಷಣಗಳು ವ್ಯಾಖ್ಯಾನಕಾರರಲ್ಲಿ ಪ್ರಶ್ನೆಗಳನ್ನು ಉಂಟುಮಾಡುತ್ತವೆ. ಒಂದು ಪ್ರಶ್ನೆಯೆಂದರೆ, διά (*dia*) ಎಂಬ ಪೂರ್ವಪ್ರತ್ಯಯದ ಪುನರಾವರ್ತನೆ, ಅದು NASB ಯಲ್ಲಿ "ನಿಮಿತ್ತ" ಎಂದು ಅನುವಾದಿಸಲ್ಪಟ್ಟಿದೆ: "ಆತನು . . . ನಮ್ಮ ಅಪರಾಧಗಳ *ನಿಮಿತ್ತ* . . . ಒಪ್ಪಿಸಿಕೊಡಲ್ಪಟ್ಟನು . . . ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ *ನಿಮಿತ್ತ* ಜೀವದಿಂದ ಎಬ್ಬಿಸಲ್ಪಟ್ಟನು." ಪೌಲನು ಈ ಎರಡು ಹೇಳಿಕೆಗಳು ಸಮಾಂತರವಾಗಿರಬೇಕೆಂದು ಇಚ್ಛಿಸಿದ್ದಂತೆ ತೋರುತ್ತದೆ. ಸಮಸ್ಯೆ ಏನೆಂದರೆ "ಅಪರಾಧಗಳು" ಮತ್ತು "ನೀತಿವಂತರೆಂಬ ನಿರ್ಣಯ" ಎರಡೂ ಒಂದೇ ವರ್ಗದಲ್ಲಿರುವದಿಲ್ಲ; ಅವು ಒಂದಕ್ಕೊಂದು ತದ್ವಿರುದ್ಧವಾಗಿವೆ. ಪೌಲನು ತನ್ನ ವಾಚಕರು ಪ್ರತಿಯೊಂದು ಭಾಗದ ಮೇಲೆ ವಿಚಾರವನ್ನು ಪೂರ್ಣಗೊಳಿಸಬೇಕೆಂದು ಎದುರು ನೋಡಿದನು: ಕ್ರಿಸ್ತನು "ನಿಮಿತ್ತ" ಮರಣಕ್ಕೆ ಒಪ್ಪಿಸಲ್ಪಟ್ಟನು ಯಾಕೆಂದರೆ ನಮ್ಮ ಅಪರಾಧಗಳ ದೋಷವನ್ನು ನೀಗಿಸುವದಕ್ಕೆ ಅದು ಅಗತ್ಯವಾಗಿತ್ತು, ಮತ್ತು ನಾವು ನೀತಿವಂತರೆಂಬ ನಿರ್ಣಯ ಹೊಂದುವ "ನಿಮಿತ್ತ" ಆತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು, ಅದು ಅವಶ್ಯಕವಾಗಿತ್ತು.

25ನೇ ವಚನದ ಕಡೇ ಭಾಗದಲ್ಲಿ ಉಪಯೋಗಿಸಲಾಗಿರುವ ಪದ ಪ್ರಯೋಗವು ಇನ್ನಷ್ಟು ವಿವರಣೆಗೆ ಯೋಗ್ಯವಾಗಿದೆ: "ಆತನು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಎಬ್ಬಿಸಲ್ಪಟ್ಟನು." ನಿಯಮದಂತೆ, ಪೌಲನು ಹೇಳಿದ್ದೇನೆಂದರೆ ಕ್ರಿಸ್ತನು ನಮಗೆ ನೀತಿವಂತರೆಂಬ ನಿರ್ಣಯ ಉಂಟಾಗುವ ನಿಮಿತ್ತ *ಸತ್ತನು*. 5:9ರಲ್ಲಿ, ಆತನು ಹೇಳಿದ್ದೇನೆಂದರೆ ನಾವು "ಆತನ ರಕ್ತದ ಮೂಲಕ ನೀತಿವಂತರೆಂಬ ನಿರ್ಣಯ ಹೊಂದಿದೆವು" (ನೋಡಿರಿ 3:24, 25). ಹೇಗೂ, ಇಲ್ಲಿ, ಆತನು ಕ್ರಿಸ್ತನು ನಮಗೆ ನೀತಿವಂತರೆಂಬ ನಿರ್ಣಯ ಉಂಟಾಗುವ ನಿಮಿತ್ತ ಎಬ್ಬಿಸಲ್ಪಟ್ಟನು ಎಂದು ಹೇಳಿತ್ತಾನೆ. ಯೇಸುವಿನ ಪುನರುತ್ಥಾನವು ನಮ್ಮ ನೀತಿವಂತರೆಂಬ ನಿರ್ಣಯಕ್ಕೋಸ್ಕರ ಇರುವದಕ್ಕೆ ಒಂದು ದಾರಿಯೆಂದರೆ, ಪುನರುತ್ಥಾನದ ಕಾರಣದಿಂದಾಗಿ ಯೇಸುವಿನ ಮರಣವು ದೇವರ ಕೋಪವನ್ನು ಸಂತೃಪ್ತಗೊಳಿಸಿತೆಂದು ನಾವು ದೃಢನಿಶ್ಚಯಗೊಳ್ಳಬಹುದು.

ಈ ವಾಕ್ಯದಲ್ಲಿ ಹೆಚ್ಚುವರಿ ಮಹತ್ವ ಸಹ ಇರಬಹುದಾಗಿದೆ. ಕೆಲವು ಲೇಖಕರು ಇಬ್ರಿಯ ಪುಸ್ತಕದೆಡೆಗೆ ಗಮನ ಸೆಳೆಯುತ್ತಾರೆ, ಅದು ಯೇಸುವನ್ನು ನಮ್ಮ ಮಹಾಯಾಜಕನೆಂದು ಕರೆಯುತ್ತದೆ (ಇಬ್ರಿಯ 2:17; 3:1; 4:14, 15).[42] ಇಬ್ರಿಯ 9ನೇ ಅಧ್ಯಾಯವು ಹಳೇ ಒಡಂಬಡಿಕೆಯ ಮಹಾಯಾಜಕ ಮತ್ತು ಯೇಸುವಿನ ನಡುವೆ ಹೋಲಿಕೆಯನ್ನು ಮಾಡುತ್ತದೆ. ಹಳೇ ಒಡಂಬಡಿಕೆಯಲ್ಲಿ, ಮಹಾಯಾಜಕನು ವರ್ಷಕ್ಕೊಮ್ಮೆ ಪ್ರಾಣಿಗಳ ರಕ್ತವನ್ನು ತೆಗೆದುಕೊಂಡು ಅತಿ ಪರಿಶುದ್ಧ ಸ್ಥಳದೊಳಗೆ ಪ್ರವೇಶ ಮಾಡುತ್ತಿದ್ದನು. ಆತನು

ಈ ರಕ್ತವನ್ನು ಕೃಪಾ ಸಿಂಹಾಸನದ (ಮಂಜೂಷದ ಮುಚ್ಚಳದ ಮೇಲೆ) ಮೇಲೆ ಪ್ರೋಕ್ಷಿಸುತ್ತಿದ್ದನು, ಅದು ದೇವರ ಸಿಂಹಾಸನವನ್ನು ಪ್ರತಿನಿಧಿಸುವ ದಾಗಿತ್ತು. ಆತನು ಇದನ್ನು ಜನರ ಪಾಪಗಳಿಗೆ ಪ್ರಾಯಶ್ಚಿತ್ತಕ್ಕೋಸ್ಕರ ಮಾಡುತ್ತಿದ್ದನು. ನಮ್ಮ ಮಹಾಯಾಜಕನಾಗಿ, ಯೇಸುವು ಅತಿಪರಿಶುದ್ಧ ಸ್ಥಳವಾದ, ಪರಲೋಕವನ್ನೇ ಪ್ರವೇಶಿಸಿದನು (ಇಬ್ರಿಯ 9:24). ಪ್ರಾಣಿಗಳ ರಕ್ತವನ್ನು ತರುವ ಬದಲಾಗಿ, ಆತನು ತನ್ನ ಸ್ವಂತ ರಕ್ತವನ್ನೇ ದೇವರ ಸಿಂಹಾಸನದ ಮುಂದೆ ಅರ್ಪಿಸಿದನು. ಆತನು ಇದನ್ನು ನಮ್ಮ ಪಾಪಗಳ ಪರಿಹಾರ್ಥವಾಗಿ ಮಾಡಿದನು-ವರ್ಷಕ್ಕೊಂದಾವರ್ತಿ ಅಲ್ಲ, ಆದರೆ ಸರ್ವಕಾಲಕ್ಕೂ ಒಂದೇ ಸಾರಿ ಅರ್ಪಿಸಿದನು. ಈ ಮಹಾಯಾಜಕತ್ವದ ಕಾರ್ಯವನ್ನು ನೆರವೇರಿಸುವದಕ್ಕಾಗಿ, ಯೇಸು ಸತ್ತವರೊಳಗಿಂದ *ಎಬ್ಬಿಸಲ್ಪಟ್ಟು* ನಂತರ ಪರಲೋಕಕ್ಕೆ ಆರೋಹಣಗೊಳ್ಳಬೇಕಾಯಿತು. Charles Hodge, ಹೀಗೆ ಬರೆದನು, "ನಮ್ಮ ಪರವಾಗಿ ತನ್ನ ಯಜ್ಞದ ಸ್ವೀಕಾರಕ್ಕೆ ಒಂದು ಸಾಕ್ಷ್ಯಾಧಾರವಾಗಿಯೂ ಹಾಗೂ ತನ್ನ ಯಜ್ಞದ ಪ್ರಯೋಜನ ಎಲ್ಲರಿಗೆ ದೊರಕುವಂತೆ ಅರ್ಹತೆಯನ್ನು ಗಳಿಸಿಕೊಳ್ಳುವದಕ್ಕೆ ಒಂದು ಅವಶ್ಯಕ ಹೆಜ್ಜೆಯಾಗಿಯೂ ಕ್ರಿಸ್ತನ ಪುನರುತ್ಥಾನವು ಅತ್ಯಂಥ ಮಹತ್ವದ್ದಾಗಿತ್ತು, ನಮಗೆ ನೀತಿವಂತರೆಂಬ ನಿರ್ಣಯವಾಗುವದಕ್ಕೆ ಸಹ."[43]

ಕ್ರಿಸ್ತನು "ನಮ್ಮ ಅಪರಾಧಗಳಿಗಾಗಿ ಸತ್ತನು" ಮತ್ತು ನಮಗೆ "ನೀತಿವಂತರೆಂಬ ನಿರ್ಣಯ ಉಂಟಾಗುವಂತೆ" ಎಬ್ಬಿಸಲ್ಪಟ್ಟನು ಎಂದು ಪೌಲನು ಹೇಳಿದಾಗ ಆತನ ತಾತ್ಪರ್ಯವು, ಯೇಸುವಿನ ಮರಣಕ್ಕೂ ನಮಗೆ ನೀತಿವಂತರೆಂಬ ನಿರ್ಣಯವಾಗುವ ದಕ್ಕೂ ಸಂಬಂಧವಿಲ್ಲ ಹಾಗೂ ಆತನ ಪುನರುತ್ಥಾನಕ್ಕೂ ನಾವು ಅಪರಾಧಗಳಿಂದ ಕ್ಷಮಿಸಲ್ಪಡುವದಕ್ಕೂ ಸಂಬಂಧವಿಲ್ಲ ಎಂದಾಗಿರಲಿಲ್ಲ. ಬದಲಾಗಿ, ಆತನು ತಾತ್ಪರ್ಯವೇನಾಗಿತ್ತೆಂದರೆ ಅವೆರಡೂ ನಮ್ಮ ರಕ್ಷಣೆಯಲ್ಲಿ ಮಹತ್ವದ ಪಾತ್ರವನ್ನು ಹೊಂದಿರುತ್ತವೆ ಎಂಬದೆ. R. C. Bell ಬರೆದದ್ದೇನೆಂದರೆ, ಪೌಲನು ಹೀಗೆ ಶಿಲುಬೆಗೇರಿಸಲ್ಪಡುವಿಕೆ ಮತ್ತು ಪುನರುತ್ಥಾನಗಳನ್ನು ಜೋಡಿಸಿದನು, "ಎರಡು ಸಂಗತಿಗಳು ಕೀಲುಗಳಾಗಿದ್ದು ಇವುಗಳಿಂದ ರಕ್ಷಣೆಯ ಬಾಗಿಲು ತೆರೆದುಕೊಳ್ಳುತ್ತದೆ."[44]

## ಅನ್ವಯಿಸುವಿಕೆ

### ಅಬ್ರಹಾಮನ ಜೀವನದ ಮೂಲಕ ಒಂದು ವಿಹಾರ (ಅಧ್ಯಾಯ 4)

ಪೌಲನ ಯೆಹೂದಿ ವಾಚಕರಿಗೆ ಅಬ್ರಹಾಮ ಮತ್ತು ಆತನ ಜೀವಿತದಲ್ಲಾದ ಘಟನೆಗಳ ಬಗ್ಗೆ ಪರಿಚಯವಿದ್ದಿರಬಹುದು. ನಮ್ಮಲ್ಲಿ ಕೆಲವರಿಗೆ ಮೂಲಪಿತೃವಿನ ಬಗ್ಗೆ ಅಷ್ಟೊಂದು ತಿಳುವಳಿಕೆಯಿರುವದಿಲ್ಲ, ಆದ್ದರಿಂದ ಆತನ ಜೀವಿತದಲ್ಲಿ ನಡೆದ ಮುಖ್ಯ ಘಟನೆಗಳ ಕುರಿತ ಈ ಅವಲೋಕನವು ಸಹಾಯಕವಾಗಬಹುದು.

1. ದೇವರು ಅಬ್ರಾಮನನ್ನು ಕಲ್ದೀಯರ ಊರ್ ಪಟ್ಟಣದಿಂದ ಕರೆದನು, ಆದ್ದರಿಂದ ಅಬ್ರಾಮನು ತನ್ನ ಹೆಂಡತಿ, ತಂದೆಯೊಂದಿಗೆ ಊರ್ ಪಟ್ಟಣದಿಂದ ಹೊರಟು ಹೋಗಿ ಹಾರಾನಿನಲ್ಲಿ ನೆಲೆಸಿದನು (ಆದಿಕಾಂಡ 11:31; 15:7; ನೆಹೆಮೀಯ 9:7; ಅಪೊಸ್ತಲರ

ಕೃತ್ಯಗಳು 7:2, 3).

2. ಅಬ್ರಾಮನು ಎಪ್ಪತ್ತೈದು ವರ್ಷದವನಾಗಿದ್ದಾಗ, ದೇವರು ಅವನ ಸಂಗಡ ಒಂದು ಒಡಂಬಡಿಕೆಯನ್ನು ಮಾಡಿದನು ಮತ್ತು ತಾನು ತೋರಿಸುವ ದೇಶಕ್ಕೆ ಹೊರಟು ಹೋಗುವಂತೆ ಹೇಳಿದನು (ಆದಿಕಾಂಡ 12:1-4).

3. ಅಬ್ರಾಮನು ಕಾನಾನ್ ದೇಶಕ್ಕೆ ಹೋದನು ಮತ್ತು ಈ ದೇಶವನ್ನು ಅವನಿಗೂ ಅವನ ಸಂತಿತಿಗೂ ಕೊಡುವೆನೆಂದು ದೇವರು ಹೇಳಿದನು (ಆದಿಕಾಂಡ 12:5, 7; ನೋಡಿರಿ 13:14-17; 15:18-21; 17:8).

4. ಎರಡು ಸಂದರ್ಭಗಳಲ್ಲಿ, ಭಯದ ಕಾರಣದಿಂದ ಅಬ್ರಹಾಮನು ತನ್ನ ಹೆಂಡತಿಯಾದ ಸಾರಯಳ ಬಗ್ಗೆ ಉಪೇಕ್ಷೆಯಿಂದ ಸುಳ್ಳು ಹೇಳಿದನು (ಆದಿಕಾಂಡ 12:10-20; 20:1-18).

5. ಕಾನಾನ್ ದೇಶದಲ್ಲಿ, ದೇವರು ಅಬ್ರಾಮನಿಗೆ ಆತನ ಸಂತತಿಯು "ಭೂಮಿಯ ದೂಳಿನಷ್ಟು" ಅಸಂಖ್ಯಾತವಾಗುವರೆಂದು ಹೇಳಿದನು (ಆದಿಕಾಂಡ 13:16).

6. ಸಾಲೇಮಿನ ಅರಸನಾದ ಮೆಲ್ಕೀಚೆದೆಕನು ಅಬ್ರಹಾಮನನ್ನು ಆಶೀರ್ವದಿಸಿದನು, ಮತ್ತು ಅಬ್ರಹಾಮನು "ಅವನಿಗೆ ಎಲ್ಲಾ ವಸ್ತುಗಳಲ್ಲಿ ಹತ್ತರಲ್ಲೊಂದು ಭಾಗವನ್ನು ಕೊಟ್ಟನು" (ಆದಿಕಾಂಡ 14:17-20).

7. ಸುಮಾರು ಎಂಬತ್ತಾರು ವರ್ಷದಲ್ಲಿ (ನೋಡಿರಿ ಆದಿಕಾಂಡ 16:16), ಮಕ್ಕಳಿಲ್ಲದ ಅಬ್ರಹಾಮನು ತನ್ನ ಸೇವಕರ ಲ್ಲೊಬ್ಬನು ತನಗೆ ಬಾಧ್ಯಸ್ಥನಾಗಬಹುದೋ ಎಂದು ದೇವರನ್ನು ಕೇಳಿದನು. ದೇವರು ಆತನಿಗೆ ಒಬ್ಬ ಮಗನು ಹುಟ್ಟುವನೆಂದು, ಆತನ ಸಂತತಿಯು ಆಕಾಶದ ನಕ್ಷತ್ರಗಳಷ್ಟಿರುವರೆಂದು ಅವನಿಗೆ ಪುನಃ ದೃಢಪಡಿಸಿದನು. "ಅಬ್ರಾಮನು ಯೆಹೋವನನ್ನು ನಂಬಿದನು; ಯೆಹೋವನು ಆತನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (ಆದಿಕಾಂಡ 15:2-6).

8. ಎಂಬತ್ತಾರು ವರ್ಷದಲ್ಲಿ, ಅಬ್ರಾಮನಿಗೆ ಸಾರಯಳ ಸೇವಕಿಯಾದ ಹಾಗರಳಲ್ಲಿ ಇಸ್ಮಾಯೇಲ ಎಂಬ ಮಗನು ಹುಟ್ಟಿದನು (ಆದಿಕಾಂಡ 16:1-16).

9. ಅಬ್ರಾಮನು ತೊಂಭತ್ತೊಂಬತ್ತು ವರ್ಷದವನಾಗಿದ್ದಾಗ, ಕರ್ತನು ಆತನ ಹೆಸರನ್ನು ಅಬ್ರಹಾಮ ಎಂದು ಬದಲಿಸಿದನು ಮತ್ತು ಸುನ್ನತಿಯ ಸಂಸ್ಕಾರವನ್ನು ಏರ್ಪಡಿಸಿದನು (ಆದಿಕಾಂಡ 17:1-6, 10-14, 23-27).

10. ದೇವರು ಅಬ್ರಹಾಮನಿಗೆ ಸಾರಯಳು/ಸಾರಳು ಒಬ್ಬ ಮಗನನ್ನು ಪಡೆಯುವಳೆಂದು ಹೇಳಿದನು. ಅಬ್ರಹಾಮನಿಗೆ ಈ ವಾಗ್ದಾನದ ವಿಷಯದಲ್ಲಿ ಹೋರಾಟವಿತ್ತು ಮತ್ತು ಇಸ್ಮಾಯೇಲನು ತನಗೆ ಬಾಧ್ಯಸ್ಥನಾಗಬಹುದೋ ಎಂದು ಕೇಳಿದನು. ದೇವರು ಉತ್ತರಿಸಿ ಹೇಳಿದ್ದೇನೆಂದರೆ, "ಹಾಗಲ್ಲ, ನಿನ್ನ ಪತ್ನಿಯಾದ ಸಾರಳಲ್ಲಿಯೇ ನಿನ್ನಿಂದ ಮಗನು ಹುಟ್ಟುವನು, ಅವನಿಗೆ ಇಸಾಕನೆಂದು ಹೆಸರಿಡಬೇಕು" (ಆದಿಕಾಂಡ 17:15-19).

11. ಅಬ್ರಹಾಮನು ನೂರು ವರ್ಷದವನಾಗಿದ್ದಾಗ, ದೇವರು ವಾಗ್ದಾನ ಮಾಡಿದ್ದ ಪ್ರಕಾರವೇ ಒಬ್ಬ ಮಗನು ಹುಟ್ಟಿದನು (ಆದಿಕಾಂಡ 21:1-7).

12. ಇಸಾಕನು ಯುವಕನಾದಾಗ, ಅವನನ್ನು ಸರ್ವಾಂಗ ಹೋಮವಾಗಿ ಅರ್ಪಿಸಬೇಕೆಂದು ದೇವರು ಅಬ್ರಹಾಮನಿಗೆ ಹೇಳಿದನು. ಅಬ್ರಹಾಮನು ಇಸಾಕನನ್ನು ಯಜ್ಞವಾಗಿ ಅರ್ಪಿಸಲು ಹೋಗುವ ಮೂಲಕ ಈ ಪರೀಕ್ಷೆಯನ್ನು ಸಂಧಿಸಿದನು, ಮತ್ತು ದೇವರು ಅವನ ಸಂಗಡ ತನ್ನ ಒಡಂಬಡಿಕೆಯನ್ನು ವಿನೂತನಗೊಳಿಸಿಕೊಂಡನು. ಆತನು ಹೇಳಿದ್ದೇನೆಂದರೆ, "ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು" (ಆದಿಕಾಂಡ 22:1-18; ಇಬ್ರಿಯ 11:17-19; ಯಾಕೋಬ 2:21-23).

13. ಸಾರಳು 127ನೇ ವಯಸ್ಸಿನಲ್ಲಿ ಮರಣಿಸಿದಳು. ಅಬ್ರಹಾಮನು ಆಕೆಯ ಸಮಾಧಿಗಾಗಿ ಮಕ್ಪೇಲದಲ್ಲಿ ಒಂದು ಗವಿಯನ್ನು ಕೊಂಡು ಕೊಂಡನು. ಕಾನಾನಿನಲ್ಲಿ ಅಬ್ರಹಾಮನಿಗೆ ಸ್ವಂತ ಆಸ್ತಿಯಾದ ಭೂಮಿ ಇದೊಂದೇ ಆಗಿತ್ತು (ಆದಿಕಾಂಡ 23:1-20; ಅಪೊಸ್ತಲರ ಕೃತ್ಯಗಳು 7:5; ಇಬ್ರಿಯ 11:8-10).

14. ಒಂದು ಹಂತದಲ್ಲಿ, ಅಬ್ರಹಾಮನು ಕೆಟೂರಳೆಂಬವಳನ್ನು ಉಪಪತ್ನಿಯಾಗಿ ತೆಗೆದುಕೊಂಡನು, ಆಕೆಯಲ್ಲಿ ಅವನಿಗೆ ಆರು ಪುತ್ರರು ಹುಟ್ಟಿದರು (ಆದಿಕಾಂಡ 25:1-4).

15. ಅಬ್ರಹಾಮನು 175 ವರ್ಷದವನಾಗಿದ್ದಾಗ "ಪೂರ್ಣಾಯುಷ್ಯದಿಂದ ದಿನತುಂಬಿದ ಮುದುಕನಾಗಿ" ಮರಣಿಸಿದನು (ಆದಿಕಾಂಡ 25:7, 8).

## ದೇವರಲ್ಲಿ ನಂಬಿಕೆ . . . ಆದರೆ ಯೇಸುವಿನಲ್ಲಿ ನಂಬಿಕೆಯಲ್ಲವೋ (ಅಧ್ಯಾಯ 4)

ಕೆಲವರು ರೋಮಾ 4ನೇ ಅಧ್ಯಾಯವನ್ನು ಉಪಯೋಗಿಸಿ ದೇವರಿಂದ ಅಂಗೀಕರಿಸಲ್ಪಡುವದಕ್ಕೆ ಕ್ರಿಸ್ತನಲ್ಲಿ ನಂಬಿಕೆಯಿಡುವ ಅವಶ್ಯಕತೆಯಿಲ್ಲ ಎಂದು "ಸಾಭಿತುಗೊಳಿಸಲು" ಪ್ರಯತ್ನಿಸುತ್ತಾರೆ.[45] ಅವರು ತೋರಿಸುವದೇನೆಂದರೆ, "ಅಬ್ರಹಾಮನು ದೇವರನ್ನು ನಂಬಿದನು, ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು" (4:3; ಒತ್ತಿ ಹೇಳಿದ್ದು ನನ್ನದು; ನೋಡಿರಿ 4:17) ಮತ್ತು ನಾವು "ಅಬ್ರಹಾಮನಲ್ಲಿದ್ದಂಥ ನಂಬಿಕೆಯನ್ನು" ಹೊಂದಿರಬೇಕು (4:16). ಅಷ್ಟುಮಾತ್ರವಲ್ಲದೆ, ಈ ಅಧ್ಯಾಯವು ನಮ್ಮ ನಂಬಿಕೆಯ ಬಗ್ಗೆ ಮಾತಾಡುವಾಗ, ಅದು *ದೇವರ* ಮೇಲಿನ ನಂಬಿಕೆಯನ್ನು ಒತ್ತಿ ಹೇಳುತ್ತೆಂದು ಅವರು ಎತ್ತಿ ತೋರಿಸುತ್ತಾರೆ (4:5, 24). ಆದುದರಿಂದ, ಅವರು ಮುಕ್ತಾಯಕ್ಕೆ ಬರುವದೇನೆಂದರೆ ದೇವರಲ್ಲಿ ನಂಬಿಕೆಯಿಡುವವರೆಲ್ಲರೂ-ಯೆಹೂದ್ಯರು ಸೇರಿದಂತೆ-ರಕ್ಷಣೆ ಹೊಂದುವರು, ಅವರು ಯೇಸುವಿನಲ್ಲಿ ನಂಬಿಕೆಯಿಟ್ಟರೂ ಇಡದಿದ್ದರೂ ಚಿಂತೆಯಿಲ್ಲ.

ಪೌಲನು 3:26 ರಲ್ಲಿ ಸರಳವಾಗಿ ಹೇಳಿದ್ದೇನೆಂದರೆ, ದೇವರು "*ಯೇಸುವಿನಲ್ಲಿ* ನಂಬಿಕೆಯಿಡುವವರನ್ನು ನೀತಿವಂತರೆಂದು ನೀರ್ಣಯಿಸುವವನು" (ಒತ್ತಿ ಹೇಳಿದ್ದು ನನ್ನದು). ಈ ರೀತಿಯ ವಾಕ್ಯಭಾಗಗಳು ಬಹಳಷ್ಟಿವೆ, ಆದರೆ ನಮ್ಮ ಹೇಳಿಕೆಗಳು ರೋಮಾ 4ರಲ್ಲಿನ "ಸಾಕ್ಷ್ಯಾಧಾರದ ವಾಕ್ಯಗಳು" ಗೆ ಮಾತ್ರವೇ ಸಿಮೀತವಾಗಿರಲಿವೆ.

ಮೊದಲನೆಯದಾಗಿ, ಪೌಲನು ಈ ಅಧ್ಯಾಯದಲ್ಲಿ ಯೆಹೂದ್ಯರನ್ನುದ್ದೇಶಿಸಿ ಅವರ ನೆಚ್ಚಿನ ಅಬ್ರಹಾಮನ ಬಗ್ಗೆ ಮಾತಾಡುವಾಗ ಹೊಂದಾಣಿಕೆಯ "ನಂಬಿಕೆ" ಭಾಷೆಯನ್ನು

ಉಪಯೋಗಿಸುತ್ತಿದ್ದನು. Douglas J. Moo ವ್ಯಾಖ್ಯಾನಿಸಿದ್ದೇ ನೆಂದರೆ, ಪೌಲನು "ದೇವರು ನಮ್ಮ ನಂಬಿಕೆಯ ವಸ್ತು ಎಂಬದಾಗಿ ಮಾಡಿದ್ದು ವಿರಳ. ಆತನು ಇಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಕ್ರೈಸ್ತ ನಂಬಿಕೆಯು ಅಬ್ರಹಾಮನ ನಂಬಿಕೆಯಂತಲ್ಲ ಎಂಬದನ್ನು ಮನದಟ್ಟು ಮಾಡಲು ಹಾಗೆ ಪ್ರಯತ್ನಿಸುತ್ತಾನೆ."[46]

ಎರಡನೆಯದಾಗಿ, ದೇವರಲ್ಲಿನ ನಮ್ಮ ನಂಬಿಕೆಯ ಬಗ್ಗೆ ಉಲ್ಲೇಖಿಸಲ್ಪಟ್ಟರೂ, ಆತನ ಮಗನಲ್ಲಿನ ನಂಬಿಕೆಯನ್ನು ಕೈಬಿಟ್ಟಿರುವದಿಲ್ಲ. ರೋಮಾ 4:5 ಹೇಳುವದೇನೆಂದರೆ ನಾವು "ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು" ಎಂದು ಹೇಳಲ್ಪಟ್ಟಿದ್ದೇವೆ, ಆದರೆ ನೀತಿವಂತರೆಂಬ ನಿರ್ಣಯವು ಯೇಸುವಿನ ಮರಣದ ಮೂಲಕವಷ್ಟೇ ಸಾಧ್ಯಗೊಳಿಸಲ್ಪಟ್ಟಿರುತ್ತದೆ (5:9). 4:24, 25 ರಲ್ಲಿ, ನಮ್ಮ ನಂಬಿಕೆಯು "ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ" ದೇವರಲ್ಲಿ ಇರಬೇಕೆಂದು ಓದುತ್ತೇವೆ, "ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು."

ಮೂರನೆಯದಾಗಿ, ಅಬ್ರಹಾಮನಿಗೆ ಯೇಸುವಿನ ಕುರಿತು ಎಲ್ಲವೂ ತಿಳಿಯದೇ ಇದ್ದರಿಬಹುದಾದರೂ, ತನ್ನ "ಸಂತತಿ" ಕುರಿತ ದೇವರ ವಾಗ್ದಾನದಲ್ಲಿ ಆತನು ಖಂಡಿತ ನಂಬಿಕೆಯಿಟ್ಟಿದ್ದನು (ಆದಿಕಾಂಡ 22:18; ಗಲಾತ್ಯ 3:16). ತತ್ಪರಿಣಾಮವಾಗಿ, ದೇವರು ಅಬ್ರಹಾಮನಿಗೆ ಸುವಾರ್ತೆಯನ್ನು ಸಾರಿದನು (ನೋಡಿರಿ ಗಲಾತ್ಯ 3:8), ಮತ್ತು ದೇವರು ತನಗೆ ಪ್ರಕಟಗೊಳಿಸಿದ್ದನ್ನು ಅಬ್ರಹಾಮನು ನಂಬಿದನು. ನಾವು ನಿರ್ಧಾರಕ್ಕೆ ಬರುವದೇನೆಂದರೆ, ಯಾವನಾದರೂ ಶಿಲುಬೆಯ ಈ ಕಡೆಯಲ್ಲಿ ಜೀವಿಸುವವನಾಗಿದ್ದು ಯೇಸುವಿನ ಕುರಿತು ದೇವರು ಮಾಡಿರುವ ಪ್ರಕಟಣೆಯನ್ನು ನಂಬುವದಕ್ಕೆ ನಿರಾಕರಿಸುವದಾದರೆ ಅಂಥವನನ್ನು ನಂಬಿಕೆಯ ಮಹಾನ್ ವೃದ್ಧನಾದ ಅಬ್ರಹಾಮನ ಸಂಗಡ ಒಂದೇ ಉಸಿರಿನೊಂದಿಗೆ ಉಲ್ಲೇಖಿಸಲ್ಪಡಲು ಯೋಗ್ಯನಾಗಿರುವದಿಲ್ಲ!

ಕಾಲವು ಪರಿಪೂರ್ಣವಾದಾಗ, ದೇವರು ತನ್ನನ್ನು ಯೇಸು ಕ್ರಿಸ್ತನಲ್ಲಿ ಲೋಕಕ್ಕೆ ಪ್ರಕಟಿಸಿಕೊಂಡನು (ಗಲಾತ್ಯ 4:4, 5). ಅಬ್ರಹಾಮನು ಇಂದು, ಶಿಲುಬೆಯ ಈ ಕಡೆಯಲ್ಲಿ ಜೀವಿಸುತ್ತಿದ್ದಿದ್ದರೆ, ಆತನು "ಕ್ರಿಸ್ತನಲ್ಲಿ-ತೋರಿ-ಬಂದ, ದೇವರಲ್ಲಿ ನಂಬಿಕೆಯನ್ನು" ಇಡದಿದ್ದರೆ ರಕ್ಷಿಸಲ್ಪಡಲಾರನು. "ಜನರು, ವಿಶೇಷವಾಗಿ ಈ ಕ್ರಿಸ್ತನಲ್ಲಿ ತೋರಿ ಬಂದ, ದೇವರಲ್ಲಿ ನಂಬಿಕೆಯಿಡುವದಾದರೆ ಮಾತ್ರವೇ ಅವರಿಗೆ ರಕ್ಷಣೆಯ ನಿರೀಕ್ಷೆಯಿರುತ್ತದೆ."[47]

## ವಿಧೇಯವಾಗುವಂತ ನಂಬಿಕೆ (ಅಧ್ಯಾಯ 4)

ಅಬ್ರಹಾಮನ ನಂಬಿಕೆಯು ಆಶ್ಚರ್ಯವಾದದ್ದು. ಆತನ ಬಳಿಯಲ್ಲಿ ಓದುವದಕ್ಕೆ ಬೈಬಲ್ ಇರುವ ಬದಲಿಗೆ ದೇವರ ವಾಗ್ದಾನವು ಇತ್ತಷ್ಟೆ. ಆತನು ತನ್ನ ಪೀಳಿಗೆಯಲ್ಲಿ ಕರ್ತನ ಕೆಲವೇ ವಿಶ್ವಾಸಿಗಳಲ್ಲೊಬ್ಬನಾಗಿದ್ದನು, ಅವನ ಸುತ್ತಲೂ ವಿಗ್ರಹಾರಾಧಕರು ತುಂಬಿದ್ದರು. "ಆತನಿಗೆ ನಂಬಿಕೆಯ ಮಾದರಿ ವ್ಯಕ್ತಿಗಳ ದೊಡ್ಡ ಪಟ್ಟಿಯು ಇರಲಿಲ್ಲ; ನಿಜ ಏನೆಂದರೆ, ಆತನು ಅಂಥ ಒಂದು ಇತಿಹಾಸ ಬರೆಯಲ್ಪಡುವದಕ್ಕೆ ಸಹಾಯ

ಮಾಡುವವನಾಗಿದ್ದನು. ಆದಾಗ್ಯೂ ಅಬ್ರಹಾಮನು ದೇವರನ್ನು ನಂಬಿದನು."[48] ಅಬ್ರಹಾಮನು ನಂಬಿಕೆಯ ನಮೂನೆಯಾಗಿದ್ದನು, "ಆತನ ದಿನದಿಂದ ಇಂದಿನವರೆಗೂ ಎಲ್ಲಾ ವಿಶ್ವಾಸಿಗಳ ಒಂದು ಮೂಲಮಾದರಿ."[49]

ರೋಮಾ 4ರಲ್ಲಿ ಪ್ರಕಟಗೊಂಡಿರುವ ಪ್ರಕಾರ, ನಾವು ಅಬ್ರಹಾಮನ ನಂಬಿಕೆಯನ್ನು ಯಾವ ರೀತಿ ಸಾರಾಂಶಗೊಳಿಸಬಲ್ಲೆವು? ದೇವರು ಏನಾದರೂ ಹೇಳಿದಾಗ ಅಬ್ರಹಾಮನು ಅದನ್ನು ನಂಬಿದನು. ಅದು ಮಾನವ ತರ್ಕಕ್ಕೆ ತದ್ವಿರುದ್ಧವಾಗಿ ಕಂಡಾಗ್ಯೂ, ಆತನು ಅದನ್ನು ನಂಬಿದನು. ಅದು ಆತನ ಇಂದ್ರೀಯಗಳ ಸಾಕ್ಷ್ಯಾಧಾರಗಳಿಗೆ ವಿರುದ್ಧವೇನಿಸಿದರೂ ಅವನು ನಂಬಿದನು. ಬಹುಶಃ ಆತನಿಗೆ ದೇವರು ತನ್ನ ಮಾತನ್ನು ಯಾವ ರೀತಿ ಜಾರಿಗೆ ತರುವನೆಂಬ ಬಗ್ಗೆ ಸ್ವಲ್ಪ ತೊಳಲಾಟವಿದ್ದಿರಬಹುದು, ಆದರೆ ಆತನು ತನ್ನ ನಂಬಿಕೆಯನ್ನು ಬಿಟ್ಟುಬಿಡಲು ನಿರಾಕರಿಸಿದನು. ಆತನು ತನ್ನ ನಂಬಿಕೆಯಲ್ಲಿ ಛಲಬಿಡದೆ ಸಾಗಿದನು ಮತ್ತು ತನ್ನ ಜೀವಿತವನ್ನು ನಂಬಿಕೆಯ ಮೇಲೆ ಆಧಾರಗೊಳಿಸಿದನು. ದೇವರು ಆ ನಂಬಿಕೆಯನ್ನು ನೋಡಿ "ಅವನ [ಅಬ್ರಹಾಮನ[ ಲೆಕ್ಕಕ್ಕೆ ನೀತಿಯೆಂದು ಎಣಿಸಿದನು" (4:3).

ಇಂದು ಕೆಲವರು ಯೇಸುವನ್ನು ನಂಬುವದಾಗಿ ಹೇಳಿಕೊಳ್ಳುತ್ತಾರೆ, ಆದರೆ ಅವರ ನಂಬಿಕೆಯು ಅಬ್ರಹಾಮನಲ್ಲಿದ್ದಂಥ ನಂಬಿಕೆಗಿಂತ ಬಹಳ ಅಜಗಜಾಂತರದಲ್ಲಿರುತ್ತದೆ. "The great Blondin" ಎಂದು ಕರೆಯಿಸಿಕೊಳ್ಳುತ್ತಿದ್ದ Jean Francois Graveletನ ಕಥೆಯು ಈ ವಿಧವಾದ ದೋಷ ಪೂರಿತ ನಂಬಿಕೆಯನ್ನು ದೃಷ್ಟಾಂತಪಡಿಸುತ್ತದೆ.

> Blondin ಒಬ್ಬ ಪ್ರಸಿದ್ಧ ಪ್ರೆಂಚ್ ಸಾಹಸಕ್ರೀಡೆಯಾದ ಬಿಗಿ ಹಗ್ಗದ (French tightrope) ಮೇಲೆ ನಡೆಯುವವನಾಗಿದ್ದನು, ಆತನು ಹತ್ತೊಂಬತ್ತನೆಯ ಶತಮಾನದ ನಂತರದ ಭಾಗದಲ್ಲಿ ಬದುಕಿದ್ದನು. ಒಮ್ಮೆ ಆತನು ನಯಾಗರ ಜಲಪಾತದ (Niagara Falls) ಮೇಲೆ ಬಿಗಿಯಾದ ಹಗ್ಗವನ್ನು ಕಟ್ಟಿದನು ಮತ್ತು ಈ ಕಡೆಯಿಂದ ಆ ಕಡೆಗೆ ಹಗ್ಗದ ಮೇಲೆ ನಡೆದು ಸಾಗಿದನು. Blondin ಜಲಪಾತದ ಅಮೆರಿಕದ ಕಡೆಯ ಭಾಗಕ್ಕೆ ಬಂದಾಗ ಸಾವಿರಾರು ಜನರು ಹರ್ಷೋದ್ಗಾರ ಮಾಡಿದರು.
>
> Blondin ಜನರ ಗುಂಪನ್ನು ಶಾಂತಗೊಳಿಸಿ ಹೇಳಿದ್ದೇನೆಂದರೆ, "ನಾನು ಪುನಃ ಬಿಗಿ ಹಗ್ಗದ ಮೇಲೆ ಆ ಕಡೆ ಹೋಗಲಿದ್ದೇನೆ, ಆದರೆ ಈ ಸಾರಿ ನನ್ನ ಬೆನ್ನಿನ ಮೇಲೆ ಯಾರಾದರೊಬ್ಬರನ್ನು ಕರೆದೊಯ್ಯುವೆನು. ನಿಮಗೆ ನನ್ನಲ್ಲಿ ನಂಬಿಕೆಯಿದೆಯಾ?"
>
> ಜನರ ಗುಂಪು "ನಾವು ನಂಬುತ್ತೇವೆ! ನಾವು ನಂಬುತ್ತೇವೆ!" ಎಂದು ಕೋಗಿದರು ಆದರೆ Blondin ಅವರಿಗೆ "ನನ್ನ ಬೆನ್ನಿನ ಮೇಲೆ ಕುಳಿತು ಬರುವ ಆ ಮನುಷ್ಯನು ಯಾರು?" ಎಂದು ಕೇಳಿದಾಗ ಗುಂಪು ನಿಶಬ್ಧವಾಯಿತು. ಅಂತಿಮವಾಗಿ, ಒಬ್ಬ ವ್ಯಕ್ತಿಯು ಮುಂದೆ ಬಂದನು, ಬ್ಲೋಂಡಿನ್ ಬೆನ್ನಿನ ಮೇಲೆ ಕುಳಿತನು ಮತ್ತು ತನ್ನನ್ನು ಆ ಕಡೆಯ ವರೆಗೂ ಹೊತ್ತು ಕೊಂಡು ಹೋಗಲು ಸಮ್ಮತಿಸಿದನು.
>
> ಸಾವಿರಾರು ಜನರು "ನಾವು ನಂಬುತ್ತೇವೆ!" ಎಂದರು ಆದರೆ ಒಬ್ಬನೇ ಒಬ್ಬನು ಮಾತ್ರವೇ ತಾನು ನಂಬಿದ ವಿಷಯಕ್ಕೆ ತನ್ನ ಜೀವಿತವನ್ನು ಅರ್ಪಿಸಿದನು.[50]

ಅಬ್ರಹಾಮನ ನಂಬಿಕೆಯು ಬರಿದಾದ ಮಾತುಗಳಲ್ಲಿ ಮಾತ್ರ ವ್ಯಕ್ತಗೊಳಿಸಲ್ಪಡಲಿಲ್ಲ. ಆತನು ತಾನು ನಂಬಿದ್ದ ವಿಷಯಕ್ಕೆ ತನ್ನ ಜೀವಿತವನ್ನೇ ಆರ್ಪಿಸಿದನು; ದೇವರು ಹೇಳಿದ್ದನ್ನು ಮಾಡುವದಕ್ಕೆ ತನ್ನನ್ನು ಪ್ರತ್ಯೇಕಿಸಿಕೊಂಡನು. ನಾವು ಸಹ ಅಬ್ರಹಾಮನ

ನಂಬಿಕೆಯ ಹೆಜ್ಜೆ ಜಾಡುಗಳನ್ನು ಅನುಸರಿಸಬೇಕು.

## ಪೌಲನು Vs ಯಾಕೋಬ? (4:2)

ಯಾಕೋಬ 2:21 ಅಬ್ರಹಾಮನು ಕ್ರಿಯೆಗಳಿಂದ ನೀತಿವಂತನೆಂದು ನಿರ್ಣಯಿಸಲ್ಪಟ್ಟನೆಂದು ಹೇಳುತ್ತದೆಂಬದು ಕೆಲವರಿಗೆ ಮನಸ್ಸಿನ ಶಾಂತಿಯನ್ನು ಕದಡಬಹುದು. Martin Lutherನು ಯಾಕೋಬ ಪತ್ರಿಕೆಯನ್ನು "ಕ್ಷುಲ್ಲಕ ಪತ್ರಿಕೆ" ಎಂದು ಕರೆಯುವಂತೆ ಮಾಡಿದ್ದು ಇದೇ ವಚನವೆಂದು ತೋರುತ್ತದೆ.[51] ರೋಮಾ 4:2ರಲ್ಲಿ, ಅಬ್ರಹಾಮನು ಕ್ರಿಯೆಗಳಿಂದ ನೀತಿವಂತನೆಂದು ನಿರ್ಣಯಿಸಲ್ಪಡಲಿಲ್ಲ ಎಂಬ ಅರ್ಥದಲ್ಲಿ ಪೌಲನು ಹೇಳಿದನು. ಇನ್ನೊಂದೆಡೆ, ಯಾಕೋಬನು ಹೇಳುತ್ತಾನೆ, ಅಬ್ರಹಾಮನು ಕ್ರಿಯೆಗಳಿಂದ ನೀತಿವಂತನಾದನೆಂಬದಾಗಿ. ಯಾಕೋಬ ಮತ್ತು ಪೌಲನ ನಡುವೆ ಹೇಗೆ ಸಂಧಾನ ಏರ್ಪಡಿಸಬಹುದು?

ಈ ಇಬ್ಬರು ಲೇಖಕರು ಎರಡು ಬೇರೆ ಬೇರೆ ವಿಧದ ಕ್ರಿಯೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿದ್ದಾರೆ. ಪೌಲನು *ಅರ್ಹತೆಯ* ಕ್ರಿಯೆಗಳ ಬಗ್ಗೆ ಮಾತಾಡಿದನು: ರಕ್ಷಣೆಯನ್ನು ಸಂಪಾಧಿಸಿಕೊಳ್ಳುವ ಪ್ರಯತ್ನದಲ್ಲಿ ಮಾಡಿದ ಕ್ರಿಯೆಗಳು. ಯಾಕೋಬನು *ವಿಧೇಯತೆಯ* ಕ್ರಿಯೆಗಳ ಬಗ್ಗೆ ಮಾತಾಡುತ್ತಿದ್ದಾನೆ: ದೇವರಲ್ಲಿನ ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುವ ಕ್ರಿಯೆಗಳು. ನಾವು ರೋಮಾಪುರ ಪತ್ರಿಕೆಯಲ್ಲಿ "ಕ್ರಿಯೆಗಳ" ಕುರಿತು ಪೌಲನ ಕಠಿಣ ಮಾತುಗಳನ್ನು ಓದುವಾಗ, ಆತನು ಎಲ್ಲಿಯೂ ವಿಧೇಯತೆಯ ಪ್ರಾಮುಖ್ಯತೆಯನ್ನು ಕಡೆಗಣಿಸಿರುವದಿಲ್ಲ. ವಾಸ್ತವದಲ್ಲಿ, ಆತನು ಹಲವಾರು ಸಾರಿ "ವಿಧೇಯತೆಯ ನಂಬಿಕೆ" ಬಗ್ಗೆ ಮಾತಾಡಿದನು (1:5; 16:26; ನೋಡಿರಿ 6:17; 10:16; KJV).

ಪೌಲನು ಮತ್ತು ಯಾಕೋಬರಿಬ್ಬರೂ ಒಂದೇ ಆತ್ಮನಿಂದ ಪ್ರೇರಿಸಲ್ಪಟ್ಟಿದ್ದರು (ಎಫೆಸ 4:4). ಅವರು ಪರಸ್ಪರ ತದ್ವಿರುದ್ಧವಾಗಿರುವದಿಲ್ಲ, ಆದರೆ ಒಬ್ಬರಿಗೊಬ್ಬರು ಪೂರಕವಾಗಿರುತ್ತಾರೆ. ಅವರು ಒಂದೇ ಸತ್ಯದ ಬಗ್ಗೆ ಮಾತಾಡುತ್ತಾ ಬೇರೆ ಬೇರೆ ಒತ್ತುಗಳನ್ನು ಕೊಟ್ಟಿದ್ದಾರೆ ಅಷ್ಟೆ.

## ದೇವರ ಲೆಕ್ಕ ಪುಸ್ತಕದ ಏರ್ಪಾಡು (4:3)

ಇಂದು ಬಹುಪಾಲು ಲೆಕ್ಕಾಚಾರವು ಕಂಪ್ಯೂಟರ್ ಗಳಲ್ಲಿ ಮಾಡಲಾಗುತ್ತದೆ; ಆದರೆ ನಾನು ಬಾಲಕನಾಗಿದ್ದಾಗ, ಲೆಕ್ಕಾಚಾರವನ್ನೆಲ್ಲಾ ಲೆಡ್ಜರ್ (ಖಾತೆ ಪುಸ್ತಕ) ಎಂಬ ಪುಸ್ತಕಗಳಲ್ಲಿ ಬರೆದಿಡುತ್ತಿದ್ದರು. ಉದ್ಯಮದ ಮಾಲೀಕರು ಈ ಲೆಡ್ಜರ್ ಗಳನ್ನು "ಪುಸ್ತಕಗಳು" ಎಂದು ಕರೆಯುತ್ತಿದ್ದರು ಅಥವಾ "keeping the books" (ಪುಸ್ತಕ ಬರೆದಿಡುವದು) ಎನ್ನುತ್ತಿದ್ದರು. ಒಂದು ಲೆಡ್ಜರನಲ್ಲಿ "ಸಾಲ-ಖರ್ಚು" ಎಂಬ ಒಂದು ಅಂಕಣ ಇರುತ್ತದೆ, ಇದು ಖರ್ಚುಗಳನ್ನು ಬರೆದಿಡುವ ಅಂಕಣ (ಹೊರಗೆ ಹೋದ ಹಣ) ಮತ್ತು ಒಂದು "ಜಮೆ" ಅಂಕಣವಿರುತ್ತಿತ್ತು, ಇದು ಆದಾಯ (ಒಳಗೆ ಬರುವ ಹಣ) ಬರೆದಿಡುವದಕ್ಕಾಗಿ. ಗುಮಾಸ್ತರ ಜವಾಬ್ದಾರಿಗಳಲ್ಲೊಂದೆಂದರೆ ಎರಡೂ ಅಂಕಣಗಳಲ್ಲಿನ ಮೊತ್ತವು ಸಮಾನವಾಗಿರುವಂತೆ

("ಪುಸ್ತಕಗಳಲ್ಲಿ ಸಮತೋಲನ ಕಾಪಡಿಕೊಳ್ಳು") ನೋಡಿಕೊಳ್ಳುವದಾಗಿತ್ತು.

1955 ರಲ್ಲಿ, ಒಬ್ಬ ಯುವ ಕಾಲೇಜ್ ವಿದ್ಯಾರ್ಥಿಯಾಗಿ, ನಾನು Abilene Christian College ನಲ್ಲಿ (ಈಗ ವಿಶ್ವವಿಧ್ಯಾಲಯ) ರೋಮಾಪುರ ಪತ್ರಿಕೆಯ ಮೇಲೆ J. D. Thomas ಬೋಧಿಸಿದ ತರಗತಿಗೆ ಹಾಜರಾಗಿದ್ದೆನು. ಸಹೋದರ Thomas ರೋಮಾ 4ನೇ ಅಧ್ಯಾಯದ ಕುರಿತು ಚರ್ಚಿಸುತ್ತಿರುವಾಗ, ಆತನು ಬೊರ್ಡಿನ ಕಡೆಗೆ ತಿರುಗಿಕೊಂಡನು. ಆತನು ಬೊರ್ಡಿನ ಮೇಲೆ ಒಂದು ದೊಡ್ಡ ಆಯಾಕಾರವನ್ನು ಬಿಡಿಸಿ ಮೇಲ್ಗಡೆಯಲ್ಲಿ "ದೇವರ ಲೆಕ್ಕ ಪುಸ್ತಕ" ಎಂದು ಬರೆದನು. ನಂತರ ಎಡಭಾಗದಲ್ಲಿ "ಸಾಲ" ಹಾಗೂ ಬಲಭಾಗದಲ್ಲಿ "ಜಮೆ" ಅಂಕಣಗಳನ್ನು ಮಾಡಿದನು. ಮತ್ತು ಆತನು ಅಬ್ರಹಾಮನ ಜೀವಿತದಲ್ಲಿನ ಪಾಪದ ಬಗ್ಗೆ ಮಾತಾಡುತ್ತಾ "ಸಾಲ" ದ ಅಂಕಣದಲ್ಲಿ "ಪಾಪ" ಎಂದು ಬರೆದು "X" ಗಳನ್ನು ಗುರುತಿಸುತ್ತಾ ಹೋದನು.

ಅಬ್ರಹಾಮನು ಅಷ್ಟೊಂದು ಒಳ್ಳೇವನಾಗಿದ್ದರೂ ಆತನು ಪಾಪ ಮಾಡಿದವನಾಗಿದ್ದನು. ಅನೇಕ ಯೆಹೂದ್ಯರು ಅಬ್ರಹಾಮನ ಪಾಪಗಳನ್ನು ನಿರ್ಲಕ್ಷಿಸಲು (ಅಥವಾ ಮನ್ನಿಸಲು) ಇಚ್ಚೆಸಿದರು, ಆದರೆ ಆತನ ಜೀವಿತದ ಕಥೆಯನ್ನು ಸುಮ್ಮನೇ ಓದುತ್ತಾ ಹೋದರೆ ಸಹ ಅನೇಕ ದೋಷಗಳನ್ನು ಬಯಲಿಗೆ ತರಬಹುದು. ಉದಾಹರಣೆಗೆ, ಭಯದ ಕಾರಣದಿಂದ, ಅಬ್ರಹಾಮನು ಜವಾಬ್ದಾರಿಯುತ ಗಂಡನಾಗಿ ತನ್ನ ಹೆಂಡತಿಯ ಬಗ್ಗೆ ಅರಸನ ಮುಂದೆ ಸಾರಳ ಕುರಿತು ಅವಳು ತನ್ನ ಹೆಂಡತಿಯಲ್ಲವೆಂದು ಎರಡು ಸಾರಿ ಸುಳ್ಳು ಹೇಳಿದನು (ಆದಿಕಾಂಡ 12:10-20; 20:1-18). ಹಾಗರಳನ್ನು ಕೆಟ್ಟದ್ದಾಗಿ ನಡೆಸಿಕೊಳ್ಳುವಂತೆ ಬಿಟ್ಟಿದ್ದು ಅಬ್ರಹಾಮನ ತಪ್ಪು ಎಂದು ಅನೇಕರು ಅಭಿಪ್ರಾಯ ಪಡುತ್ತಾರೆ (ನೋಡಿರಿ ಆದಿಕಾಂಡ 16:6-14). ಅಬ್ರಹಾಮನ ಜೀವಿತವು ಪರಿಪೂರ್ಣವಾಗಿರಲಿಲ್ಲ ಎಂಬದನ್ನು ಈ ಘಟನೆಗಳು ತೋರ್ಪಡಿಸುತ್ತವೆ. ಅಂದರೆ, ಅಬ್ರಹಾಮನು ಮನುಷ್ಯನಾಗಿದ್ದನು ಮತ್ತು ಎಲ್ಲಾ ಮನುಷ್ಯರಂತೆಯೇ ಹೋರಾಟ ಪಟ್ಟನು.

ಇಷ್ಟೊತ್ತಿಗೆ, ಸಹೋದರ Thomas ಅಬ್ರಹಾಮನ ಲೆಕ್ಕ ಪುಸ್ತಕದ "ಸಾಲ" ದ ಭಾಗದಲ್ಲಿ ಪಾಪಗಳನ್ನು ("X" ಗಳು) ಸೇರ್ಪಡೆಗೊಳಿಸಿದ್ದನು. ಈಗ ಆತನು "ಜಮೆ" ಯ ಅಂಕಣದ ಕಡೆಗೆ ತಿರುಗಿಕೊಂಡನು. ಆತನು "ಅಬ್ರಹಾಮನು ಕೆಲವು ಒಳ್ಳೇ ಕಾರ್ಯಗಳನ್ನು ಸಹ ಮಾಡಿದನು ಮತ್ತು ದೇವರಿಗೆ ಅದು ಗೊತ್ತಿತ್ತು" ಎಂದು ಹೇಳಿದನು. ಆತನು ಆ ಅಂಕಣದಲ್ಲಿ ಕೆಲವೊಂದು "X" ಗಳನ್ನು ಗುರುತಿಸಿದನು. ಹೇಗೂ, ಆತನು ಒತ್ತಿ ಹೇಳಿದ್ದೇನೆಂದರೆ ಅಬ್ರಹಾಮನು ಮಾಡಿದ ಪಾಪಗಳೊಂದಿಗೆ ಆತನ ಎಷ್ಟೇ ಒಳ್ಳೆ ಕ್ರಿಯೆಗಳು ಸಹ "ಸಮತೋಲನ" ಗೊಳಿಸಲು ಆಗಲಿಲ್ಲ. "ಪರಿಸ್ಥಿತಿಯು ನಿರೀಕ್ಷೆಯಿಲ್ಲದ್ದಾಗಿ ತೋರುತ್ತದೆ" ಎಂದು ಆತನು ಹೇಳಿದನು.

ನಂತರ ಸಹೋದರ Thomas ನಮಗೆ *logizomai*ದ ಅರ್ಥವನ್ನು ತಿಳಿಸಿದನು. ಬೋರ್ಡಿನ ಮೇಲೆ "ನಂಬಿಕೆ" ಎಂದು ಸೇರಿಸಿ, ಆತನು ಹೇಳಿದ್ದೇನೆಂದರೆ, "ದೇವರು ಜಮೆಯ ಅಂಕಣದಲ್ಲಿ 'ನಂಬಿಕೆ' ಎಂದು ಬರೆದನು ಮತ್ತು ಅದನ್ನು ನೀತಿಯೆಂದು *ಲೆಕ್ಕಕ್ಕೆ ಎಣಿಸಿದನು*, ಅಬ್ರಹಾಮನು ಬಯಸಿದಂತೆಯೇ ಇದ್ದಾನೆನೋ ಎಂಬಂತೆ ಎಣಿಸಲ್ಪಟ್ಟನು." ನಂತರ ಆತನು "ಜಮೆ" ಯ ಅಂಕಣದ ಕೆಳಗೆ "X" ಎಂದು ಬರೆದನು, ಅದು "ಸಾಲ" ದ

ಲೆಕ್ಕಕ್ಕೆ ಸಮಾನವಾಗಿತ್ತು ಮತ್ತು ಹೀಗೆ ಪುಸ್ತಕಗಳು "ಸಮತೋಲನಗೊಳಿಸಲ್ಪಟ್ಟವು."

ಸಹೋದರ Thomas ತನ್ನ ರೇಖಾಚಿತ್ರಗಳು ಪರಿಪೂರ್ಣವಾಗಿಲ್ಲದ್ದಕ್ಕಾಗಿ ಕ್ಷಮೆಯಾಚಿಸಿದನು, ಯಾಕೆಂದರೆ ಯಾವ ದೃಷ್ಟಾಂತವೂ ಪರಿಪೂರ್ಣವಾಗಿ ಮೂಡಿ ಬರಲಾರದು. "ಆದರೆ" ಆತನು ಹೇಳಿದನು, "ದೇವರು ಅಬ್ರಹಾಮನ ಪರಿಪೂರ್ಣ ವಿಧೇಯತೆಯನ್ನು (ಅದು ಹೇಗೂ ಆತನಲ್ಲಿರಲಿಲ್ಲ) ನೋಡಲಿಲ್ಲ, ಆದರೆ ಆತನ ನಂಬಿಕೆಯನ್ನು ನೋಡಿದನೆಂಬದನ್ನು ನಾನು ಒತ್ತಿ ಹೇಳಲಿಚ್ಚೆಸಿದ್ದೆನು" ಎಂದನು. ಆತನು ಅಬ್ರಹಾಮನ ನಂಬಿಕೆಯನ್ನು ನೋಡಿದಾಗ, 'ಅದು ಆತನಿಗೆ ನೀತಿಯೆಂದು ಎಣಿಸಲ್ಪಟ್ಟಿತು' (ASV). ಆತನು ಅವನ ನಂಬಿಕೆಯನ್ನು ನೀತಿಯೆಂದು ಎಣಿಸಿದನು. ಆತನು ಸ್ವಲ್ಪ ತಡೆದು ನಂತರ ಹೇಳಿದ್ದೇನೆಂದರೆ "ಅದೇ ಆಧಾರದಲ್ಲಿಯೇ ಆತನು ನಿನ್ನನ್ನು ಮತ್ತು ನನ್ನನ್ನು ರಕ್ಷಿಸುವನು."

ನಾನು ಜನರು ಹೇಳುವದನ್ನು ಕೇಳಿಸಿಕೊಂಡಿದ್ದೇನೆ, ಏನೆಂದರೆ ಅವರು ಈ ಸತ್ಯವನ್ನು ಮೊದಲ ಬಾರಿಗೆ ಕೇಳಿಸಿಕೊಂಡಾಗ, ಅವರು ದೊಡ್ಡ ನಿಟ್ಟುಸಿರನ್ನು ಬಿಟ್ಟರು. ಅವರು ಕೇವಲ, ದೇವರ ನೀತಿಯ ಬಗ್ಗೆ ಮಾತ್ರವೇ ಅರಿವು ಇದ್ದು "ಪರಲೋಕಕ್ಕೆ ಹೋಗಲು ಸಾಕಷ್ಟು ಪ್ರಯಾಸ ಪಡಬೇಕೆಂಬುದನ್ನಷ್ಟೇ" ಬಲ್ಲವರಾಗಿದ್ದರೆಂದು ತೋರುತ್ತದೆ. ಸಹೋದರ Thomasರ ತರಗತಿಯಲ್ಲಿ ಯಾರಾದರೂ ಆ ರೀತಿ ಪ್ರತಿಕ್ರಿಯಿಸಿದ್ದರ ನೆನಪು ನನಗಿಲ್ಲ. ನಾನು ಮುಂಚೆ ಎಂದಾದರೂ ಕರ್ತನನ್ನು ಮೆಚ್ಚಿಸುವದಕ್ಕೆ "ಸಾಕಷ್ಟು ಪ್ರಯಾಸ ಪಡಬೇಕೆಂದು" ಅಂದುಕೊಂಡ ನೆನಪು ನನಗಂತೂ ಇರುವದಿಲ್ಲ. ಒಬ್ಬನು "ಪರಿಪೂರ್ಣತೆಯ ಶಾಪ" ಎಂಬದರಿಂದ ಬಾಧಿಸಲ್ಪಟ್ಟಿದ್ದರೆ, ಅದಂತೂ ನಾನು ಆಗಿರಬಾರದೆಂದು ನನಗೆ ಗೊತ್ತಿತ್ತು. ಹಾಗಿದ್ದರೂ, ನನ್ನ ಹೆತ್ತವರು ಹಾಗೂ ಇತರರು ನನಗೆ ಪ್ರೀತಿ ಸ್ವರೂಪಿ ದೇವರ ಬಗ್ಗೆ ಕಲಿಸಿಕೊಟ್ಟರು. (ನಾನು ಇದನ್ನು ಸಹ ಒಪ್ಪಿಕೊಳ್ಳಲೇಬೇಕು, ಏನೆಂದರೆ, ನಾನು ರೋಮಾಪುರ ಪತ್ರಿಕೆಯ ಕುರಿತ ತರಗತಿಗೆ ಹಾಜರಾದಾಗ, ನಾನು ಅನೇಕ ಸಂಗತಿಗಳ ಬಗ್ಗೆ ಅಜ್ಞಾನದಲ್ಲಿದ್ದೆನು, ಆದರೆ ನಾನು ಯುವಕನೂ ಉತ್ಸಾಹದಿಂದ ತುಂಬಿದವನೂ ಆಗಿದ್ದೆನು, ನನ್ನ ಕರ್ತನಿಗಾಗಿ ದೊಡ್ಡ ಕಾರ್ಯಗಳನ್ನು ಮಾಡುವದಕ್ಕೆ ಸಿದ್ಧನಿದ್ದೆನು. ನಾನೇಕೆ ಚಿಂತಿಸಬೇಕು?)

ಸಹೋದರ Thomas ಬೋರ್ಡಿನ ಮೇಲೆ ಚಿತ್ರ ಬಿಡಿಸುವಾಗ ನನಗಿದ್ದ ಭಾವನೆ ನೆನಪಿದೆ, ಅದು ಏನಾದರೂ ಹೊಸದನ್ನು ಕಲಿಯಬೇಕೆಂಬ ಆಸಕ್ತಿ, ಉತ್ತೇಜನ ಮತ್ತು ಹೆಚ್ಚಿನ ತಿಳುವಳಿಕೆಯನ್ನು ಪಡೆಯುವ ಸಂತೋಷ ಆಗಿತ್ತು. ಬಹುಶಃ ನಾನು ಸ್ವಲ್ಪ ಸಂದೇಶದಿಂದ ಸಹ ಕೂಡಿದ್ದೆನು. ನನ್ನ ಮನಸ್ಸು ಮಾಹಿತಿಗಳನ್ನು ಪ್ರಕ್ರಿಯೆಗೆ ಒಳಪಡಿಸಲಾರಂಭಿಸಿತು, ವಾಕ್ಯದ ಬಗ್ಗೆ ನಾನು ಮುಂಚೆ ಕಲಿತಿದ್ದ ವಿಷಯಕ್ಕೆ ವಿರುದ್ಧವಾಗಿ ಹೋಲಿಸಿ ನೋಡುತ್ತಿತ್ತು (ಅಪೊಸ್ತಲರ ಕೃತ್ಯಗಳು 17:11). ಕ್ರಮೇಣವಾಗಿ, ರೋಮಾ 4ರಲ್ಲಿನ ಪೌಲನ ಬೋಧನೆಯು ಮನಸ್ಸಿನೊಳಗೆ ಇಳಿಯಲು ಆರಂಭಿಸಿತ್ತು. ಅದಾದ ವರ್ಷಗಳಲ್ಲಿ, ಈ ಮಹಾ ಅಧ್ಯಾಯದ ಕುರಿತ ನನ್ನ ಗೌರವ ಭಾವನೆಯು ಬೆಳೆಯುತ್ತಲೇ ಹೋಯಿತು.

ನಾನು ವ್ಯಾಸಂಗ ಮುಗಿಸಿ ಪದವಿ ಪಡೆದು ಪೂರ್ಣಾವದಿ ಬೋಧನೆಯನ್ನು

ಪ್ರಾರಂಭಿಸಿದ ಮೇಲೆ, ರೋಮಾಪುರ ಪತ್ರಿಕೆ 4ನೇ ಅಧ್ಯಾಯದ ಸತ್ಯಗಳು ಕ್ರಿಸ್ತನಲ್ಲಿನ ನನ್ನ ಸಹೋದರ ಹಾಗೂ ಸಹೋದರರಿಗೆ ಸಹ ಅಗತ್ಯವಾಗಿರುತ್ತವೆಂಬದು ತಿಳಿಯಿತು. ಸಭೆಯ ಸದಸ್ಯರೊಬ್ಬರು ಹೀಗೆ ಕೇಳುವದು ಅಸಹಜವೇನಲ್ಲ, "ನೀನು ಪರಲೋಕಕ್ಕೆ ಹೋಗಲು ಸಾಕಾಗುವಷ್ಟು ಮಾಡಿದ್ದೇನೆಂದು ಹೇಗೆ ತಿಳಿಯುವಿ?" ಆ ಪ್ರಶ್ನೆಗೆ ಒಂದು ಸಾಮಾನ್ಯವಾದ ಉತ್ತರವೆಂದರೆ, "ನೀನು ರಕ್ಷಣೆ ಹೊಂದಿರುವಿಯಾ?" ಎಂಬದಕ್ಕೆ "ಹಾಗೇ ಅನ್ನಿಸುತ್ತದೆ" ಎಂಬ ಖಚಿತವಲ್ಲದ ಪ್ರತಿಕ್ರಿಯೆ ಸಿಕ್ಕುವ ರೀತಿಯಲ್ಲಿರುತ್ತಿತ್ತು. ಕೆಲವು ಸತ್ಯವೇದ ಉಪದೇಶಕರು ಯೋಹಾನನ "ದಿಟ್ಟತನದ" ಹೇಳಿಕೆಯ ಬಗ್ಗೆ ಹೋರಾಟ ಹೊಂದಿರುತ್ತಾರೆ: "ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ" (1 ಯೋಹಾನ 5:13; ಒತ್ತಿ ಹೇಳಿದ್ದು ನನ್ನದು). ಪೌಲನು ಹೇಗೆ ಅಷ್ಟೊಂದು ಆತ್ಮವಿಶ್ವಾಸದಿಂದ ಹೇಳಬಲ್ಲವನಾಗಿದ್ದನೆಂದು ಆಶ್ಚರ್ಯಗೊಳ್ಳುತ್ತಾರೆ: "ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಅದನ್ನು ನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ *ಕೊಡುವನು*" (2 ತಿಮೊಥೆ 4:8; ಒತ್ತಿ ಹೇಳಿದ್ದು ನನ್ನದು).

ಅಲ್ಲದೆ ಪೌಲನ ಉಪದೇಶವು ವೈಯಕ್ತಿಕವಾಗಿ ನನಗೆ ಎಷ್ಟು ಪ್ರಾಮುಖ್ಯವೆಂಬುದು ಸಹ ಮನದಟ್ಟಾಗುತ್ತಲೇ ಬಂದಿರುತ್ತದೆ. ದೇವರ ಮುಂದೆ ನನ್ನ ಕಾರ್ಯನಿರ್ವಹಣೆ ಎಷ್ಟು ಅಪೂರ್ಣವಾಗಿದೆ ಎಂಬುದು ನನಗೆ ಹೆಚ್ಚೆಚ್ಚಾಗಿ ಗ್ರಹಿಕೆಗೆ ಬರುತ್ತಲೇ ಇರುತ್ತದೆ. ಅಷ್ಟುಮಾತ್ರವಲ್ಲದೆ, ಕಾಲವು ಗತಿಸಿದ ಹಾಗೆ, ಯಾವದನ್ನು ನಾನು ಮುಗಿದು ಹೋಗಲಾರದ ಶಕ್ತಿಯೆಂದು ಭಾವಿಸಿದ್ದೆನೋ ಅದು ಕಣ್ಮರೆಯಾಗಿ ಹೋಗಿರುತ್ತದೆ. ದಿನದಿಂದ ದಿನಕ್ಕೆ, ನಾನು ಹೆಚ್ಚೆಚ್ಚಾಗಿ ಪ್ರಶಂಸಿಸುವದೇನೆಂದರೆ ದೇವರು ನನ್ನ ಅಪರಿಪೂರ್ಣತೆಯ, ಅಪೂರ್ಣ, ಯಾವಾಗಲೂ ಲೋಪಗಳಿಂದ ಕೂಡಿದ ಕೆಲಸಗಳನ್ನು ನೋಡುವದಿಲ್ಲ-ಆದರೆ ನನ್ನ ನಂಬಿಕೆಯನ್ನೇ ನೋಡುತ್ತಾನೆ. ದೇವರಿಗೆ ಸ್ತೋತ್ರ!

## ಕ್ರಿಯೆಗಳ ಪಾತ್ರ (4:3, 4)

ದೇವರು ಒಬ್ಬ ವ್ಯಕ್ತಿಯನ್ನು ಆತನ ನಂಬಿಕೆಯ ನಿಮಿತ್ತದಿಂದ ನೀತಿವಂತನೆಂದು ಪರಿಗಣಿಸುತ್ತಾನಾದ್ದರಿಂದ, ಕ್ರಿಯೆಗಳು ಅನಾವಶ್ಯಕವೆಂದು ಇದರ ಅರ್ಥವೋ? ಪೌಲನು ಆದಿಕಾಂಡ 15:6ನ್ನು ಉಲ್ಲೇಖಿಸಿದಾಗ, ಆತನು ಅಬ್ರಹಾಮನ ಕ್ರಿಯೆಗಳು ಅಪ್ರಾಮುಖ್ಯವೆಂದು ಕಲಿಸುವ ಉದ್ದೇಶ ಹೊಂದಿದ್ದನೊ? ಇಲ್ಲವೇ ಇಲ್ಲ. ಹೊಸ ಒಡಂಬಡಿಕೆಯ ಲೇಖಕರು ಆದಿಕಾಂಡ 15:6ನ್ನು ಅಬ್ರಹಾಮನ ಜೀವಿತದ ಸಾರಾಂಶವೆಂದು ಪರಿಗಣಿಸಿದರು. ಗಲಾತ್ಯ 3:6-9ರಲ್ಲಿ, ಪೌಲನು ವಚನವನ್ನು ಆದಿಕಾಂಡ 12ರಲ್ಲಿನ ದೇವರ ಮಾತುಗಳೊಂದಿಗೆ ಜೋಡಿಸುತ್ತಾನೆ, ಅಲ್ಲಿ ದೇವರು ಅಬ್ರಹಾಮನನ್ನು ಕಾನಾನ್ ದೇಶಕ್ಕೆ ಹೋಗುವಂತೆ ಕರೆದನು. ಆ ಕರೆಯ ವಿಷಯವಾಗಿ, ಇಬ್ರಿಯ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ, "*ನಂಬಿಕೆಯಿಂದಲೇ* ಅಬ್ರಹಾಮನು ಕರೆಯಲ್ಪಟ್ಟ ಕೂಡಲೆ ಕರೆದಾತನ *ಮಾತನ್ನು ಕೇಳಿ* ತಾನು ಬಾಧ್ಯನಾಗಿ ಹೊಂದಬೇಕಾಗಿದ್ದ ಸ್ಥಳಕ್ಕೆ ಹೊರಟು ಹೋದನು" (ಇಬ್ರಿಯ 11:8; ಒತ್ತಿ ಹೇಳಿದ್ದು ನನ್ನದು). ಅಬ್ರಹಾಮನು ವಿಧೇಯನಾಗದೇ

ಇದ್ದಿದ್ದರೆ ಏನಾಗುತ್ತಿತ್ತು? ಆತನು ನಂಬಲಿಲ್ಲ ಎಂದು ಅರ್ಥವಾಗುತ್ತಿರಲಿಲ್ಲವೋ?

ರೋಮಾಪುರ ಪತ್ರಿಕೆಯಲ್ಲಿ, ಪೌಲನು ಪ್ರಾಥಮಿಕವಾಗಿ ಮನಸ್ಸಿನಲ್ಲಿ ಆ ವಚನದ (ಆದಿಕಾಂಡ 15:6) ಮೂಲ ಪರಿಕಲ್ಪನೆಯನ್ನು ಹೊಂದಿದ್ದನು, ಆದರೆ ಆತನು ಹದಿನಾಲ್ಕು ವರ್ಷಗಳ ನಂತರ ಒಬ್ಬ ಮಗನನ್ನು ಕೊಡುವ ನಿರ್ದಿಷ್ಟವಾದ ವಾಗ್ದಾನವನ್ನು ಸಹ ಸೇರ್ಪಡೆಗೊಳಿಸಿದ್ದನು (ನೋಡಿರಿ 4:10). ಅಬ್ರಹಾಮನಿಗೆ ಒಬ್ಬ ಮಗನು ಹುಟ್ಟುವನೆಂಬ ನಿಶ್ಚಿತತೆ ಕೊಡಲ್ಪಟ್ಟಿತ್ತು-ಆದರೆ ಅಂತಿಮವಾಗಿ ಇಸಾಕನು ಹುಟ್ಟಿದಾಗ, ಅವನೊಬ್ಬನೇ ಅಬ್ರಹಾಮನ ಮಗನಾಗಿರಲಿಲ್ಲ. ಅಬ್ರಹಾಮನು ಸಾರಳೊಂದಿಗೆ ದಾಂಪತ್ಯ ನಡಿಸಲು ನಿರಾಕರಿಸಿ, ವಾಗ್ದಾನದ ಮಗನನ್ನು ತರುವಂತೆ “ಕೇವಲ ದೇವರಲ್ಲಿ ವಿಶ್ವಾಸವಿಟ್ಟವನಾಗಿ” ಇದ್ದಿದ್ದರೆ ಏನಾಗುತ್ತಿತ್ತು? ಪುನಃ, ಆ ರೀತಿಯ ಕ್ರಿಯೆ (ಅಥವಾ ಏನೂ ಮಾಡದಿರುವದು) ಅಪನಂಬಿಕೆಯನ್ನು ತೋರ್ಪಡಿಸಿದಂತಾಗುತ್ತಿತ್ತು ಹೊರತು ನಂಬಿಕೆಯನ್ನಲ್ಲ.

ಯಾಕೋಬನು ಉಪಯೋಗಿಸಿದ ಉದಾಹರಣೆಯು ಹಲವಾರು ವರ್ಷಗಳ ನಂತರದ್ದು, ಆಗ ದೇವರು ಅಬ್ರಹಾಮನಿಗೆ ತನ್ನ ಮಗನನ್ನು ಯಜ್ಞಮಾಡುವಂತೆ ಹೇಳುತ್ತಾನೆ (ಆದಿಕಾಂಡ 22:1-14). ಯಾಕೋಬನು ಹೀಗೆ ಬರೆದನು,

> ನಮ್ಮ ಪಿತೃವಾದ ಅಬ್ರಹಾಮನು ಇಸಾಕನೆಂಬ ತನ್ನ ಮಗನನ್ನು ಯಜ್ಞವೇದಿಯ ಮೇಲೆ ಅರ್ಪಿಸಿದಾಗ ನೀತಿವಂತನೆಂಬ ನಿರ್ಣಯವನ್ನು ಹೊಂದಿದ್ದು ಕ್ರಿಯೆಗಳಿಂದಲ್ಲವೇ. ಅವನ ನಂಬಿಕೆಯು ಕ್ರಿಯೆಗಳೊಂದಿಗೆ ಪ್ರವರ್ತಿಸಿ ಆ ಕ್ರಿಯೆಗಳಿಂದಲೇ ಸಿದ್ಧಿಗೆ ಬಂತೆಂಬದು ಕಾಣಬರುತ್ತದಲ್ಲಾ. ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು ಎಂಬ ಶಾಸ್ತ್ರದ ಮಾತು ಹೀಗೆ ನೆರವೇರಿತು (ಯಾಕೋಬ 2:21-23a).

ಆ ಘಟನೆಯ ವಿಷಯವಾಗಿ, ಇಬ್ರಿಯ ಪುಸ್ತಕ ಗ್ರಂಥಕರ್ತನು ಹೀಗೆ ಬರೆದನು,

> ಅಬ್ರಹಾಮನು ಪರಿಶೋಧಿತನಾಗಿ ನಂಬಿಕೆಯಿಂದಲೇ ಇಸಾಕನನ್ನು ಸಮರ್ಪಿಸಿದನು. ಇಸಾಕನು ಅವನ ಏಕಪುತ್ರನಾಗಿದ್ದರೂ ಮತ್ತು ಇಸಾಕ ನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರೆಂದು ದೇವರು ಅವನಿಗೆ ಹೇಳಿದ್ದರೂ ಆ ವಾಗ್ದಾನಗಳನ್ನು ಹೊಂದಿದ ಅವನು ಆ ಒಬ್ಬನೇ ಮಗನನ್ನು ಸಮರ್ಪಿಸುವದಕ್ಕಿದ್ದನು. ತನ್ನ ಮಗನು ಸತ್ತರೂ ದೇವರು ಅವನನ್ನು ಬದುಕಿಸ ಸಮರ್ಥನಾಗಿದ್ದಾನೆಂದು ತಿಳುಕೊಂಡನು. ಮತ್ತು ಸತ್ತವರೊಳ ಗಿಂದಲೇ ಜೀವಿತನಾಗಿ ಬಂದವನಂತೆ ಅವನನ್ನು ಹೊಂದಿದನು (ಇಬ್ರಿಯ 11:17-19).

ದೇವರು ಅಬ್ರಹಾಮನಿಗೆ ಅವನ ಮಗನನ್ನು ಅರ್ಪಿಸಬೇಕೆಂದು ಆಜ್ಞಾಪಿಸಿದಾಗ, ಆತನು ನಿರಾಕರಿಸಿದ್ದರೆ ಏನಾಗುತ್ತಿತ್ತು? ಅಂಥ ತೀರ್ಮಾನವು “ಸತ್ತವರನ್ನೂ ಬದುಕಿಸಬಲ್ಲ ವನಾದ” ದೇವರಲ್ಲಿ ಸಂಪೂರ್ಣ ವಿಶ್ವಾಸವಿರಿಸುವದರ ಬದಲಿಗೆ ನಂಬಿಕೆಯ ಕೊರತೆ ಯನ್ನು ವ್ಯಕ್ತಪಡಿಸಿದ ಹಾಗಾಗುತ್ತಿರಲಿಲ್ಲವೇ?

ಅಬ್ರಹಾಮನ ಕ್ರಿಯೆಗಳ ಪ್ರಾಮುಖ್ಯತೆಯು ದೇವರು ಆದಿಕಾಂಡ 26:3-5ರಲ್ಲಿ ಇಸಾಕನಿಗೆ ಹೇಳಿದ ಮಾತುಗಳಲ್ಲಿ ತೋರಿಬರುತ್ತದೆ:

> ನೀನು ಈ ದೇಶದಲ್ಲಿ ಪ್ರವಾಸಿಯಾಗಿರು; ನಾನು ನಿನ್ನ ಬಳಿಯಲ್ಲಿದ್ದು ನಿನ್ನನ್ನು ಅಭಿವೃದ್ಧಿಪಡಿಸಿ ನಿನಗೂ ನಿನ್ನ ಸಂತತಿಯವರಿಗೂ ಈ ಪ್ರದೇಶಗಳನ್ನೆಲ್ಲಾ ಕೊಡುವೆನು. ನಿನ್ನ ತಂದೆಯಾದ ಅಬ್ರಹಾಮನು *ನನ್ನ ಮಾತನ್ನು ಕೇಳಿ* ನಾನು ಹೇಳಿದಂತೆ ಮಾಡಿ ನನ್ನ ಆಜ್ಞಾನೇಮವಿಧಿಗಳನ್ನು ಕೈಕೊಂಡು ನಡೆದದರಿಂದ ನಾನು ಅವನಿಗೆ ಮಾಡಿದ ಪ್ರಮಾಣವನ್ನು ನೆರವೇರಿಸಿ ನಿನ್ನ ಸಂತತಿಯವರನ್ನು ಆಕಾಶದಲ್ಲಿರುವ ನಕ್ಷತ್ರಗಳಷ್ಟಾಗಿ ಮಾಡಿ ಅವರಿಗೆ ಈ ಪ್ರದೇಶಗಳನ್ನೆಲ್ಲಾ ಕೊಡುವೆನು. ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವದು ಅಂದನು (ಒತ್ತಿ ಹೇಳಿದ್ದು ನನ್ನದು).

ಹೌದು, ಅಬ್ರಹಾಮನ ಕ್ರಿಯೆಗಳು ಪ್ರಾಮುಖ್ಯವಾಗಿದ್ದವು. ಅಬ್ರಹಾಮನು ಜೀವಿಸಿದ ಯುಗದ ಹಾಗೂ ಆತನು ಕರ್ತನಿಗೆ ಸೇವೆ ಮಾಡಿದ ಸಂದರ್ಭದಲ್ಲಿನ ಪರಿಸ್ಥಿತಿಗಳ ಬಗ್ಗೆ ಒಬ್ಬನು ಯೋಚಿಸುವಾಗ, ಕರ್ತನ ಆಜ್ಞೆಗಳಿಗೆ ಆತನ ಪೂರ್ಣಹೃದಯದ ಪ್ರತಿಕ್ರಿಯೆಯು ನಿಜಕ್ಕೂ ಪ್ರಶಂಸನೀಯವಾದದ್ದು, ವಿಸ್ಮಯಕರ ಸಹ ಆಗಿರುತ್ತದೆ. ಹೇಗೂ, ನಾವು ಎರಡು ಮುಖ್ಯ ಅಂಶಗಳ ಮೇಲಿನ ಗಮನವನ್ನು ಕಳೆದುಕೊಳ್ಳಬಾರದು: (1) ನಾವು ಅಬ್ರಹಾಮನ ಕ್ರಿಯೆಗಳ ಬಗ್ಗೆ ಮಾತಾಡುವಾಗ, ನಾವು "ಅರ್ಹತೆಯ" ಕ್ರಿಯೆಗಳ ಬಗ್ಗೆ ಮಾತಾಡುತ್ತಿಲ್ಲ, ಆದರೆ "ವಿಧೇಯತೆಯ ನಂಬಿಕೆಯ" ಬಗ್ಗೆ ಮಾತಾಡುವವರಾಗಿದ್ದೇವೆ. (2) ಅಬ್ರಹಾಮನ ಕ್ರಿಯೆಗಳು ಗಮನಾರ್ಹವಾಗಿದ್ದವಾದರೂ, ಅವುಗಳು ಪರಿಪೂರ್ಣವಾದವುಗಳಾಗಿರಲಿಲ್ಲ. ಆಗಲೂ ಆತನು "ಕೃಪೆಯಿಂದ . . . ನಂಬಿಕೆಯ ಮೂಲಕವೇ" ರಕ್ಷಿಸಲ್ಪಡಬೇಕಾಗಿತ್ತು (ಎಫೆಸ 2:8). ಆದ್ದರಿಂದಾಗಿ ವಾಕ್ಯವು ಒತ್ತಿ ಹೇಳಿದ್ದೇನೆಂದರೆ, "ಅಬ್ರಹಾಮನು ದೇವರನ್ನು ನಂಬಿದನು ಮತ್ತು ಆ ನಂಬಿಕೆಯು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು" (4:3; ಒತ್ತಿ ಹೇಳಿದ್ದು ನನ್ನದು).

## ನಾವು ಹೇಗೆ ರಕ್ಷಿಸಲ್ಪಟ್ಟಿದ್ದೇವೆ (4:5)

ಅಬ್ರಹಾಮನು ನಂಬಿಕೆಯ ಆಧಾರದಲ್ಲಿ ರಕ್ಷಿಸಲ್ಪಟ್ಟಿದ್ದು ಮಾತ್ರವಲ್ಲದೆ, ನಾವು ಸಹ ಅದೇ ಆಧಾರದಲ್ಲಿ ರಕ್ಷಿಸಲ್ಪಟ್ಟಿದ್ದೇವೆ. ನಾವು ಸಹ ದೇವರ ಆಶ್ಚರ್ಯವಾದ ಲೆಕ್ಕದ ವ್ಯವಸ್ಥೆಯ ಪ್ರಯೋಜನವನ್ನು ಪಡೆದುಕೊಳ್ಳುತ್ತೇವೆ. ಪೌಲನು ಹೀಗೆ ಬರೆದನು, "ಯಾವನು ಪುಣ್ಯಕ್ರಿಯೆಗಳನ್ನು ಮಾಡಿದವನಾಗಿರದೆ ಪಾಪಾತ್ಮರನ್ನು ನೀತಿವಂತರೆಂದು ನಿರ್ಣಯಿಸುವಾತನಲ್ಲಿ ನಂಬಿಕೆಯಿಡುತ್ತಾನೋ ಅವನ ನಂಬಿಕೆಯೇ ನೀತಿ ಎಂದು ಎಣಿಸಲ್ಪಡುವದು" (4:5). ಆತನು ಇದನ್ನು ಸಹ ಹೇಳಿದನು, "ಆದರೆ ಅದು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತೆಂಬದು ಅವನಿಗೋಸ್ಕರ ಮಾತ್ರವಲ್ಲದೆ ನಮಗೋಸ್ಕರವೂ ಬರೆದಿರುವದು. ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರನ್ನು ನಂಬುವ ನಮಗೂ ನಂಬಿಕೆಯು ನೀತಿಯೆಂದು ಎಣಿಸಲ್ಪಡುವದು" (4:23, 24). ನಾವು ಈ ಸತ್ಯವನ್ನು ಗ್ರಹಿಸಿಕೊಂಡು ಬಿಟ್ಟರೆ, ಅದು ನಮ್ಮ ಜೀವನದ ಮೇಲೆ ದೊಡ್ಡ ಪ್ರಭಾವವನ್ನು ಉಂಟು ಮಾಡತಕ್ಕದ್ದು.

ಅದು *ನಮ್ಮನ್ನು ನಿರೀಕ್ಷೆಯಿಂದ ತುಂಬಿಸಬೇಕು*. ಸಮರ್ಪಣೆಯಿಲ್ಲದ, ಅರೆಹೃದಯದ

ಕ್ರೈಸ್ತರು ಕರ್ತನಿಗಾಗಿ “ಸಾಕಷ್ಟು ಮಾಡುವ” ಬಗ್ಗೆ ಚಿಂತಿಸುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಪ್ರತಿಯೊಬ್ಬ ಪ್ರಜ್ಞಾಪೂರ್ವಕ ಕ್ರೈಸ್ತನು ತಾನು ಅಯೋಗ್ಯನೆಂಬದನ್ನು ಅರಿತಿದ್ದಾನೆ ಮತ್ತು ತಾನು ಇರಬೇಕಾದದ್ದಕ್ಕೆ ಎಷ್ಟು ಅಪೂರ್ಣನು ಎಂಬದನ್ನು ಅರ್ಥಮಾಡಿಕೊಳ್ಳುತ್ತಾನೆ. ದೇವರು ವಿಧೇಯತೆಯನ್ನು ಬೇಡುತ್ತಾನೆ ಆದರೆ ಆತನು *ಪರಿಪೂರ್ಣವಾದ* ವಿಧೇಯನ್ನು ಕೇಳುವದಿಲ್ಲ ಎಂಬುದು ಅದ್ಭುತವಾದದ್ದಲ್ಲವೇ? ನಾವು ಸಾಧ್ಯವಾದಷ್ಟು ಉತ್ತಮವಾಗಿ ಮಾಡಬೇಕೆಂದು ಆತನು ಅಪೇಕ್ಷಿಸುತ್ತಾನೆ, ಆದರೆ ಆತನು ಅತಿ ದೊಡ್ಡ ಚಿಂತೆಯು ನಮ್ಮ ವಿಧೇಯತೆಯ ಹಿಂದಿನ ಉದ್ದೇಶವೇ ಆಗಿರುತ್ತದೆ: ನಮ್ಮ ನಂಬಿಕೆ. William Barclay ಹೀಗೆ ಬರೆದನು, ಕೆಲವರು “ದೇವರ ಪ್ರೀತಿಯನ್ನು ಸಂಪಾದಿಸಿಕೊಳ್ಳಲು” ಮಾಡುವಂಥ ಯುದ್ಧದಲ್ಲಿ ಸೋಲುತ್ತಾರೆ, ಆದರೆ ಅವರು “ನಮಗೆ ದೇವರು ದಯಪಾಲಿಸುವ ಪ್ರೀತಿಯನ್ನು ಪರಿಪೂರ್ಣ ವಿಶ್ವಾಸದಲ್ಲಿ ಸ್ವೀಕರಿಸಿಕೊಳ್ಳಲು” ಕಲಿತುಕೊಳ್ಳಬೇಕಾಗಿರುತ್ತದೆ.[52]

ಅದು ನಮ್ಮನ್ನು *ಪ್ರೀತಿಯಿಂದ ತುಂಬಿಸಬೇಕು*. ನಮ್ಮನ್ನು ಅಷ್ಟೊಂದು ಪ್ರೀತಿಸುವಾತನನ್ನು ನಾವು ಹೇಗೆ ಪ್ರೀತಿಸದಿರಲು ಸಾಧ್ಯ (1 ಯೋಹಾನ 4:19)? ನಾವು “ನಂಬಿಕೆಯಿಂದ ನೀತಿವಂತರಾಗಿದ್ದೇವೆ” ಎಂಬದನ್ನು ಅರ್ಥಮಾಡಿಕೊಂಡಾಗ, ನಾವು “ದೇವರು ನಮಗಾಗಿ ಮಾಡಿದ ಕಾರ್ಯದ ಬಗ್ಗೆ ಆಶ್ಚರ್ಯವಾದ ಪ್ರಜ್ಞೆ ಹೊಂದುತ್ತೇವೆ, ಆ ಆಶ್ಚರ್ಯವು ನಮ್ಮೊಳಗಿಂದ ಆರಾಧನೆಯಾಗಿ ಹೊರಹೊಮ್ಮುತ್ತದೆ.”[53] ಇನ್ನು ಮೇಲೆ ಆರಾಧಿಸುವದು ನೆರವೇರಿಸಬೇಕಾದ ಕರ್ತವ್ಯದಂತಿರುವದಿಲ್ಲ, ಆದರೆ ಸಂಭ್ರಮಿಸತಕ್ಕ ಸದಾವಕಾಶವಾಗುತ್ತದೆ. “ಆಶ್ಚರ್ಯವಾದ ಕೃಪೆ” ಎಂಬಂತಹ ಹಾಡುಗಳು ಒಂದು ಹೊಸ ಅರ್ಥವನ್ನು ಪಡೆದುಕೊಳ್ಳುತ್ತವೆ!

ಅದು *ನಮ್ಮನ್ನು ಕ್ರಿಯೆಗೆ ನಡಿಸಬೇಕು*. ನಾವು “ನಂಬಿಕೆಯಿಂದಲೇ ನೀತಿವಂತರೆಂಬ ನಿರ್ಣಯ” ದ ಬಗ್ಗೆ ಉಪದೇಶಿಸಿದರೆ, ಜನರು, ಕ್ರಿಯೆಗಳಿಗೆ ಅಗತ್ಯವಿಲ್ಲ, ವಿಧೇಯರಾಗುವ ಅಗತ್ಯವಿಲ್ಲವೆಂದು ನಿರ್ಧರಿಸಿಬಿಡುವರು ಎಂಬದಾಗಿ ಕೆಲವರು ಚಿಂತೆಗೊಳಗಾಗುತ್ತಾರೆ. ಅದಕ್ಕೆ ತದ್ವಿರುದ್ಧವಾಗಿ, “ನಂಬಿಕೆಯಿಂದ ನೀತಿವಂತರೆಂಬ ನಿರ್ಣಯದ” ಸಿದ್ಧಾಂತವು-ಸರಿಯಾಗಿ ಅರ್ಥಮಾಡಿಕೊಳ್ಳಲ್ಪಟ್ಟರೆ-ಹೆಚ್ಚು ಪರಿಶ್ರಮ ಪಡುವಂತೆ ಹುರದುಂಬಿಸುತ್ತದೆಯೇ ಹೊರತು ಕಡಿಮೆಯಲ್ಲ. ಕ್ರಿಸ್ತನು ನಮಗೋಸ್ಕರ ತನ್ನದೆಲ್ಲವನ್ನೂ ಕೊಟ್ಟನು; ನಾವು ಆತನಿಗೆ ನಮ್ಮದೆಲ್ಲವನ್ನೂ ಸಮರ್ಪಿಸದೆ ಇರಲು ಹೇಗೆ ಸಾಧ್ಯ?

*ಮುಕ್ತಾಯ*. ದೇವರ ಲೆಕ್ಕಚಾರದ ವ್ಯವಸ್ಥೆಯು ನಿಜಕ್ಕೂ ಆಶ್ಚರ್ಯವಾದದ್ದು! ಆತನು ನಮ್ಮನ್ನು ಹೇಗೆ ಕ್ರಿಸ್ತನ ಮೂಲಕ ನೀತಿವಂತರೆಂಬದಾಗಿ ಎಣಿಸುತ್ತಾನೆಂಬುದನ್ನು ಅರ್ಥಮಾಡಿಕೊಳ್ಳುವದರಿಂದ ನಾವು ದೇವರಿಗೆ ನಂಬಿಗಸ್ತರಾಗಿರುವಂತೆ ಸಹಾಯ ಮಾಡುತ್ತದೆ. ಇಬ್ಬರು ವ್ಯಕ್ತಿಗಳು ವಿಮಾನದಲ್ಲಿ ಸಮುದ್ರದ ಮೇಲ್ಗಡೆಯಿಂದ ಹೊರಟಿದ್ದರು. ಒಬ್ಬನು ಪ್ರಶಾಂತನಾಗಿದ್ದನು, ವಿಮಾನ ಹಾಗೂ ವಿಮಾನ ಚಾಲಕನಲ್ಲಿ ದೃಢವಿಶ್ವಾಸವಿಟ್ಟಿದ್ದನು. ಮತ್ತೊಬ್ಬನು ಪ್ರಯಾಣದುದ್ದಕ್ಕೂ ಹೆದರಿದವನಾಗಿ ಕುಳಿತಿದ್ದನು. ಇಬ್ಬರೂ ಸುರಕ್ಷಿತವಾಗಿ ತಮ್ಮ ಸ್ಥಳಗಳನ್ನು ತಲುಪುತ್ತಾರೆ; ಆದರೆ ಮೊದಲ ವ್ಯಕ್ತಿಯು ವಿಮಾನ ಪ್ರಯಾಣವನ್ನು ಸಂಪೂರ್ಣವಾಗಿ ಆನಂದಿಸಿದ್ದನು, ಮತ್ತೊಬ್ಬ

ಮನುಷ್ಯನಿಗಾದರೋ ಅದೊಂದು ಹಿಂಸೆಯಂತಾಗಿತ್ತು. ರೋಮಾ 4ನೇ ಅಧ್ಯಾಯದ ಸಂದೇಶವನ್ನು ಅರ್ಥಮಾಡಿಕೊಳ್ಳುವದು ನಮಗೆ "ಪರಲೋಕಕ್ಕೆ ಪ್ರಯಾಣ ಮಾಡಲು ಬಲವನ್ನು ಕೊಡುವದು ಮಾತ್ರವಲ್ಲದೆ ಅದು ನಮಗೆ ಪ್ರಯಾಣವನ್ನು ಆನಂದಿಸಲು ಸಹ ಸಹಾಯ ಮಾಡುವದು!"

## ಎರಡು ವ್ಯವಸ್ಥೆಗಳ ವ್ಯತ್ಯಾಸ ತೋರಿಸಲ್ಪಟ್ಟಿದ್ದು (4:5-8)

4:5-8ರಲ್ಲಿ ಪೌಲನ ಮೂಲಭೂತ ಸಂದೇಶವು ಸ್ಪಷ್ಟವಾಗಿ ತೋರುತ್ತದೆ: ಕ್ರೈಸ್ತತ್ವವು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆ*ಯಲ್ಲ*; ಅದು ಒಂದು ಕೃಪೆ/ನಂಬಿಕೆಯ ವ್ಯವಸ್ಥೆ. ಕರ್ತನು ನಮ್ಮನ್ನು ನೋಡುವಾಗ, ಆತನು ನಮ್ಮ ಅಸಂಪೂರ್ಣವಾದ ವಿಧೇಯತೆಯ ಮೇಲೆ ಗಮನಹರಿಸುವದಿಲ್ಲ, ಆದರೆ ನಮ್ಮ ನಂಬಿಕೆಯನ್ನು ದೃಷ್ಟಿಸುತ್ತಾನೆ.

ಉಪದೇಶವು ಸ್ಪಷ್ಟವಾಗಿರುವಂತೆ ತೋರಿದರೂ, ಈ ಉಪದೇಶದ ಫಲಿತಾಂಶದ ಕುರಿತಾಗಿ ಗಮನಾರ್ಹ ರೀತಿಯ ವಿವಾದವಿರುತ್ತದೆ. ಅತೀರೇಕದಲ್ಲಿರುವವರು ಹೀಗೆ ಹೇಳುವರು, "ಯಾವದೇ ರೀತಿಯ ಕ್ರಿಯೆಗಳನ್ನು ಪೌಲನ ಉಪದೇಶವು ಸ್ಪಷ್ಟವಾಗಿ ಅಳಿಸಿ ಹಾಕುವದಾಗಿದೆ. ವಿಶೇಷವಾಗಿ, ರಕ್ಷಣೆ ಹೊಂದಲು ದೀಕ್ಷಾಸ್ನಾನ ಹೊಂದಬೇಕೆಂಬ ಶರತ್ತನ್ನು ತೆಗೆದು ಹಾಕುತ್ತದೆ. ನಾವು ರಕ್ಷಿಸಲ್ಪಡುವದಕ್ಕೆ ಏನಾದರೂ ಮಾಡಬೇಕೆನ್ನುವದಾದರೆ ಅದು ರಕ್ಷಣೆಯನ್ನು *ಸಂಪಾದಿಸಿಕೊಳ್ಳಬೇಕು* ಎಂದಾಗುತ್ತದೆ." ಇನ್ನೊಂದು ಅತಿರೇಕದ ಕಡೆಯಲ್ಲಿರುವವರು ಹೇಳುವದೇನೆಂದರೆ, "ವ್ಯಕ್ತಿಗಳು ಕ್ರಿಯೆಗಳಿಂದ ನೀತಿವಂತರೆಂದು ನಿರ್ಣಯಿಸಲ್ಪಡುವದಿಲ್ಲ ಎಂದು ಉಪದೇಶಿಸುವದಾದರೆ, ನಾವು ಕರ್ತನಿಗಾಗಿ ಕೆಲಸ ಮಾಡುವಂಥ ಜನರನ್ನು ನಿರುತ್ಸಾಹಗೊಳಿಸುತ್ತೇವೆ." ಈ ಪ್ರತಿಕ್ರಿಯೆಗಳು ಸಹಜವಾಗಿರುವದರಿಂದ, ಬಹುಶಃ ನಾವು ಅವುಗಳನ್ನು ಜಾಗರೂಕತೆಯಿಂದ ವಿಮರ್ಶಿಸಬೇಕಾಗಿರುತ್ತದೆ.

*ಕ್ರಿಯೆಗಳ Vs ವಿಧೇಯತೆ.* ಯಾವದೋ ಕಾರಣದಿಂದಾಗಿ, ಕೆಲವು ಲೇಖಕರು ರೋಮಾ 4ನೇ ಅಧ್ಯಾಯದ ಪ್ರಾಥಮಿಕ ಅನ್ವಯಿಕೆಯನ್ನು ದೇವರ ಮಕ್ಕಳಾಗುವದರೊಂದಿಗೆ ಸಂಬಂಧಗೊಳಿಸುತ್ತಾರೆ. ಪೌಲನು ಉಪಯೋಗಿಸಿದ ಕೆಲವು ಉದಾಹರಣೆಗಳು (ಅಬ್ರಹಾಮ ಮತ್ತು ದಾವೀದ) ಈಗಾಗಲೇ ದೇವರ ಮಕ್ಕಳಾಗಿದ್ದರೆಂಬ ಸತ್ಯಾಂಶದ ಹೊರತಾಗಿಯೂ ಅವರು ಈ ರೀತಿಯ ಅನ್ವಯಿಸುವಿಕೆಯನ್ನು ಮಾಡುತ್ತಾರೆ.[54] ಸ್ಪಷ್ಟವಾಗಿ, ಈ ಅನೇಕ ಲೇಖಕರ ಒಂದು ಪ್ರಾಥಮಿಕ ಬಯಕೆಯು ಮನುಷ್ಯನ ರಕ್ಷಣೆಯ ಕುರಿತ ದೇವರ ಸಂಕಲ್ಪದಲ್ಲಿ ದೀಕ್ಷಾಸ್ನಾನದ ಪಾತ್ರವನ್ನು ಕಡಿಮೆಗೊಳಿಸುವದಾಗಿರುತ್ತದೆ.

ನಮ್ಮಲ್ಲಿ ಕೆಲವರು ಇರುವ ಪ್ರಕಾರ, ಹೊಸ ಒಡಂಬಡಿಕೆಯ ಅನೇಕ ಪ್ರೇರಿತ ಲೇಖಕರು ಈ "ವಿರೋಧನುಡಿಗಳ" ಬಗ್ಗೆ ಅಷ್ಟಾಗಿ ಚಿಂತೆಯುಳ್ಳವರಾಗಿರಲಿಲ್ಲ. ರೋಮಾ 4 ರಲ್ಲಿ, ಪೌಲನು ಸ್ಪಷ್ಟವಾಗಿ ನಾವು ಕ್ರಿಯೆಗಳಿಂದ ರಕ್ಷಿಸಲ್ಪಟ್ಟಿಲ್ಲ ಎಂಬದಾಗಿ ಹೇಳುತ್ತಾನೆ. ಅದೇ ವೇಳೆಯಲ್ಲಿ, ರೋಮಾ 10 ರಲ್ಲಿ, ಪೌಲನು ಬಾಯಿಂದ ಅರಿಕೆ ಮಾಡುವದು (*ಮಾಡಲ್ಪಡಬೇಕಾದ* ಒಂದು ಸಂಗತಿ) ರಕ್ಷಣೆಯನ್ನು ಉಂಟುಮಾಡುತ್ತ ದೆಂದು

ಹೇಳುವದಕ್ಕೆ ಸಂಕೋಚಪಡಲಿಲ್ಲ (10:10). ರೋಮಾ 6ರಲ್ಲಿ, ಆತನು ಹೃದಯದಿಂದ ವಿಧೇಯರಾಗುವ ಬಗ್ಗೆ ಮಾತಾಡುತ್ತಾನೆ (6:17—*ಮಾಡಲ್ಪಡುವ* ಸಂಗತಿ), ಅದರೊಳಗೆ ದೀಕ್ಷಾಸ್ನಾನದಲ್ಲಿ ಹೂಣಲ್ಪಡುವದು ಸೇರಿರುತ್ತದೆ (6:3-6). ಆ ನೀರಿನ ಹೂಣಲ್ಪಡುವಿಕೆಯ ಬಳಿಕ, ಒಬ್ಬನು ಎಬ್ಬಿಸಲ್ಪಟ್ಟು "ಹೊಸಬನಾಗಿ ನಡಕೊಳ್ಳಬೇಕು" ಮತ್ತು ಇನ್ನು ಮೇಲೆ ಆತನು ಪಾಪಕ್ಕೆ ದಾಸನಾಗಿರುವದಿಲ್ಲ (6:4, 17, 18; ನೋಡಿರಿ 7:6). ಹೇಗೂ, ಪೌಲನು ರಕ್ಷಣೆಯ ಈ ಎರಡು ಕೋನಗಳನ್ನು ಸಾಮರಸ್ಯಗೊಳಿಸಲು ಪ್ರಯತ್ನಿಸಲಿಲ್ಲ. ನಾವು ಕ್ರಿಯೆಗಳಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟಿಲ್ಲವೆಂಬದು (ರಕ್ಷಣೆ) ನಿಜ. ನಾವು ರಕ್ಷಣೆ ಹೊಂದಬೇಕಾದರೆ (ನೀತಿವಂತರೆಂದು ನಿರ್ಣಯಿಸಲ್ಪಡಬೇಕೆಂದರೆ) ದೇವರಿಗೆ ವಿಧೇಯರಾಗಬೇಕೆಂಬದು, ಅದರೊಳಗೆ ನಮ್ಮ ನಂಬಿಕೆಯನ್ನು ಅರಿಕೆ ಮಾಡುವದು ಹಾಗೂ ದೀಕ್ಷಾಸ್ನಾನ ಮಾಡಿಸಿಕೊಳ್ಳುವದು ಸಹ ಅಷ್ಟೇ ನಿಜವಾದದ್ದು. ಪೌಲನು ಎರಡೂ ಸತ್ಯಗಳನ್ನು ಮುಂದಿಟ್ಟು ಅಷ್ಟಕ್ಕೇ ಬಿಟ್ಟುಬಿಡುವದರಲ್ಲಿ ಸಂತೃಪ್ತಿ ಪಟ್ಟನು.

*"ಸಂಪಾದಿಸು" Vs "ಸ್ವಂತವಾಗಿಸಿಕೊ."* ಹೇಗಿದ್ದರೂ, ನಾವು ಅನೇಕ ವೇಳೆ ನಾವು ಕ್ರಿಯೆಗಳಿಂದ ರಕ್ಷಿಸಲ್ಪಟ್ಟಿಲ್ಲವೆಂಬ ಅಪೊಸ್ತಲರ ಉಪದೇಶವನ್ನು ರಕ್ಷಣೆ ಹೊಂದಲು ನಾವು ಏನಾದರೂ ಮಾಡಬೇಕು ಎಂಬ ಬೈಬಲ್ ನ ಉಪದೇಶದೊಂದಿಗೆ ಸಾಮರಸ್ಯಗೊಳಿಸಲು ಕಷ್ಟಪಡುತ್ತೇವೆ. ಸತ್ಯವೇನೆಂದರೆ ನಾವು ನಮ್ಮ ರಕ್ಷಣೆಯನ್ನು *ಸಂಪಾದಿಸಿಕೊಳ್ಳಲಾರೆವು*, ಆದರೆ ನಾವು ಅದನ್ನು *ಸ್ವಂತವಾಗಿಸಿಕೊಳ್ಳಬೇಕು*.

ಒಂದು ಸಂಗತಿಯನ್ನು ಸಂಪಾದಿಸಿಕೊಳ್ಳುವದು ಮತ್ತು ಸ್ವಂತವಾಗಿಸಿಕೊಳ್ಳುವದರ ನಡುವಿನ ವ್ಯತ್ಯಾಸವೇನು? ಈ ದೃಷ್ಟಾಂತವನ್ನು ಆಲೋಚಿಸಿರಿ. ಒಬ್ಬ ಮನುಷ್ಯನು ಬಾಗಿಲನ್ನು ತಟ್ಟಿ ನನಗೆ ಹಸಿವೆಯಾಗಿದೆ ಎಂದು ಹೇಳುತ್ತಾನೆ. ಮನೆಯ ಯಜಮಾನನು ಅವನಿಗೆ ತನ್ನ ಬಳಿಯಲ್ಲಿ ತುಂಡು ಮಾಡಬೇಕಾಗಿರುವ ಕಟ್ಟಿಗೆಗಳಿವೆ, ಮತ್ತು ಆ ಮನುಷ್ಯನು ಅವುಗಳನ್ನು ಕಡಿದುಕೊಟ್ಟರೆ, ಅವನಿಗೆ ಊಟ ಹಾಕುವೆನೆಂದು ಯಜಮಾನನು ಹೇಳುತ್ತಾನೆ. ಆ ಮನುಷ್ಯನು ಕಟ್ಟಿಗೆಗಳನ್ನು ಕಡಿದು ಕೊಡುತ್ತಾನೆ ಮತ್ತು ಊಟವನ್ನು ಪಡೆಯುತ್ತಾನೆ. ಆ ಮನುಷ್ಯನು ತನ್ನ ಊಟವನ್ನು ಸಂಪಾದಿಸಿಕೊಂಡನು. ಮತ್ತೊಬ್ಬ ಮನುಷ್ಯನು ಇನ್ನೊಂದು ಬಾಗಿಲನ್ನು ತಟ್ಟುತ್ತಾನೆ ಮತ್ತು ತನಗೆ ಹಸಿವೆಯಾಗಿದೆ ಎಂದು ಹೇಳುತ್ತಾನೆ. ಆ ಮನೆಯ ಯಜಮಾನನು ಹೀಗೆ ಹೇಳುತ್ತಾನೆ, "ನೀನು ಸರಿಯಾದ ಸಮಯದಲ್ಲಿಯೇ ಬಂದಿರುವಿ. ನಾನು ನನಗೆ ತಿನ್ನಲು ಆಗದಷ್ಟು ಹೆಚ್ಚು ಊಟವನ್ನು ತಯಾರಿಸಿದ್ದೇನೆ, ಒಳಗೆ ಬಂದು ನನ್ನ ಸಂಗಡ ಊಟ ಮಾಡು!" ಆ ಮನುಷ್ಯನು ಒಳಗೆ ಹೋಗಬಹುದು, ಮೇಜಿನ ಮುಂದೆ ಕುಳಿತು ಕೊಡಲ್ಪಟ್ಟ ಊಟವನ್ನು ಆಸ್ವಾಧಿಸಬಹುದು. ಈ ಮನುಷ್ಯನು ತನ್ನ ಊಟವನ್ನು *ಸಂಪಾದಿಸಿಕೊಂಡಿಲ್ಲ*. ಹೇಗಿದ್ದರೂ, ಆಗಲೂ ಆತನು ಅದನ್ನು *ಸ್ವಂತವಾಗಿಸಿಕೊಳ್ಳಬೇಕಾಗಿರುತ್ತದೆ.* ಆತನು ಮನೆಯೊಳಗೆ ಪ್ರವೇಶಿಸದೆ, ಮೇಜಿನ ಮುಂದೆ ಕುಳಿತುಕೊಳ್ಳದೆ, ಊಟವನ್ನು ತನ್ನ ಬಾಯೊಳಗೆ ಹಾಕಿಕೊಳ್ಳದೆ ಇದ್ದರೆ ಏನಾಗುತ್ತದೆ? ಆತನು ತನಗೆ ಕೊಡಲ್ಪಟ್ಟ ಆಹಾರದಿಂದ ಯಾವದೇ ಪೋಷ್ಠಿಕಾಂಶಗಳನ್ನು ಪಡೆಯಲಾರನು.

ನಾವು ದೇವರ ವರದಾನವಾದ ರಕ್ಷಣೆಯನ್ನು *ಸಂಪಾಸಿಕೊಳ್ಳಲಾರೆವು,* ಆದರೆ

ನಾವು ಅದನ್ನು *ಸ್ವಂತವಾಗಿಸಿಕೊಳ್ಳಬೇಕು.* ಇಲ್ಲಿ ಪ್ರಶ್ನೆಯೇನೆಂದರೆ, ನಾವು ಅದನ್ನು ಹೇಗೆ ಮಾಡುತ್ತೇವೆ? ನಾವು ದೇವರ ಕೆಲವು ವರಗಳನ್ನು ಹೇಗೆ ಸ್ವಂತವಾಗಿಸಿಕೊಳ್ಳುತ್ತೇವೊ ಅದೇ ರೀತಿಯಾಗಿರುತ್ತದೆ. ನಾವು ದೇವರ ಆಹಾರದ ವರವನ್ನು ತಿನ್ನುವ ಮೂಲಕ ಸ್ವಂತವಾಗಿಸಿಕೊಳ್ಳುತ್ತೇವೆ. ನಾವು ಉಸಿರಾಡುವ ಮೂಲಕ ದೇವರ ಗಾಳಿಯ ವರವನ್ನು ಸ್ವಂತವಾಗಿಸಿಕೊಳ್ಳುತ್ತೇವೆ. ನಾವು ದೇವರ ರಕ್ಷಣೆಯ ವರವನ್ನು ಹೇಗೆ ಸ್ವಂತವಾಗಿಸಿಕೊಳ್ಳಬೇಕೆಂಬದು ಆ ರೀತಿಗಳಲ್ಲಿ ಸ್ಪಷ್ಟವಾಗಿರುವದಿಲ್ಲ. ವಾಸ್ತವದಲ್ಲಿ, ಅದನ್ನು ಹೇಗೆ ಮಾಡಬೇಕೆಂದು ಹೇಳಬಲ್ಲ ಏಕೈಕ ವ್ಯಕ್ತಿ ದೇವರೇ ಆಗಿದ್ದಾನೆ ಮತ್ತು ಆತನು ತನ್ನ ವಾಕ್ಯದಲ್ಲಿ ಅದನ್ನು ತಿಳಿಸುತ್ತಾನೆ. ನಾವು ರಕ್ಷಣೆಯನ್ನು *ನಂಬಿಕೆ*ಯಿಂದ ಸ್ವಂತವಾಗಿಸಿಕೊಳ್ಳಬಹುದೆಂದು ಮತ್ತು ಆ ನಂಬಿಕೆಯು *ವಿಧೇಯತೆ*ಯಲ್ಲಿ ವ್ಯಕ್ತಗೊಳ್ಳಬೇಕೆಂದು ವಾಕ್ಯವು ತಿಳಿಸುತ್ತದೆ.

*ಯಾವ ಆಯ್ಕೆಯಿಲ್ಲ Vs ವೈಯಕ್ತಿಕ ಆಯ್ಕೆ.* ಕೆಲವರು ಆಕ್ಷೇಪಣೆ ವ್ಯಕ್ತಪಡಿಸಿ, "ಆದರೆ ನಾವು ಏನಾದರೂ ಮಾಡಬೇಕು ಎಂದಾದರೆ, ಅದು *ಕೆಲಸ* ಎಂದಾಗುತ್ತದಲ್ಲವೇ. ನಾವು ಕ್ರಿಯೆಗಳಿಂದ ರಕ್ಷಿಸಲ್ಪಟ್ಟಿಲ್ಲ ಎಂದು ಪೌಲನು ಹೇಳಿದನು" ಎಂದು ಹೇಳಬಹುದು. ರೋಮಾಪುರ ಪತ್ರಿಕೆಯ ಮೇಲಿನ ಹಲವಾರು ವ್ಯಾಖ್ಯಾನಗ್ರಂಥಗಳನ್ನು ಅಧ್ಯಯನ ಮಾಡಿದ ಬಳಿಕ, ಅನೇಕ ಧಾರ್ಮಿಕ ಲೇಖಕರು "ಕ್ರಿಯೆ" ಮತ್ತು "ಕ್ರಿಯೆಗಳು" ಎಂಬ ಎರಡು ವಿಷಯಗಳ ಕಡೆಗೆ ಹೊಂದಿರುವ ಭಾವನೆಗಳು ಸ್ಪಷ್ಟವಾಗಿ ತೋರಿಬರುತ್ತವೆ.

ಮೊದಲನೆಯದಾಗಿ, "ಕ್ರಿಯೆ" ಎಂಬ ಪದವು ಕೆಲವರಲ್ಲಿ ತಳಮಳವನ್ನುಂಟು ಮಾಡುತ್ತದೆ. ಮನುಷ್ಯನು ರಕ್ಷಣೆ ಹೊಂದಲು ಏನನ್ನಾದರೂ ಮಾಡಬೇಕೆಂಬ ಅರ್ಥಬರುವಂತೆ ಏನನ್ನೂ ಬರೆಯಲು ಹೆದರುವ ವ್ಯಾಖ್ಯಾನಕಾರರು "ನಂಬಿಕೆ ಒಂದು ಕ್ರಿಯೆಯೇ ಅಲ್ಲ" ಎಂಬದಾಗಿ ವಾದಿಸುತ್ತಾರೆ. ನಂಬಿಕೆ "ಅರ್ಹತೆಯನ್ನುಂಟು ಮಾಡುವ ಕ್ರಿಯೆ" ಅಲ್ಲ ಎಂಬುದು ನಿಜ ಆದರೆ ಅದು ಒಬ್ಬನು ಮಾಡುವಂಥ ಸಂಗತಿಯಾಗಿರುವದರಿಂದ ಒಂದು ಅರ್ಥದಲ್ಲಿ "ಕ್ರಿಯೆ" ಆಗಿದೆ. Charles Hodge ಬರೆದದ್ದೇನೆಂದರೆ, "ನಂಬಿಕೆಯು ಪ್ರಾರ್ಥನೆ, ಪಶ್ಚಾತ್ತಾಪ, ಕಾಣಿಕೆ ಅರ್ಪಿಸುವಿಕೆ ಮತ್ತು ಇತ್ಯಾದಿಗಳಂತೆಯೇ ಒಂದು ಕೃತ್ಯವಾಗಿ ಪರಿಗಣಿಸಲ್ಪಟ್ಟಿರುತ್ತದೆ."[55] ಯೇಸು ನಂಬಿಕೆಗೆ ಸಂಬಂಧಿಸಿದಂತೆ "ಕ್ರಿಯೆ" ಎಂಬ ಪದವನ್ನು ಉಪಯೋಗಿಸಲು ಸಂಕೋಚಪಡಲಿಲ್ಲ. ಆತನು ಹೇಳಿದ್ದೇನೆಂದರೆ, "ದೇವರು ಮೆಚ್ಚುವ ಕೆಲಸ ಯಾವದಂದರೆ ಆತನು ಕಳುಹಿಸಿಕೊಟ್ಟವನನ್ನು ನೀವು ನಂಬುವದೇ" (ಯೋಹಾನ 6:29). NCV ಯು ಇದನ್ನು ಹೀಗೆ ತರ್ಜುಮೆಗೊಳಿಸಿರುತ್ತದೆ: "ನೀವು ಮಾಡಬೇಕೆಂದು ದೇವರು ಬಯಸುವ ಕೆಲಸ ಇದೇ: ಆತನು ಕಳುಹಿಸಿದಾತನನ್ನು ನಂಬುವದು."

"ನಂಬಿಕೆ ಒಂದು ಕ್ರಿಯೆ ಅಲ್ಲ" ಎಂದು ಪ್ರತಿಪಾದಿಸುವವರು ನಂಬಿಕೆಯನ್ನು ಈ ರೀತಿಯ ಚಿತ್ರಣದಿಂದ ವಿವರಿಸುತ್ತಾರೆ: "ನಂಬಿಕೆಯೆಂದರೆ ಬರಿದಾದ ಕೈಯನ್ನು ದೇವರ ಮುಂದೆ ಚಾಚುವದು." ಆ ಸಾದೃಶ್ಯದ ವಿಷಯದಲ್ಲಿ ನಮಗೇನೂ ವ್ಯಾಜ್ಯವಿಲ್ಲ; ಆದರೆ "ಕೈಯನ್ನು ಚಾಚುವದು" ಸಹ ಒಂದು ಕ್ರಿಯೆಯಾಗಿದೆ ಎಂಬದನ್ನು ಅವರು ಗ್ರಹಿಸುವದಿಲ್ಲವೋ? "ಕೈಯನ್ನು ಚಾಚುವದು" *ಹೆಚ್ಚಿನ* ಕ್ರಿಯೆಯಾಗಿರದೇ ಇರಬಹುದು

ಆದರೆ ಅದು *ಏನೋ ಒಂದನ್ನು* ಮಾಡುವದಾಗಿದೆಯಲ್ಲವೆ.

ಒಂದು ರೀತಿಯಲ್ಲಿ ಇದನ್ನು ನೋಡುವದಾದರೆ, ನಂಬಿಕೆಯು ದೀಕ್ಷಾಸ್ನಾನಕ್ಕಿಂತಲೂ ಹೆಚ್ಚಾದ "ಕ್ರಿಯೆ" ಆಗಿರುತ್ತದೆ: ನಂಬಿಕೆಯು ನೀವು *ಮಾಡುವಂಥ* ಒಂದು ಸಂಗತಿಯಾಗಿದೆ, ದೀಕ್ಷಾಸ್ನಾನವು *ನಿಮಗೆ ಮಾಡಲ್ಪಟ್ಟ* ಒಂದು ಸಂಗತಿಯಾಗಿದೆ. ಪಾಪಿಯು ನಂಬುವಿಕೆಯಲ್ಲಿ ಸಕ್ರಿಯನಾಗಿರುತ್ತಾನೆ; ದೀಕ್ಷಾಸ್ನಾನದಲ್ಲಿ ಆತನು ತಟಸ್ಥನಾಗಿರುತ್ತಾನೆ. David Lipscomb ಗಮನಕ್ಕೆ ತಂದಿದ್ದೇನೆಂದರೆ, ಜನರು ಕೆಲವು ಸಾರಿ ದೀಕ್ಷಾಸ್ನಾನವನ್ನು "ಒಂದು ಕ್ರಿಯೆ" ಎಂದು ಕರೆದರೂ, ವಾಸ್ತವದಲ್ಲಿ ಅದು "ಕ್ರಿಯೆಗಳ ಗುಣಲಕ್ಷಣಗಳನ್ನು ಸ್ವಲ್ಪವಾಗಿ ಹೊಂದಿರುತ್ತದೆ . . . ಅದಕ್ಕಿಂತಲೂ ನಂಬಿಕೆ ಅಥವಾ ಪಶ್ಚಾತ್ತಾಪಗಳಲ್ಲಿ ಅಧಿಕ ಕ್ರಿಯೆಗಳ ಗುಣಲಕ್ಷಣಗಳಿರುತ್ತವೆ." ಯಾಕೆಂದರೆ, ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವ್ಯಕ್ತಿಯು ತನ್ನನ್ನು ದೀಕ್ಷಾಸ್ನಾನ ಮಾಡಿಸುವವನ ಕೈಗಳಲ್ಲಿ ಒಪ್ಪಿಸಿಕೊಡುತ್ತಾನೆ, ಮತ್ತು "ಆತನು ಹೂಣಲ್ಪಟ್ಟು ಕ್ರಿಸ್ತನಲ್ಲಿ ಹೊಸಬನಾಗಿ ಎಬ್ಬಿಸಲ್ಪಡುತ್ತಾನೆ" (ನೋಡಿರಿ 6:3-6). Lipscomb ಈ ಸಾದೃಶ್ಯದೊಂದಿಗೆ ಮುಕ್ತಾಯಗೊಳಿಸುತ್ತಾನೆ: "ಒಬ್ಬ ಮನುಷ್ಯನು ಸತ್ತಾಗ ಮತ್ತು ಆತನ ಮಿತ್ರರು ಅವನ ದೇಹವನ್ನು ತೆಗೆದುಕೊಂಡು ಹೋಗಿ ಹೂಣಿಡುವಾಗ, ಯಾರೂ ಅದನ್ನು ಹೂಣಲ್ಪಟ್ಟ ಮನುಷ್ಯನು ಮಾಡಿದ ಕ್ರಿಯೆ ಎಂದು ಕರೆಯಲು ಸಾಧ್ಯವಿಲ್ಲ."[56]

ಎರಡನೆಯದಾಗಿ, ದೇವರು ಮನುಷ್ಯರಿಗೆ ಅನುಗ್ರಹಿಸಿರುವ ರಕ್ಷಣೆಯ ವರವನ್ನು ಅವರು ಸ್ವಂತವಾಗಿಸಿಕೊಳ್ಳುವದರಲ್ಲಿ "ಕ್ರಿಯೆಗಳ" (ಏನನ್ನಾದರೂ ಮಾಡುವದು) ಪಾತ್ರದ ಬಗ್ಗೆ ಧಾರ್ಮಿಕ ಲೇಖಕರು ನಿಜವಾಗಿಯೂ ಪಟ್ಟುಹಿಡಿದು ಹೋರಾಡಿರುವುದಿಲ್ಲ. ಕೆಲವರು William Templeನ ಮಾತುಗಳನ್ನು ಪ್ರತಿಧ್ವನಿಸುತ್ತಾರೆ: "ನನ್ನ ವಿಮೋಚನೆಯಲ್ಲಿ ನಾನು ಕೊಡಬಹುದಾದ ನನ್ನ ಏಕೈಕ ಕೊಡುಗೆಯು . . . [ನನ್ನ] ಪಾಪವೇ."[57] ಬಹಳಷ್ಟು ಜನರು ನಾವು ರಕ್ಷಣೆ ಹೊಂದುವದಕ್ಕೋಸ್ಕರ *ಕ್ರಿಯೆಮಾಡುವದಿಲ್ಲ*, ಆದರೆ ನಾವು ರಕ್ಷಣೆ *ಹೊಂದಿರುವ ಕಾರಣದಿಂದ* ಕ್ರಿಯೆ ಮಾಡುತ್ತೇವೆಂದು ಹೇಳುವದರಲ್ಲಿ ತೃಪ್ತಿಪಟ್ಟುಕೊಳ್ಳುತ್ತಾರೆ-ಈ ಹೇಳಿಕೆಯಲ್ಲಿ ಒಂದು ಸತ್ಯದ ಅಂಶವಿರುತ್ತದೆ, ಆದರೆ ಎಲ್ಲಾ ಸತ್ಯವನ್ನು ವ್ಯಕ್ತಗೊಳಿಸುವಲ್ಲಿ ವಿಫಲವಾಗಿರುತ್ತದೆ.

ರಕ್ಷಣೆಯು ಒಂದು ವರದಾನ, ಅದನ್ನು ಸಂಪಾದಿಸಿಕೊಳ್ಳಲು ಅಥವಾ ಅರ್ಹರಾಗಲು ಸಾಧ್ಯವಿಲ್ಲ ಎಂದು ಒಮ್ಮತವಾಗಿ ಹೇಳುವ ಈ ಲೇಖಕರ ಇಚ್ಛೆಯನ್ನು ನಾವು ಗೌರವಿಸುತ್ತೇವೆ. ಅದೇ ವೇಳೆಯಲ್ಲಿ, ಇವರು ಗತಕಾಲದಲ್ಲಿ ಕಾಲ್ವಿನ್ನರ ಪೂರ್ವದೈವ ಸಂಕಲ್ಪದಲ್ಲಿ ನಂಬುವವರ ಹಾಗೂ ಪ್ರತಿ ವ್ಯಕ್ತಿಗೂ ಸ್ವೇಚ್ಛಾ-ಚಿತ್ತವಿರುತ್ತದೆಂದು ನಂಬುವವರ ನಡುವೆ ನಡೆದ ಕದನವನ್ನು ಮರೆತಿರುವರೇನೋ ಎಂದನ್ನಿಸುತ್ತದೆ.

ಈ ಪೂರ್ವದೈವಸಂಕಲ್ಪದಲ್ಲಿ ನಂಬುವವರು ರಕ್ಷಣೆಯಲ್ಲಿ ಒಬ್ಬ ವ್ಯಕ್ತಿಗೆ ಯಾವ ಪಾತ್ರವೂ ಇರುವದಿಲ್ಲ ಎಂದು ಬೋಧಿಸುತ್ತಿದ್ದರು. ಕೆಲವರು ರಕ್ಷಿಸಲ್ಪಡಬೇಕೆಂದು ಮತ್ತು ಉಳಿದವರು ನಾಶವಾಗಬೇಕೆಂದು ದೇವರು ಜಗದುತ್ಪತ್ತಿಗೆ ಮುಂಚೆಯೇ ನಿರ್ಧರಿಸಿದ್ದಾನೆಂದು ಇವರು ನಂಬುತ್ತಾರೆ. "ಆದುಕೊಳ್ಳಲ್ಪಟ್ಟವರು" ತಮ್ಮ ರಕ್ಷಣೆಯಲ್ಲಿ ಯಾವದೇ ಪಾತ್ರವನ್ನು ವಹಿಸುವದಿಲ್ಲ ಎಂದು ಅವರು ಹೇಳುತ್ತಾರೆ. ದೇವರು ತನ್ನ

ಸ್ವೇಚ್ಛಾನುಸಾರವಾಗಿ ಅವರ ಹೃದಯಗಳಲ್ಲಿ ನಂಬಿಕೆಯನ್ನಿಡುತ್ತಾನೆ ಮತ್ತು ಅವರಿಗೆ ಆತ್ಮೀಕ ಜೀವವನ್ನು ಕೊಡುತ್ತಾನೆಂದು ನಂಬಲಾಗುತ್ತದೆ. ಇನ್ನೊಂದಡೆಯಲ್ಲಿ, ಸ್ವೇಚ್ಛಾ-ಚಿತ್ತದ ಬಗ್ಗೆ ಪ್ರತಿಪಾದಿಸುವವರು ಹೇಳುವದೇನೆಂದರೆ ಪ್ರತಿಯೊಬ್ಬ ವ್ಯಕ್ತಿಯು "ಒಬ್ಬ ಸ್ವತಂತ್ರ ನೈತಿಕ ಪ್ರತಿನಿಧಿ." ಒಬ್ಬ ವ್ಯಕ್ತಿಯು ರಕ್ಷಣೆ ಹೊಂದುವದು ಅಥವಾ ಕಳೆದುಹೋಗುವದು ದೇವರ ಸ್ವೇಚ್ಛಾನುಸಾರದ ನಿರ್ಧಾರದ ಮೇಲೆ ಅವಲಂಭೀತವಾಗಿಲ್ಲ, ಆದರೆ ಆ ವ್ಯಕ್ತಿಯು ಸುವಾರ್ತೆಗೆ ಸ್ಪಂದಿಸುವದರ ಅಥವಾ ಸ್ಪಂದಿಸದಿರುವದರ ಮೇಲೆ ಅವಲಂಭಿತವಾಗಿರುತ್ತದೆ (ನೋಡಿರಿ 10:16).

ತಮ್ಮನ್ನು "ಕ್ರೈಸ್ತರೆಂದು" ಕರೆದುಕೊಳ್ಳುವ ಬಹುಪಾಲು ಜನರ ಒಮ್ಮತದ ಅಭಿಪ್ರಾಯವೇನೆಂದರೆ ಸ್ವೇಚ್ಛಾ-ಚಿತ್ತವು ಬೈಬಲ್ ಕಲಿಸುವ ಉಪದೇಶವಾಗಿದೆ ಎಂಬುದೆ. ಹಾಗಿರುವಾಗ, ಅಂತ್ಯದಲ್ಲಿ ರಕ್ಷಣೆ ಹೊಂದುವದು ಅಥವಾ ಹೊಂದದಿರುವದು ಆ ವ್ಯಕ್ತಿಗೆ ಬಿಟ್ಟ ವಿಚಾರ ಎಂಬದಾಗಿ ಒಪ್ಪಿಕೊಳ್ಳಲು ವ್ಯಾಖ್ಯಾನಕಾರರಿಗೆ ಏಕೆ ಕಷ್ಟಕರವಾಗಿರುತ್ತದೆ?

> ಆತನು ಸುವಾರ್ತೆಯನ್ನು ಕೇಳಬಲ್ಲನು ಅಥವಾ ನಿರ್ಲಕ್ಷಿಸಬಲ್ಲನು.
> ಆತನು ಯೇಸುವನ್ನು ನಂಬಬಹುದು ಅಥವಾ ನಂಬಲು ವಿಫಲನಾಗಬಹುದು.
> ಆತನು ಕರ್ತನ ಆಮಂತ್ರಣವನ್ನು ಸ್ವೀಕರಿಸಿಕೊಳ್ಳಬಹುದು ಅಥವಾ ತಿರಸ್ಕರಿಸಬಹುದು.
> ಆತನು ದೇವರಿಗೆ ವಿಧೇಯನಾಗಬಹುದು ಅಥವಾ ವಿಧೇಯನಾಗಲು ನಿರಾಕರಿಸಬಹುದು.
> ಆತನು ಕ್ರಿಸ್ತನನ್ನು ಹಿಂಬಾಲಿಸಬಹುದು ಅಥವಾ ವಿಮುಖನಾಗಬಹುದು.

ಒಬ್ಬನು ಆಲಿಸಿ, ನಂಬಿ, ಸ್ವೀಕರಿಸಿ, ವಿಧೇಯನಾಗಿ, ಹಿಂಬಾಲಿಸಿದರೆ ಆತನು ತನ್ನ ರಕ್ಷಣೆಯನ್ನು ಸಂಪಾದಿಸಿಕೊಂಡನೆಂದು ಅರ್ಥವೋ? ಇಲ್ಲವೇ ಇಲ್ಲ. ಹೇಗೂ, ಆತನಿಗೆ ತನ್ನ ಸ್ವರಕ್ಷಣೆಯಲ್ಲಿ ಒಂದು ಪಾತ್ರವನ್ನು ಹೊಂದಿರುತ್ತಾನೆಂದು ಅರ್ಥವಾಗಿರುತ್ತದೆ. ದೇವರು ನಮಗಾಗಿ ಮಾಡಿರುವದನ್ನು ಹೋಲಿಸಿದರೆ ಇದು "ಏನೂ ಅಲ್ಲ" ಎಂದು ನಾವು ಒಪ್ಪುತ್ತೇವೆ. ಅದೊಂದು ಬಹಳ *ಚಿಕ್ಕ* ಪಾತ್ರ-ಆದರೆ ಅದೊಂದು ಪಾತ್ರವಂತೂ ನಿಜ. ಇಷ್ಟರ ಮಟ್ಟಿಗೆ, ಒಬ್ಬನು ತನ್ನ ರಕ್ಷಣೆಗೆ ಕೊಡುಗೆಯನ್ನು ನೀಡುತ್ತಾನೆ. ನಾವು "ಕೊಡುಗೆ" ಎಂಬ ಪದದ ಬಗ್ಗೆ ಕುತರ್ಕ ಮಾಡುವದು ಬೇಡ; ದೇವರ ಕೃಪೆಯನ್ನು ಸ್ವಂತವಾಗಿಸಿಕೊಳ್ಳಲು ಒಬ್ಬ ವ್ಯಕ್ತಿಯು ಒಂದು ಕಾರ್ಯವನ್ನು ಮಾಡಲೇಬೇಕೆಂದು ಬೈಬಲ್ ಕಲಿಸುತ್ತದೆಂಬದನ್ನು ಅರ್ಥಮಾಡಿಕೊಳ್ಳೋಣ (ಅಪೊಸ್ತಲರ ಕೃತ್ಯಗಳು 2:37, 38).

*ಕರ್ತವ್ಯ Vs ಪ್ರೀತಿ.* ಇದುವರೆಗೂ ಹೇಳಲ್ಪಟ್ಟಿರುವದರಲ್ಲಿ ಬಹುಪಾಲು ಸಂಗತಿಯು, ವಿಧೇಯತೆ ಅವಶ್ಯ ಎಂಬುದರ ಮೇಲಿನ ಉಪದೇಶವು ಕೃಪೆಯ ಕುರಿತ ಪೌಲನ ಉಪದೇಶವನ್ನು ನಿರರ್ಥಕಗೊಳಿಸುತ್ತದೆಂದು ಭಾವಿಸುವವರ ಕಳವಳಗಳ ಬಗ್ಗೆ ಸ್ಪಷ್ಟಗೊಳಿಸಿರುತ್ತದೆ. ಈಗ "ನಂಬಿಕೆಯಿಂದ ನೀತಿನಿರ್ಣಯ" ಎಂಬ ಉಪದೇಶವು

ಕರ್ತನಿಗಾಗಿ ಕೆಲಸಮಾಡದಂತೆ ಜನರನ್ನು ನಿರುತ್ಸಾಹಗೊಳಿಸುತ್ತದೆಂಬ ಕಳವಳದ ಬಗ್ಗೆ ಕೆಲವು ಮಾತುಗಳನ್ನು ಸೇರಿಸೋಣ. ಧರ್ಮಶಾಸ್ತ್ರದ/ಕ್ರಿಯೆಗಳ ವ್ಯವಸ್ಥೆಗೆ ವಿರುದ್ಧವಾದದ್ದಾಗಿ, ಕೃಪೆ/ನಂಬಿಕೆಯ ವ್ಯವಸ್ಥೆಯು (ಸೂಕ್ತವಾಗಿ ಅರ್ಥಮಾಡಿಕೊಂಡಲ್ಲಿ) ಕರ್ತನಿಗಾಗಿ ಹೆಚ್ಚು ಕೆಲಸಮಾಡುವಂತೆ ಪ್ರೋತ್ಸಾಹಿಸುತ್ತದೆ. J. D. Thomas ಈ ಅಂಶವನ್ನು ತೋರ್ಪಡಿಸಲು ಹಲವಾರು ದೃಷ್ಟಾಂತಗಳನ್ನು ಉಪಯೋಗಿಸಿದನು,[58] ಅದರಲ್ಲಿ ನರ್ಸ್ (ದಾಯಾದಿ) ಆಗುವದಕ್ಕೆ ತರಬೇತಿಗೊಂಡ ಒಬ್ಬ ಯುವತಿಯ ದೃಷ್ಟಾಂತ ಸೇರಿರುತ್ತದೆ:

> ಒಬ್ಬ ನರ್ಸ್ ತನ್ನ ತರಬೇತಿ ಮುಕ್ತಾಯಗೊಳಿಸಿದ ಬಳಿಕ ನ್ಯೂಮೋನಿಯದಿಂದ (ಪುಪ್ಪಸ ಜ್ವರ) ಗಂಭೀರ ಸ್ಥಿತಿಯಲ್ಲಿದ್ದ ಒಂದು ಮಗುವಿನ ಆರೈಕೆ ಮಾಡುವ ಕೆಲಸ ಪಡೆದುಕೊಳ್ಳುತ್ತಾಳೆ. ಇಲ್ಲಿ ಆಕೆಯ ಕೆಲಸವು ಮಾನವ ಅರ್ಹತೆಯ ಆಧಾರದಲ್ಲಾಗಿದೆ, ಸಂಬಳಕ್ಕಾಗಿ ಮಾಡಲ್ಪಡುವದು, ಮತ್ತು ಇಂತಿಷ್ಟು ಕೆಲಸ ಮತ್ತು ಇಂತಿಷ್ಟು ವೇತನ ಎಂಬ ಒಪ್ಪಂದವುಳ್ಳದ್ದು. ತಾರ್ಕಿಕವಾಗಿ, ಆಕೆಯು ಈ ವ್ಯವಸ್ಥೆಯ ಅಡಿಯಲ್ಲಿ ತನ್ನ ಸಂಪಾದನೆಗಳ ಬಗ್ಗೆ ಹೊಗಳಿಕೊಳ್ಳುವದಕ್ಕೆ ಅರ್ಹಳು, ಯಾಕೆಂದರೆ ಉತ್ತಮವಾಗಿ ಮಾಡಲ್ಪಟ್ಟ ಕೆಲಸಕ್ಕೆ ತಕ್ಕ ಶ್ರೇಯಸ್ಸಿಗೆ ಆಕೆಯು ಯೋಗ್ಯಳಾಗಿರುತ್ತಾಳೆ. ಆಕೆಗೆ ಕೊಡಲಾಗುವ ಸಂಬಳ ಅಥವಾ ಪ್ರತಿಫಲವು ಸಲ್ಲತಕ್ಕದ್ದಾಗಿರುತ್ತದೆ ಹೊರತು ವರದಾನ (ಉಡುಗೊರೆ) ಆಗಿರುವದಿಲ್ಲ. ವೇತನದ ಮೊತ್ತವನ್ನು ನಿಗದಿಪಡಿಸಲು ಕೃಪೆ ಅಥವಾ ಪ್ರೀತಿಯು ಉಪಯೋಗಿಸಲ್ಪಡುವದಿಲ್ಲ. ಹೇಗೂ, ನಂತರ, ನರ್ಸ್ ಮದುವೆಯಾಗುತ್ತಾಳೆ ಮತ್ತು ತಕ್ಕ ಸಮಯದಲ್ಲಿ ಆಕೆ ಮತ್ತು ಆಕೆಯ ಗಂಡನಿಗೆ ಸ್ವಂತ ಮಗುವಾಗುತ್ತದೆ, ಆ ಮಗುವಿಗೆ ನ್ಯೂಮೋನಿಯ ಸೊಂಕುತ್ತದೆ ಮತ್ತು ಒಬ್ಬ ಸಮರ್ಥಳಾದ ದಾಯಾದಿಯ ಅಗತ್ಯಬೀಳುತ್ತದೆ. ಈಗ ತಾಯಿಗೆ ಯಾವದೇ ವೇತನದ ನಿಶ್ಚಿತತೆಯ ಒಪ್ಪಂದದ ಅಗತ್ಯವಿರುವದಿಲ್ಲ, ಆಕೆಯು ಕೆಲಸದಲ್ಲಿ ತೊಡಗಿ ಮಗುವಿನ ಮೇಲಿನ ತನ್ನ ಪ್ರೀತಿ ಹಾಗೂ ಸಂಬಂಧದ ಆಧಾರದಲ್ಲಿ ಸೇವೆ ಮಾಡುತ್ತಾಳೆ. ಮಗುವು ಬಾಧೆ ಪಟ್ಟರೆ ಆಕೆಯೂ ಬಾಧೆ ಪಡುತ್ತಾಳೆ; ಮತ್ತು ಮಗುವು ಸುಧಾರಿಸಿಕೊಂಡರೆ, ಇಡೀ ಕುಟುಂಟವು ಸುಧಾರಿಸಿಕೊಳ್ಳುತ್ತದೆ. ಆಕೆಯು ಈಗ ತನ್ನ ಪ್ರೀತಿ ಹಾಗೂ ಸಂಬಂಧದ ಕಾರಣದಿಂದ ಹೆಚ್ಚು ಸಮಯ ಮತ್ತು ಹೆಚ್ಚು ಶ್ರಮದಿಂದ ದುಡಿಯುತ್ತಾಳೆ, ಮತ್ತು ಗಡಿಯಾರದ ಕಡೆಗೆ ಗಮನವನ್ನೇ ಕೊಡುವದಿಲ್ಲ. ಆಕೆಯ ಕೆಲಸವು ಈಗ ಕ್ರೈಸ್ತನ "ವಿಧೇಯತೆಯುಳ್ಳ ನಂಬಿಕೆಯ" ಕೆಲಸಕ್ಕೆ ಸಾದೃಶ್ಯವಾಗಿರುತ್ತದೆ.[59]

ದೇವರ ಆಶ್ಚರ್ಯವಾದ ಕೃಪೆಯ ಕುರಿತ ನಮ್ಮ ತಿಳುವಳಿಕೆಯಲ್ಲಿ ನಾವು ಬೆಳೆದ ಹಾಗೆ, ಕರ್ತನಿಗಾಗಿ ನಾವು ಪಡುವ ಪ್ರಯತ್ನಗಳೆಲ್ಲಾ "ನಿಮ್ಮ ಕರ್ತವ್ಯವನ್ನು ಮಾಡಬೇಕು" ಎಂಬದು ಕಡಿಮೆಯಾಗುತ್ತಾ ಹೋಗಿ "ಪ್ರೀತಿಪೂರ್ವಕವಾದ . . . ಪ್ರಯಾಸ" ಎಂಬುದು ಹೆಚ್ಚೆಚ್ಚಾಗುತ್ತಾ ಹೋಗುತ್ತದೆ (ನೋಡಿರಿ 1 ಥೆಸಲೋನಿಕ 1:3).

*ಮುಕ್ತಾಯ.* ನೀತಿನಿರ್ಣಯದ ಎರಡು ವ್ಯವಸ್ಥೆಗಳು, ಒಂದು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆ ಮತ್ತು ಕೃಪೆ/ನಂಬಿಕೆ ವ್ಯವಸ್ಥೆ, ಪರಸ್ಪರ ನೇರವಾದ ತದ್ವಿರುದ್ಧತೆ ಉಳ್ಳವುಗಳಾಗಿರುತ್ತವೆ:

- ಮೊದಲನೆಯದು ಒಬ್ಬನು ತಾನು ಮಾಡಿದ್ದರ ಬಗ್ಗೆ *ಹೊಗಳಿಕೊಳ್ಳುವದನ್ನು* ಪ್ರೋತ್ಸಾಹಿಸುತ್ತದೆ (4:2), ಎರಡನೆಯದು *ದೀನತೆ* ಮತ್ತು ದೇವರ ಮೇಲೆ ಅವಲಂಭಿತವಾಗುವ ಪ್ರಜ್ಞೆಯನ್ನು ಬೆಳೆಸುತ್ತದೆ.
- ಮೊದಲನೆಯದರಲ್ಲಿ ಒಬ್ಬನ ರಕ್ಷಣೆಯನ್ನು *ಸಂಪಾದಿಸಿ*ಕೊಳ್ಳುವದರ ಮೇಲೆ ಒತ್ತುಕೊಡಲ್ಪಟ್ಟರೆ, ಎರಡನೆಯದು ರಕ್ಷಣೆಯನ್ನು ಸಂಪಾದಿಸಿಕೊಳ್ಳುವದು ಅಸಾಧ್ಯ, ಅದು *ಕ್ರಿಯೆಗಳಿಂದ* ಉಂಟಾದದ್ದಲ್ಲ (ಉಂಟಾಗಲು ಸಾಧ್ಯವಿಲ್ಲ) ಎಂದು ಘೋಷಿಸುತ್ತದೆ.
- ಮೊದಲನೆಯದು ಮನುಷ್ಯನ *ಅರ್ಹತೆಯ* ಮೇಲೆ ಆಧಾರವಾಗಿದ್ದರೆ, ಎರಡನೆಯದು ಆತ್ಮೀಕ ಆಶೀರ್ವಾದಗಳು *ನಮ್ಮಿಂದುಂಟಾದವುಗಳಲ್ಲ,* ಆದರೆ ಕರ್ತನಿಂದಲೇ ಬಂದವುಗಳು ಎಂದು ಒಪ್ಪಿಕೊಳ್ಳುತ್ತದೆ.
- ಮೊದಲನೆಯದು ಮನುಷ್ಯನ *ಸಾಧನೆಗಳ* ಮೇಲೆ ಕೇಂದ್ರಿಕೃತವಾಗಿರುತ್ತದೆ, ಎರಡನೆಯದು *ದೇವರ ಕೃಪೆಯಲ್ಲಿ ವಿಶ್ವಾಸವಿಡುವದರ* ಮೇಲೆ ಆಧಾರವಾಗಿರುತ್ತದೆ.
- ಮೊದಲನೆಯದು ರಕ್ಷಣೆಯನ್ನು ಒಂದು *ಸಾಲ ಆಗಿದ್ದು ದೇವರು ಅದನ್ನು* ನೀಡುವದಕ್ಕೆ ಋಣಸ್ಥನಾಗಿದ್ದಾನೆಂದು ಮಾಡುವದಕ್ಕೆ ಪ್ರಯತ್ನಿಸುತ್ತದೆ (4:4), ಎರಡನೆಯದು ವಿಮೋಚನೆಯು ಕರ್ತನಿಂದ ಬರುವ *ಒಂದು ವರದಾನ* ಎಂದು ಒಪ್ಪಿಕೊಳ್ಳುತ್ತದೆ.

ಇವುಗಳ ನಡುವಿನ ತದ್ವಿರುದ್ಧತೆಯನ್ನು ನಾವು ಜಾಗರೂಕತೆಯಿಂದ ಪರಿಗಣಿಸಬೇಕು. ಪೌಲನು ಯಾವ ವ್ಯವಸ್ಥೆಯ ಬಗ್ಗೆ ಕಲಿಸಿದನು? ನೀವು ಯಾವ ವ್ಯವಸ್ಥೆಯ ಅಡಿಯಲ್ಲಿರಲು ಇಷ್ಟಪಡುತ್ತೀರಿ? ಯಾವ ವ್ಯವಸ್ಥೆಯು *ನಿರೀಕ್ಷೆಯನ್ನು* ಕೊಡುತ್ತದೆ?

ಒಮ್ಮೆ ಸುವಾರ್ತಿಕನೊಬ್ಬನು Scottish city (ಸ್ಕಾಟ್ಲ್ಯಾಂಡ್ ನಗರದ) ಒಂದು ದೊಡ್ಡ ಕೊಳಗೇರಿಯಲ್ಲಿ ಪ್ರಸಂಗಿಸುತ್ತಿದ್ದನು. ಆತನು ಕುಡಿಕರ, "ಬೀದಿ ಜನರು," ಮತ್ತು ವೇಶ್ಯೆಯರ ಸಂಗಡ ಮಾತಾಡುತ್ತಿರುವಾಗ, ಅವರನ್ನು "ತಮ್ಮನ್ನು ಗಟಾರಿನೊಳಗಿಂದ (ಚರಂಡಿಯ ಕಾಲುವೆ) ಹೊರಗೆಳೆದುಕೊಳ್ಳುವಂತೆ" ಪ್ರೋತ್ಸಾಹಿಸುತ್ತಿದ್ದನು. ಅವರು ಜೀವನದಲ್ಲಿ ಒಂದು ಹೊಸ ಆರಂಭವನ್ನು ಮಾಡಿಕೊಳ್ಳುವಂತೆ ಸ್ಫೂರ್ತಿಗೊಳಿಸಿದನು. ಆ ಗುಂಪಿನ ಕೊನೆಯಲ್ಲಿ ಪಾಪ ಮತ್ತು ತುಚ್ಛತನದಲ್ಲಿ ಮುಳುಗಿ ಹೋಗಿದ್ದ ಜೀವನವುಳ್ಳ ಒಬ್ಬ ಸ್ತ್ರೀಯು ನಿಂತುಕೊಂಡಿದ್ದಳು. ಜೀವಿತವನ್ನು ಸುಧಾರಿಸಿಕೊಳ್ಳುವ ಬಗ್ಗೆ ತಾಸುಗಟ್ಟಲೆ ವೈರಾಗ್ಯದಿಂದ ಮಾಡಿದ ಪ್ರಸಂಗವನ್ನು ಕೇಳಿದ ಬಳಿಕ, ಇನ್ನು ಆಕೆಗೆ ಸಹಿಸಿಕೊಳ್ಳಲು ಆಗಲಿಲ್ಲ. ಆಕೆಯು ಪ್ರಸಂಗಿಯನ್ನು ನೋಡಿ ಕೂಗಿದಳು, "ನಿನ್ನ ಹಗ್ಗವು ನನ್ನನ್ನು ತಲುಪಲಾಗದಷ್ಟು ಬಹಳ ಚಿಕ್ಕದು!"[60] ಯಾವದೇ ವ್ಯಕ್ತಿಯು ತನ್ನ ಪಾಪ ಮತ್ತು ನ್ಯೂನ್ಯತೆಗಳನ್ನು ಗ್ರಹಿಸಿಕೊಳ್ಳುವಾಗ ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯು ಚಾಚುವಂತ "ಹಗ್ಗವು" ಅವನನ್ನು ಅವನ ಪಾಪದಲ್ಲಿ ಸಂಧಿಸಿ ಅಪರಾಧದಿಂದ ಮೇಲೆತ್ತುವದಕ್ಕೆ ಆಗದಷ್ಟು

ಬಹಳ ಚಿಕ್ಕದೆಂದು ಬಲ್ಲವನಾಗಿರುತ್ತಾನೆ. ಕೇವಲ ಕೃಪೆಯ/ನಂಬಿಕೆಯ ವ್ಯವಸ್ಥೆಗೆ ಮಾತ್ರವೇ ಪಾಪಿಯನ್ನು ತಲುಪುವಷ್ಟು ಉದ್ದದ "ಹಗ್ಗ" ವಿರುತ್ತದೆ. ಆ "ಹಗ್ಗವು" ಶಿಲುಬೆಯ ಮೇಲಿನ ಕ್ರಿಸ್ತನ ಮರಣದಲ್ಲಿ ವ್ಯಕ್ತಗೊಳಿಸಲ್ಪಟ್ಟ ದೇವರ ಪ್ರೀತಿಯೇ!

## ದಾವೀದನು ತನ್ನ ಜೀವಿತವನ್ನು ಕೆಡಿಸಿಕೊಂಡಾಗ ಆತನಿಗೆ ಏನು ಅಗತ್ಯವಿತ್ತು (4:6-8)

ದಾವೀದನು ಬೈಬಲಿನಲ್ಲಿ ಅತ್ಯಂಥ ಪ್ರಸಿದ್ಧ ವ್ಯಕ್ತಿಗಳಲ್ಲೊಬ್ಬನು. ಬೈಬಲಿನ ನೆಚ್ಚಿನ ವ್ಯಕ್ತಿಗಳು ಯಾರೆಂದು ಆಯ್ಕೆ ಮಾಡಲು ಹೇಳಿದರೆ, ಇತನು ಖಂಡಿತವಾಗಿಯೂ ಹಳೆ ಒಡಂಬಡಿಕೆ ವ್ಯಕ್ತಿಗಳ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುತ್ತಾನೆ. ಒಬ್ಬನು ಆತನನ್ನು ಯಾವ ರೀತಿಯಲ್ಲಿ ನೋಡಿದರೂ, ಆತನೊಬ್ಬ ಬಹಳ ವಿಶೇಷ ವ್ಯಕ್ತಿಯಾಗಿರುತ್ತಾನೆ. ಆತನು ದೇವರ ಹೃದಯಕ್ಕೆ ಒಪ್ಪುವ ಮನುಷ್ಯನು ಎಂದು ಸಹ ಪರಿಚಿತನಾಗಿದ್ದಾನೆ (ಅಪೊಸ್ತಲರ ಕೃತ್ಯಗಳು 13:22).

ಹೇಗಿದ್ದರೂ, ನಾವು ಆತನ ಗೆಲುವುಗಳ ಕುರಿತು ನೋಡುವದು ಬೇಡ, ಆದರೆ ಆತನ ದುರಂತದ ಕಡೆಗೆ ಗಮನ ಹರಿಸೋಣ; ಆತನ ಸಾಧನೆಗಳ ಮಹಿಮೆಯ ಕುರಿತಲ್ಲ ಆದರೆ ಆತನ ಜೀವಿತದ ಕತ್ತಲು ದಿನಗಳ ಕುರಿತು ನೋಡೋಣ. ದಾವೀದನು ತನ್ನ ಜೀವಿತವನ್ನು ಹಾಳುಮಾಡಿಕೊಂಡಾಗ ಆತನಿಗೆ ಏನು ಅವಶ್ಯವಾಗಿತ್ತೆಂಬದರ ಬಗ್ಗೆ ನೋಡೋಣ.

ದಾವೀದನು ದೇವರಿಗೆ ಸಮೀಪವಾಗಿ ಜೀವಿಸಿದಾಗ ಜೀವನದಲ್ಲಿ ಅನೇಕ ಗೆಲುವುಗಳನ್ನು ಹೊಂದಿದ್ದನು. ಆತನು ನಂಬಿಗಸ್ತ ಕುರುಬನಾಗಿದ್ದಾಗ, ಆತನು ಗೋಲ್ಯಾತನನ್ನು ಸೋಲಿಸಿದಾಗ, ಮತ್ತು ಪರಾಕ್ರಮಿ ಯುದ್ಧ ಸೈನಿಕನಾಗಿ ಸೇವೆ ಮಾಡಿದಾಗ ದೇವರು ಆತನನ್ನು ಆಶೀರ್ವದಿಸಿದನು. ದಾವೀದನು ಸೌಲನಿಂದ ಒಂದು ಕಾಡು ಪ್ರಾಣಿಯಂತೆ ಬೇಟೆಯಾಡಲ್ಪಡುವಾಗಲೂ ದಾವೀದನು ನಂಬಿಗಸ್ತನಾಗಿದ್ದನು. ಅಂತಿಮವಾಗಿ ಆತನು ಸಿಂಹಾಸನವನ್ನು ಏರಿದಾಗ, ಇಡೀ ದೇಶವು ತನ್ನ ನಿಷ್ಠಾವಂತಿಕೆಯ ಕಾರಣದಿಂದ ದೇವರಿಗೆ ಸಮೀಪವಾಗಿ ಎಳೆಯಲ್ಪಡುವಂತೆ ಪ್ರಭಾವ ಬೀರಿದನು.

ನಂತರ ಒಂದು ದುರಂತ ಸಂಭವಿಸಿತು-ಪಾಪದ ಮೇಲೆ ಪಾಪ ಸೇರ್ಪಡೆಗೊಂಡಿತು (2 ಸಮುವೇಲ 11). ದಾವೀದನ ಸೇನೆಯು ಯುದ್ಧಕ್ಕೆ ಹೋಗಿತ್ತು, ಆದರೆ ಆತನು ಮನೆಯಲ್ಲಿಯೇ ಉಳಿದುಕೊಂಡಿದ್ದನು. ಆತನು ತನ್ನ ಅರಮನೆಯ ಮಾಳಿಗೆಯಲ್ಲಿ ನಡೆದಾಡುತ್ತಿರುವಾಗ ಕೆಳಗೆ ನೋಡಿದನು, ಅಲ್ಲಿ ಅವನಿಗೆ ಒಬ್ಬ ಸುಂದರ ಸ್ತ್ರೀಯು ಸ್ನಾನ ಮಾಡುವದು ಕಾಣಿಸಿತು. ಈ ದೃಶ್ಯದ ಕುರಿತ ವಿವರಗಳು ನಮಗೆ ಗೊತ್ತಿರುವದಿಲ್ಲ ಮತ್ತು ಊಹೆಯಿಂದ ಯಾವದೂ ಬರುವದಿಲ್ಲ-ಆದರೆ ಒಂದಂತೂ ಖಚಿತ: ದಾವೀದನು ಶೋಧನೆಗೊಳಾಗುತ್ತಿದ್ದೇನೆಂದು ಭಾವಿಸಿದಾಗ, ಆತನು *ತಕ್ಷಣವೇ* ಅಲ್ಲಿಂದ ಹೊರಟು ಹೋಗಬೇಕಿತ್ತು (2 ತಿಮೊಥೆ 2:22). ಬದಲಾಗಿ, ಆತನು ದುರಾಸೆಯನ್ನು ಬೆಳೆಯುವಂತೆ ಬಿಟ್ಟನು (ಯಾಕೋಬ 1:14).

ದಾವೀದನು ಆ ಸ್ತ್ರೀ ಬಗ್ಗೆ ವಿಚಾರಿಸಿದಾಗ, ಆಕೆಯು ಹಿತ್ತಿಯನಾದ ಊರೀಯನ-

ಆತನೊಬ್ಬ ದಾವೀದನ ಹಳೆಯ, ವಿಶ್ವಾಸಾರ್ಹ ಮಿತ್ರನು, ಯುದ್ಧ ವೀರನು, ಗತಕಾಲದಲ್ಲಿ ದಾವೀದನಿಗೋಸ್ಕರ ತನ್ನ ಪ್ರಾಣವನ್ನು ಅಪಾಯಕ್ಕೊಡ್ಡಿದ್ದ ಮನಷ್ಯನಾಗಿದ್ದನು (2 ಸಮುವೇಲ 23:39)-ಹೆಂಡತಿಯಾದ ಬತ್ಷೆಬೆ ಎಂದು ತಿಳಿದುಕೊಂಡನು, ಆದರೆ ಇದು ದಾವೀದನ ದುರಾಸೆಯನ್ನು ತಣಿಸಲಿಲ್ಲ. ಆತನು ಅಂದು ದಾಳಿಮಾಡುವ ಬಲಿಷ್ಠ ಪ್ರಭುವಿನಂತೆ ನಡೆದುಕೊಂಡನೇ ಹೊರತು ಒಬ್ಬ ದೇವರ ಪ್ರತಿನಿಧಿಯಂತೆ ವರ್ತಿಸಲಿಲ್ಲ. ಆತನು ಬತ್ಷೆಬೆಳನ್ನು ಕರೆಯಿಸಿಕೊಂಡು, ಆಕೆಯೊಂದಿಗೆ ವ್ಯಭಿಚಾರ ಮಾಡಿ, ಮನೆಗೆ ಕಳುಹಿಸಿಕೊಟ್ಟನು.

ಸಂಚು ಇನ್ನಷ್ಟು ರೋಚಕವಾಗುತ್ತಾ ಸಾಗುತ್ತದೆ. ಬತ್ಷೆಬೆಯು ತಾನು ಗರ್ಭಿಣಿಯಾಗಿದ್ದೆನೆಂದು ದಾವೀದನಿಗೆ ಹೇಳಿ ಕಳುಹಿಸಿದಳು. ಈಗ ದಾವೀದನಿಗೆ ತನ್ನ ಪಾಪವನ್ನು ಒಪ್ಪಿಕೊಂಡು ತನ್ನ ದಂಡನೆಯನ್ನು ಸ್ವೀಕರಿಸಿಕೊಳ್ಳುವ ಕಾಲ ಬಂದಿತ್ತು. ಬದಲಾಗಿ, ಆತನು ತನ್ನ ಪಾಪಗಳನ್ನು ಮುಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದನು. ಆತನು ಊರೀಯನನ್ನು ಯುದ್ಧ ಭೂಮಿಯಿಂದ ಹಿಂದಕ್ಕೆ ಕರೆಯಿಸಿ ಮನೆಗೆ ಹೋಗಿ ತನ್ನ ಹೆಂಡತಿಯೊಂದಿಗೆ ಕಾಲ ಕಳೆಯುವಂತೆ ಪ್ರೋತ್ಸಾಹಿಸಿದನು. ಆಗ ಊರೀಯನು ಅದು *ತನಗೆ* ಹುಟ್ಟಿದ ಮಗುವೆಂದು ಭಾವಿಸಿಕೊಳ್ಳುವನೆಂಬುದು ದಾವೀದನ ಲೆಕ್ಕಾಚಾರ ವಾಗಿತ್ತು. ಹೇಗೂ, ಊರೀಯನು ಪ್ರಾಮಾಣಿಕ ಮನುಷ್ಯನಾಗಿದ್ದನು ಮತ್ತು ಆತನು ಯುದ್ಧದ ಸಮಯದಲ್ಲಿ ಮನೆಗೆ ಹೋಗಲು ಬಯಸಲಿಲ್ಲ. ದಾವೀದನು ಅತ್ಯಂಥ ತುಚ್ಛ ಮಟ್ಟಕ್ಕೆ ಸಹ ಇಳಿದು ಊರೀಯನಿಗೆ ಮದ್ಯಪಾನ ಮಾಡಿಸಿದಾಗ್ಯೂ ಊರೀಯನು ಮನೆಗೆ ಹೋಗಲಿಲ್ಲ!

ಅಂತಿಮ ಉಪಾಯವಾಗಿ, ಊರೀಯನು ಸಾಯಲೇಬೇಕು ಎಂದು ದಾವೀದನು ನಿರ್ಧರಿಸಿದನು. (ಈಗ ಇದೊಂದು ರಾತ್ರಿ ವೇಳೆ ಪ್ರಸಾರವಾಗುವ ಅಶ್ಲೀಲತೆಯಿಂದ ಕೂಡಿದ ದಾರಾವಾಹಿಯಂತೆ ತೋರಲಾರಂಬಿಸಿದೆಯಲ್ಲವೇ?) ದಾವೀದನು ತನ್ನ ಯುದ್ಧ ದಳಪತಿಗೆ ಪತ್ರ ಬರೆದು ಊರೀಯನನ್ನು ಯುದ್ಧದ ಮುಂದಿನ ಸಾಲಿನಲ್ಲಿ ನಿಲ್ಲಿಸುವಂತೆಯೂ ಆತನಿಗೆ ಎಲ್ಲಾ ಬೆಂಬಲವನ್ನು ಹಿಂತೆಗೆದುಕೊಳ್ಳುವಂತೆಯೂ ಹೇಳಿದನು, ಹೀಗೆ ಆತನು ಕೊಲ್ಲಲ್ಪಡಲಿ ಎಂದಾಗಿತ್ತು. ಅದೇ ರೀತಿಯಲ್ಲಿಯೇ ಸಂಭವಿಸಿತು.

ಕೆಲವು ದಿನಗಳಲ್ಲಿ ಅಥವಾ ವಾರಗಳಲ್ಲಿ, ದೇವರೊಂದಿಗೆ ನಿಟಕವಾದ ಅನ್ಯೋನ್ಯತೆಯಲ್ಲಿದ್ದ ದಾವೀದನು ದಶಾಜ್ಞೆಯ ಶೇಕಡಾ 40 ರಷ್ಟನ್ನು ಉಲ್ಲಂಘಿಸಿಬಿಟ್ಟಿದ್ದನು: ಆತನು "ನೀನು ಆಶಿಸಬಾರದು," "ನೀನು ವ್ಯಭಿಚಾರ ಮಾಡಬಾರದು," "ನೀನು ಸುಳ್ಳು ಸಾಕ್ಷಿ ಹೇಳಬಾರದು," ಮತ್ತು "ನೀನು ನರಹತ್ಯೆ ಮಾಡಬಾರದು" ಎಂಬ ಆಜ್ಞೆಗಳನ್ನು ಮುರಿದಿದ್ದನು. ಉತ್ತಮ ಮತ್ತು ದೇವಭಕ್ತಿಯುಳ್ಳ ತೀರ್ಪುಗಾರರಿಗೆ ಈ ನಿರ್ಧಾರಕ್ಕೆ ಬರಲು ಎರಡಕ್ಕಿಂತ ಹೆಚ್ಚು ನಿಮಿಷಗಳು ಬೇಕಾಗುತ್ತಿರಲಿಲ್ಲ: "ಆತನನ್ನು ಹೊರಗೆ ಕರೆದೊಯ್ದು ಕಲ್ಲೇಸೆಯಿರಿ!" ನಿಶ್ಚಯವಾಗಿಯೂ, "ದಾವೀದನ ಈ ಕೃತ್ಯವು ಯೆಹೋವನ ದೃಷ್ಟಿಯಲ್ಲಿ ಕೆಟ್ಟದ್ದಾಗಿತ್ತು" (2 ಸಮುವೇಲ 11:27).

ಈ ದುರಂತದ ತಿರುಳನ್ನು ಗ್ರಹಿಸಬೇಕಾದರೆ, ದಾವೀದನು ತನ್ನ ಜೀವಿತವನ್ನು ಹೇಗೆ

ಹಾಳು*ಮಾಡಿಕೊಂಡನು* ಎಂಬದನ್ನು ನಾವು ಸಂಪೂರ್ಣವಾಗಿಯೂ ವಿಸ್ತಾರವಾಗಿಯೂ ಅರ್ಥಮಾಡಿಕೊಳ್ಳಬೇಕು. ಈ ಎರಡು ಸತ್ಯಗಳನ್ನು ಕುರಿತು ಆಲೋಚಿಸೋಣ:

1. ದಾವೀದನ ಪಾಪವು ಅವನ ಮುಂಚೆ ಇದ್ದ ಅರಸನಾದ ಸೌಲನ ಪಾಪಕ್ಕಿಂತಲೂ ಅತ್ಯಂಥ ಘನಘೋರವಾಗಿ ತೋರುತ್ತದೆ. ಸೌಲನಿಗೆ ಅಮಾಲೇಕ್ಯರನ್ನು ಸಂಪೂರ್ಣ ನಾಶಗೊಳಿಸುವಂತೆ ಆಜ್ಞಾಪಿಸಲಾಗಿತ್ತು, ಆದರೆ ಆತನು ಅವಿಧೇಯನಾದನು ಮತ್ತು ಆತನ ಪಾಪಕ್ಕಾಗಿ ಅವನು ಅರಸನಾಗಿ ತಿರಸ್ಕರಿಸಲ್ಪಟ್ಟನು (1 ಸಮುವೇಲ 15:1-23). ಬಹಳ ಜನರು ಒಪ್ಪಿಕೊಳ್ಳುವದೇನೆಂದರೆ, ಕನಿಷ್ಠ ಮನುಷ್ಯನ ದೃಷ್ಟಿಕೋನದಿಂದ ಸೌಲನ ಪಾಪವು ದಾವೀದನ ಪಾಪದ ಅಪಾರತೆಗೆ ಹೋಲಿಕೆಯಾಗದು. ದೇವರೊಂದಿಗೆ ಆಪ್ತವಾಗಿ ನಡೆದ ಮನುಷ್ಯನು ಈಗ ಪಾಪದಲ್ಲಿ ಮಿಂದೆಳುತ್ತಿದ್ದಾನೆ, ಅಪರಾಧದ ಕೆಸರಿನೊಳಗೆ ಆಳದಿಂದ ಆಳಕ್ಕೆ ಮುಳುಗಿ ಹೋಗುತ್ತಿದ್ದಾನೆ. ಸೌಲನಿಗೆ ಏನು ಸಂಭವಿಸಿತೆಂಬದನ್ನು ನಾವು ಯೋಚಿಸುವಾಗ, ದಾವೀದನ ಪಾಪಕ್ಕಾಗುವ ಸಂಭಾವ್ಯ ದುಷ್ಪರಿಣಾಮಗಳ ಬಗ್ಗೆ ಯೋಚಿಸ ತೊಡಗುತ್ತೇವೆ!

2. ಹೆಚ್ಚು ಪ್ರಾಮುಖ್ಯವಾಗಿ, ಆತನು ಯಾವಾಗಲೂ ದೇವರ ಸಂಗಡ ಉತ್ತಮ ಬಾಂಧವ್ಯದಲ್ಲಿದ್ದಾಗಲೂ ಪಾಪವು ಹೇಗೆ ದಾವೀದನ ಜೀವಿತವನ್ನು ಹೆಚ್ಚುಕಡಿಮೆ ನಾಶಗೊಳಿಸಿತೆಂಬದನ್ನು ಪರಿಗಣಿಸೋಣ. ಇದು 2 ಸಮುವೇಲ 11 ರಲ್ಲಿ ಸ್ಪಷ್ಟವಾಗಿರುವದಿಲ್ಲವಾದರೂ, ಕೀರ್ತನೆ 32:3, 4ರಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲಿ ದಾವೀದನು ಹೀಗೆ ಬರೆದನು,

> ನಾನು ನನ್ನ ಪಾಪವನ್ನು ಅರಿಕೆ ಮಾಡದೆ ಇದ್ದಾಗ
> ದಿನವೆಲ್ಲಾ ನರಳುವದರಿಂದ ನನ್ನ ಎಲುಬುಗಳು ಸವೆದು ಹೋಗುತ್ತಿದ್ದವು.
> ಹಗಲಿರುಳು ನಿನ್ನ ಶಿಕ್ಷಾಹಸ್ತವು ನನ್ನ ಮೇಲೆ ಭಾರವಾಗಿತ್ತು;
> ಬೇಸಿಗೆಯ ನೀರಿನಂತೆ ನನ್ನ ಶರೀರದ ಸಾರವೆಲ್ಲಾ ಬತ್ತಿ ಹೋಯಿತು.

ನಾವು ಆ ದಿನಗಳಲ್ಲಿ ದಾವೀದನನ್ನು ನೋಡಿದ್ದರೆ, ಆತನು ಹೆಚ್ಚುಕಡಿಮೆ ಅದೇ ರೀತಿ ಕಂಡಿರುತ್ತಿದ್ದನು-ಈಗಲೂ ಸಿಂಹಾಸನದಲ್ಲಿರುವವನಾಗಿ, ಅರಸನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವವನಾಗಿ ಕಂಡಿರುತ್ತಿದ್ದನು-ಆದರೆ ಆತನ ಹೃದಯದೊಳಗೆ, ಆತನ ಪಾಪವು ಅವನನ್ನು ಹರಿದು ಹಾಕುತ್ತಿತ್ತು. ಪಾಪವು ಒಂದು ಭಯಂಕರ ಸಂಗತಿ!

ಮೂರು ಸಾವಿರ ವರ್ಷಗಳ ಹಿಂದೆ ಸಂಭವಿಸಿದ ಈ ಘಟನೆಗಳನ್ನು ಏಕೆ ನೆನಪಿಸಬೇಕು? ಯಾಕೆಂದರೆ ದಾವೀದನು ಬಿದ್ದ ಅದೇ ಬಲೆಗಳಲ್ಲಿ ನಾವು ಸಹ ಬೀಳಬಹುದಾಗಿದೆ. ಯಾಕೆಂದರೆ ನಮ್ಮ ಜೀವಿತಗಳು ಅಸ್ತವ್ಯಸ್ತತೆಯಲ್ಲಿ ಬೀಳುವಂತೆ ತೋರುವ ವರೆಗೂ ಪಾಪವು ನಮ್ಮ ಜೀವಿತಗಳಲ್ಲಿ ನಮ್ಮನ್ನು ಹಿಂದಟ್ಟಬಹುದು. ದಾವೀದನು ಹರಿದುಹಾಕಲ್ಪಟ್ಟ ಹಾಗೆಯೇ ಅದು ನಮ್ಮನ್ನು ಸಹ ಹರಿದು ಹಾಕಬಹುದಾಗಿದೆ. ನಾವು ಕೆಲವು ಸಾರಿ ಸಿಕ್ಕಿಕೊಳ್ಳುವ ಇಂಥ ಅಸ್ತವ್ಯಸ್ತತೆಯಿಂದ ಹೊರಗೆ ಬರುವದು ಹೇಗೆಂದು ತಿಳಿದುಕೊಳ್ಳುವ *ಅಗತ್ಯವಿರುತ್ತದೆ.*

ಈಗ ನಾವು ಈ ಪ್ರಶ್ನೆಯನ್ನು ಕೇಳಿಕೊಳ್ಳೋಣ: ದಾವೀದನು ತನ್ನ ಜೀವಿತವನ್ನು ಅಸ್ತವ್ಯಸ್ತಗೊಳಿಸಿಕೊಂಡಾಗ, ಆತನಿಗೆ ಏನು ಅಗತ್ಯವಾಗಿತ್ತು?

ಜನರು ತಮ್ಮ ಜೀವಿತಗಳನ್ನು ಕೇಡಿಸಿಕೊಂಡಾಗ, ನಾವು ಅವರಿಗೆ ಸರಿಪಡಿಸಿಕೊಂಡು ಸರಿಯಾದದ್ದನ್ನು ಮಾಡಿರಿ, ಉತ್ತಮವಾಗಿ ಜೀವಿಸುವದಕ್ಕೆ ಪ್ರಯತ್ನಿಸಿರಿ ಎಂದು ಹೇಳಬೇಕೆನ್ನುವ ಶೋಧನೆಗೊಳಗಾಗುತ್ತೇವೆ. ಹೇಗೂ, ಅದು ಅಷ್ಟೊಂದು ಸುಲಭವಾಗಿರುವದಿಲ್ಲ, ಅಲ್ಲವೇ? ದಾವೀದನು ತನ್ನ ಜೀವಿತವನ್ನು ಹಾಳು ಮಾಡಿಕೊಂಡಾಗ, ಆತನಿಗೆ ನಾಲ್ಕು ಅಗತ್ಯತೆಗಳಿದ್ದವೆಂಬದನ್ನು ಗಮನಿಸಿರಿ. ಈ ನಾಲ್ಕು ಅಗತ್ಯತೆಗಳು ನಾವು ತಪ್ಪು ಮಾಡುವಾಗ ನಮ್ಮೊಳಗಿರುವ ನಾಲ್ಕು ಅಗತ್ಯತೆಗಳನ್ನು ನೆನಪಿಸುತ್ತವೆ.

*ಮೊದಲನೆಯದು, ದಾವೀದನಿಗೆ ಆತನೊಂದಿಗೆ ಸಂಪೂರ್ಣ ಯಥಾರ್ಥವಾಗಿ ಮಾತಾಡುವ ಒಬ್ಬ ವ್ಯಕ್ತಿಯ ಅಗತ್ಯವಿತ್ತು.* ಆ ವಿಷಯದಲ್ಲಿ ಅವನು ಆಶೀರ್ವದಿಸಲ್ಪಟ್ಟಿದ್ದನು, ಅವನ ಮಟ್ಟಕ್ಕೆ ಸಮಾನನಾದ, ಅವನಿಗೆ ಬಹಳ ವರ್ಷಗಳಿಂದ ಪರಿಚಯವಿದ್ದ ಸ್ನೇಹಿತನೊಬ್ಬನಿದ್ದನು. ಅಲ್ಲದೆ ಅವನನ್ನು ಚೆನ್ನಾಗಿ ಬಲ್ಲಂತ ಸ್ನೇಹಿತನಿದ್ದನೆಂಬದರಲ್ಲಿ ಆತನು ಆಶೀರ್ವದಿಸಲ್ಪಟ್ಟವನಾಗಿದ್ದನು. ಆತನ ಹೃದಯವನ್ನು ಸ್ಪರ್ಶಿಸುವಂತೆ ಅವನೊಂದಿಗೆ ಹೇಗೆ ವಿಷಯವನ್ನು ತಿಳಿಯಪಡಿಸಬೇಕೆಂದು ಆತನ ಸ್ನೇಹಿತನಿಗೆ ಗೊತ್ತಿತ್ತು.

ದೇವರು ದಾವೀದನ ಬಳಿಗೆ ನಾತಾನನನ್ನು ಕಳುಹಿಸಿದನು. ಮತ್ತು ನಾತಾನನು ಅವನಿಗೆ ಪರಿಚಿತವಾಗಿದ್ದ ಒಂದು ಚಿಕ್ಕ ಹೆಣ್ಣು ಕುರಿಮರಿಯ ಕಥೆಯನ್ನು ಹೇಳುತ್ತಾನೆ:

> ಒಂದು ಊರಲ್ಲಿ ಇಬ್ಬರು ಮನುಷ್ಯರಿದ್ದರು; ಒಬ್ಬನು ಐಶ್ವರ್ಯವಂತನು, ಇನ್ನೊಬ್ಬನು ಬಡವನು. ಐಶ್ವರ್ಯವಂತನಿಗೆ ಬಹಳ ಕುರಿದನಗಳಿದ್ದವು. ಬಡವನಿಗೆ ಒಂದು ಕುರಿಮರಿಯ ಹೊರತು ಬೇರೇನೂ ಇರಲಿಲ್ಲ, ಅವನು ಅದನ್ನು ಕೊಂಡುಕೊಂಡು ಸಾಕುತ್ತಿದ್ದನು. ಅದು ದೊಡ್ಡದಾಗುವವರೆಗೆ ಮಗಳಂತೆ ಅವನ ಸಂಗಡಲೂ ಅವನ ಮಕ್ಕಳ ಸಂಗಡಲೂ ಇದ್ದುಕೊಂಡು ಅವನೊಡನೆ ರೊಟ್ಟಿ ತಿನ್ನುತ್ತಾ ಅವನ ಪಾತ್ರೆಯಲ್ಲಿ ನೀರು ಕುಡಿಯುತ್ತಾ ಇತ್ತು; ಅವನ ಎದೆಯ ಮೇಲೆಯೇ ಒರಗಿಕೊಂಡು ನಿದ್ರೆ ಮಾಡುತ್ತಿತ್ತು. ಒಂದು ದಿವಸ ಐಶ್ವರ್ಯವಂತನ ಮನೆಗೆ ಒಬ್ಬ ಪ್ರಯಾಣಿಕನು ಬಂದನು. ಆಗ ಐಶ್ವರ್ಯವಂತನು ತನ್ನ ಕುರಿದನಗಳಿಂದ ಏನೂ ತೆಗೆದುಕೊಳ್ಳುವ ಮನಸ್ಸಿಲ್ಲದೆ ಆ ಬಡವನ ಕುರಿ ಮರಿಯನ್ನು ಹಿಡಿದು ಅತಿಥಿಗೋಸ್ಕರ ಅದನ್ನು ಅಡುಗೆ ಮಾಡಿಸಿದನು ಎಂಬದೇ (2 ಸಮುವೇಲ 12:1-4).

ಕುರಿಮರಿಯು ಮಕ್ಕಳೊಂದಿಗೆ ಆಡುವದನ್ನು, ಊಟದ ಮೇಜಿನ ಮೇಲಿನ ಪಾತ್ರೆಯಿಂದ ನೀರು ಕುಡಿಯುವದನ್ನು ಮತ್ತು ಅವರ ಹಾಸಿಗೆಗಳಲ್ಲಿ ಮಲಗುವದನ್ನು ಒಬ್ಬನು ಕಾಣಬಹುದಾಗಿತ್ತು. ದಾವೀದನಲ್ಲಿದ್ದ ನ್ಯಾಯದ ಪ್ರಜ್ಞೆ ಸಿಡಿದೆದ್ದಿತು: "ಇದನ್ನು ಕೇಳಿ ದಾವೀದನು ಆ ಮನುಷ್ಯನ ಮೇಲೆ ಬಹಳವಾಗಿ ಕೋಪಗೊಂಡು ನಾತಾನನಿಗೆ - 'ಯೆಹೋವನಾಣೆ, ಆ ಮನುಷ್ಯನು ಸಾಯಲೇ ಬೇಕು. ಅವನು ಕರುಣೆಯಿಲ್ಲದೆ ಹೀಗೆ ಮಾಡಿದ್ದರಿಂದ ಆ ಕುರಿಮರಿಗಾಗಿ ನಾಲ್ಕರಷ್ಟು ಹಿಂದಕ್ಕೆ ಕೊಡಬೇಕು ಅಂದನು'" (2 ಸಮುವೇಲ 12:5, 6). ಆಗ ನಾತಾನನು ಈ ಮಹತ್ವದ ನುಡಿಗಳನ್ನು ನುಡಿದನು: "ಆ

ಮನುಷ್ಯನು ನೀನೇ!" (2 ಸಮುವೇಲ 12:7).

ಬೈಬಲ್.ನ ಮೂಲ ಘಟನೆಗಳನ್ನು ಅವು *ಹೇಗೆ* ಸಂಭವಿಸಿದವೆಂದು ನಾವು ವೀಕ್ಷಿಸುವಂತಾಗಲು ವಿಡಿಯೋ ರೆಕಾರ್ಡಿಂಗ್ ಮಾಡಿಟ್ಟಿದ್ದರೆ ಅದ್ಭುತವಾಗಿರುತ್ತಿತ್ತಲ್ಲವೇ? ಬಹುಶಃ ನಾತಾನನು ಅವನ ಮುಂದೆ ಪ್ರವಾದಿಯ ಪ್ರಕಾಶಿಸುವ ಕಣ್ಣುಗಳೊಂದಿಗೆ ನಿಂತು, ಆರೋಪಿಯನ್ನು ಕೈಯನ್ನು ಚಾಚಿ, "ಆ ಮನುಷ್ಯನು ನೀನೇ!" ಎಂದು ಹೇಳಿದ್ದಿರಬಹುದು. ನಾನು ನಾತಾನನ ಬಗ್ಗೆ ಒಬ್ಬ ಮುರಿದ ಹೃದಯದ ಮಿತ್ರನೆಂಬದಾಗಿ ಯೋಚಿಸಲು ಇಚ್ಛಿಸುತ್ತೇನೆ, ದಾವೀದನ ಕೋಪದ ಮಾತುಗಳನ್ನು ಕೇಳಿದ ಮೇಲೆ, ಕಣ್ಣೀರು ತುಂಬಿದ ಕಣ್ಣುಗಳಿಂದ ನಿಂತವನಾಗಿ ಸ್ವಲ್ಪ ಮೌನವಾಗಿದ್ದು, ನಂತರ ನಡುಗುವ ಧ್ವನಿಯೊಂದಿಗೆ, "ದಾವೀದನೇ, ನಾನು ಮಾತಾಡುತ್ತಿರುವ ವ್ಯಕ್ತಿಯು ನೀನೇ. ನಿನಗೆ ಬಹಳಷ್ಟಿತ್ತು ಆದರೆ ಊರೀಯನಿಗೆ ಬಹಳ ಕಡಿಮೆಯಿತ್ತು-ಮತ್ತು ಅವನಿಗಿದ್ದದ್ದನ್ನು ನೀನು ಕಸಿದುಕೊಂಡಿ, ಆತನ ಪತ್ನಿಯನ್ನು, ಆತನ ಪ್ರಾಣವನ್ನು ಸಹ ಕಸಿದುಕೊಂಡಿ. ದೇವರು ನಿನ್ನನ್ನು ಸಮೃದ್ಧಿಯಾಗಿ ಆಶೀರ್ವದಿಸಿದ್ದನು ಮತ್ತು ನೀನಾದರೋ ಈ ಭಯಂಕರ ಸಂಗತಿಯನ್ನು ಮಾಡಿರುವಿ!" ಎಂದು ಹೇಳಿದ್ದಿರಬಹುದು. ಅದು ಹೇಗೆ ಹೇಳಲ್ಪಟ್ಟಿದ್ದರೂ ಸರಿಯೇ, ಅದೊಂದು ಯಥಾರ್ಥವಾದ ಸಂದೇಶವಾಗಿದ್ದು ದಾವೀದನ ಪಾಪವನ್ನು ಬಯಲಿಗೆಳೆಯಿತು.

ಇಂದು ಧಾರ್ಮಿಕ ಜಗತ್ತಿನಲ್ಲಿ, ನಿಮಗೆ ಬೇಕಾಗುವ ಯಾವದೇ ರೀತಿಯ ಪ್ರಸಂಗಗಳನ್ನು ಕಾಣಬಹುದು. ನೀವು ಚೆನ್ನಾಗಿಯೇ ಇದ್ದೀರೆಂಬ ಬಗ್ಗೆ ಪ್ರಸಂಗ ಬೇಕೋ, ಅದು ನಿಮಗೆ ಸಿಕ್ಕಬಲ್ಲದು. ಹೇಗೂ, ನಿಮ್ಮ ಜೀವಿತ ಪಾಪದ ಕಾರಣದಿಂದ ಹಾಳು ಬಿದ್ದಿರುವದಾದರೆ, ನಿಮಗೆ ಕೇವಲ ನಿಮ್ಮ ನಾಡಿಗಳಿಗೆ ಶಮನ ನೀಡುವ ಒಬ್ಬನ ಅಗತ್ಯ ಮಾತ್ರವಿರುವದಿಲ್ಲ. ಊಹಿಸಿಕೊಳ್ಳಿರಿ, ನಾತಾನನು ದಾವೀದನ ಬಳಿಗೆ ಬಂದು ಅವನ ಹೆಗಲ ಮೇಲೆ ಕೈ ಹಾಕಿಕೊಂಡು, "ನಿನಗೆ ನೋವಿರುತ್ತದೆಂದು ನಾನು ಬಲ್ಲೆನು, ನಾನು ನಿನ್ನ ಸಂಗಡ ಇದ್ದೇನೆಂದು ನೀನು ತಿಳಿದುಕೋ," ಎಂದು ಹೇಳಿ ಆತನ ಪಾಪವನ್ನು ಎತ್ತಿ ತೋರಿಸದೆ ಹೋಗಿದ್ದರೆ! ನಿಮಗೆ ನಿಮ್ಮ ಜೀವನದಲ್ಲಿರುವ ಪಾಪದ ಬಗ್ಗೆ ಯಥಾರ್ಥವಾಗಿ ಮಾತಾಡುವ ಒಬ್ಬ ವ್ಯಕ್ತಿಯ ಅಗತ್ಯತೆ ಇರುತ್ತದೆ-ಪ್ರೀತಿಯಿಂದ ಕೂಡಿದ ಯಥಾರ್ಥತೆಯುಳ್ಳವನು, ಆದರೆ ಸಂಪೂರ್ಣ ಯಥಾರ್ಥತೆ ಇರುವವನು!

ಇಂದು ಅದು ಅನುಕರಣೀಯವಲ್ಲದೆ ಇರಬಹುದು, ಆದರೆ ಕ್ರೈಸ್ತರು ಒಟ್ಟಾರೆಯಾಗಿ ಮತ್ತು ಸಂಪೂರ್ಣವಾಗಿ ಪಾಪವನ್ನು ವಿರೋಧಿಸುತ್ತಾರೆ. ನಾವು ಅದನ್ನು ಒಂದು *ವೈರಿ*ಯಾಗಿ ಪರಿಗಣಿಸುತ್ತೇವೆ. ಇದು ಹಳೆಕಾಲದ-ಶೈಲಿ ಅನ್ನಿಸಬಹುದು, ಆದರೆ ನಾವು ಈಗಲೂ ಕುಡಿಕತನ, ಮಾದಕವ್ಯಸನ, ಕುಣಿತ, ಜೂಜಾಟ, ಗರ್ಭಪಾತ, ಅಸಭ್ಯ ಉಡುಗೆ (ನೀರಿನೊಳಗೆ ಅಥವಾ ನೀರಿನ ಹೊರಗೆ ಇರಬಹುದು), ಬೈಬಲ್.ಗೆ ವಿರುದ್ಧವಾದ ವಿಚ್ಛೇಧನ, ಮಾನವಸಿದ್ಧಾಂತ, ಭೌತಿಕತೆ (ಪ್ರಾಪಂಚಿಕತೆ), ಲೈಂಗಿಕ ಅಶುದ್ಧತೆ, ದಾಂಪತ್ಯದಲ್ಲಿ ಅಪನಂಬಿಗಸ್ತರಾಗಿರುವಿಕೆ, ಸಿದ್ಧಾಂತಿಕ ತಪ್ಪುಗಳು, ಇತ್ಯಾದಿಗಳ ವಿರುದ್ಧವಾಗಿ ಬೋಧಿಸುತ್ತೇವೆ. ನಮಗೆ ಈ ವಿಷಯಗಳ ಬಗ್ಗೆ ಗಾಢವಾದ ಮನವರಿಕೆಯಿರುತ್ತದೆ ಮತ್ತು ನಾವು ನಮ್ಮ ಮನವರಿಕೆಗಳನ್ನು ಬಚ್ಚಿಟ್ಟುಕೊಳ್ಳುವದಿಲ್ಲ.

ನೀವು ಹೀಗೆ ಹೇಳಬಹುದು, “ಓ, ನನಗೆ ಖಂಡಿಸುವಿಕೆಯ ಅಗತ್ಯವಿಲ್ಲ. ನನಗೆ ಕೇವಲ ಸವಿನುಡಿ ಮತ್ತು ಬೆಳಕು ಬೇಕಷ್ಟೇ.” ನಾನು ಪುನರುಚ್ಚರಿಸುತ್ತೇನೆ: ನಿಮ್ಮ ಜೀವನ ಹಾಳು ಬಿದ್ದಿರುವದಾದರೆ, ನಿಮಗೆ *ಬೇಕಾಗಿರುವ* ಮೊದಲ ಸಂಗತಿಯೇಂದರೆ ನಿಮ್ಮ ಸಂಗಡ ಸಂಪೂರ್ಣ ಯಥಾರ್ಥವಾಗಿ ಮಾತಾಡುವ ಜನರು.

ದಾವೀದನಿಗೆ ಅದಕ್ಕಿಂತ ಹೆಚ್ಚಿನ ಅಗತ್ಯವಿತ್ತು, ಒಂದು ಯಥಾರ್ಥವಾದ ಸಂದೇಶವನ್ನು ಆತನು ಸರಿಯಾದ ವಿಧದಲ್ಲಿ ಪಡೆಯದವನಾಗಿದ್ದರೆ ಆ ಸಂದೇಶದಿಂದ ಯಾವ ಒಳಿತೂ ಆಗುತ್ತಿರಲಿಲ್ಲ.

*ಎರಡನೆಯದಾಗಿ, ದಾವೀದನಿಗೆ ಮುರಿಯಲು ಸಾಧ್ಯವಾದ ಹೃದಯದ ಅಗತ್ಯವಿತ್ತು.* ಆತನು ನಾತಾನನ ಸಂದೇಶಕ್ಕೆ ಅನೇಕ ವಿಧಗಳಲ್ಲಿ ಪ್ರತಿಸ್ಪಂದಿಸಿರಹುದಿತ್ತು. ಆತನು ಬೋಧಿಸಿದವನ ಮೇಲೆ ಕೋಪಗೊಂಡಿರಬಹುದಿತ್ತು. ಅದಂತೂ ಒಂದು ಸರ್ವಸಾಧಾರಣವಾದ ಪ್ರತಿಕ್ರಿಯೆಯಷ್ಟೆ, ಆದರೆ ಅದರಿಂದ ಅವನಿಗೆ ಯಾವ ರೀತಿಯಲ್ಲಿಯೂ ಸಹಾಯ ಆಗುತ್ತಿರಲಿಲ್ಲ.

ಆತನು ನೆಪಗಳನ್ನು ಹೇಳುವದಕ್ಕೆ ಆರಂಭಿಸಿರಬಹುದಿತ್ತು: “ಅಲ್ಲಿ ಸ್ನಾನ ಮಾಡುತ್ತಿದ್ದದ್ದು ಬತ್ಷೆಬೆಯ ತಪ್ಪು.” “ಊರೀಯನು ಅಷ್ಟೊಂದು ಮೊಂಡತನ ತೋರದಿದ್ದರೆ, ಯಾವ ಕೇಡೂ ಆಗುತ್ತಿರಲಿಲ್ಲ.” ನಾವು ಸಿಕ್ಕಿಕೊಂಡಿರುವ ಅಸ್ತವ್ಯಸ್ತತೆಗಾಗಿ ಮತ್ತೊಬ್ಬರ ಮೇಲೆ ತಪ್ಪು ಹೊರಿಸುವದು ಬಹಳ ಸುಲಭವಲ್ಲವೇ? ಹೇಗೂ, ನೆಪಗಳು ಪರಿಸ್ಥಿತಿಯನ್ನು ಸುಧಾರಿಸಿರಲಿಕ್ಕೆ ಸಾಧ್ಯವಿರಲಿಲ್ಲ.

ಆತನು ತನ್ನ ಪಾಪಗಳನ್ನು ಮುಚ್ಚಿಕೊಳ್ಳುವದನ್ನು ಮುಂದುವರೆಸಿರಬಹುದಿತ್ತು- ಇನ್ನೊಂದು ಪಾಪವನ್ನು ಸೇರ್ಪಡೆಗೊಳಿಸಿಕೊಳ್ಳುವ ಮೂಲಕ. ಆತನು ದಾಳಿಕೋರ ಬಲಿಷ್ಠ ಪ್ರಭುವಿನಂತೆ ತನ್ನ ಸಂಪೂರ್ಣ ಅಧಿಕಾರವನ್ನು ಪ್ರಯೋಗಿಸಿರಬಹುದಿತ್ತು ಮತ್ತು ನಾತಾನನನ್ನು ಕೊಲ್ಲಿಸಿರಬಹುದಿತ್ತು.

ದೇವರಿಗೆ ಸ್ತೋತ್ರ, ದಾವೀದನು ಆ ಯಾವ ರೀತಿಯಲ್ಲಿಯೂ ಪ್ರತಿಸ್ಪಂದಿಸಲಿಲ್ಲ. ಬದಲಾಗಿ, ಆತನ ಹೃದಯವು ಮುರಿಯಲ್ಪಟ್ಟಿತು. ದಾವೀದನು ದೇವರ ಹೃದಯಕ್ಕೆ ಒಪ್ಪುವ ಮನುಷ್ಯನಾಗಿದ್ದನು, ಆತನು ದೋಷವಿಲ್ಲದನಾಗಿದ್ದನೆಂಬ ಕಾರಣಕ್ಕಾಗಿಯಲ್ಲ, ಆದರೆ ಆತನಿಗೆ ಮೃದುವಾಗಿ ಉಳಿದಿರುವಂಥ ಮತ್ತು ಸತ್ಯದಿಂದ ಸ್ಪರ್ಶಗೊಳ್ಳುವಂತ ಹೃದಯವಿತ್ತು ಎಂಬ ಕಾರಣಕ್ಕಾಗಿಯೇ. ದಾವೀದನು ನಾತಾನನ ಮುಂದೆ ಅರಿಕೆ ಮಾಡಿದನು, “ನಾನು ಯೆಹೋವನಿಗೆ ವಿರುದ್ಧವಾಗಿ ಪಾಪ ಮಾಡಿದ್ದೇನೆ” (2 ಸಮುವೇಲ 12:13). ಕೀರ್ತನೆ 51 ದಾವೀದನು ನಾತಾನನಿಂದ ಖಂಡಿಸಲ್ಪಟ್ಟ ಬಳಿಕ ಬರೆಯಲ್ಪಟ್ಟಿರುವ ಸಾಧ್ಯತೆಯಿರುತ್ತದೆ. ಆ ಕೀರ್ತನೆಯಲ್ಲಿ ದಾವೀದನು ಗೋಳಾಡುತ್ತಾನೆ.

> ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು;
> ಕರುಣಾನಿಧಿಯೇ, ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು.
> ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದು ಬಿಡು;
> ನನ್ನ ದೋಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು.
> ನಾನು ದ್ರೋಹಿ ಎಂದು ನಾನೇ ಒಪ್ಪಿಕೊಂಡಿದ್ದೇನೆ; ನನ್ನ ಪಾಪವು ಯಾವಾಗಲೂ ನನ್ನ

ಮುಂದೆ ಇದೆ. . .
ನನ್ನ ದೋಷಕ್ಕೆ ವಿಮುಖನಾಗು;
ನನ್ನ ಪಾಪಗಳನ್ನೆಲ್ಲಾ ಅಳಿಸಿಬಿಡು.
ದೇವರೇ, ನನ್ನಲ್ಲಿ ಶುದ್ಧಹೃದಯವನ್ನು ನಿರ್ಮಿಸು;
ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನ ಪಡಿಸು.
ನಿನ್ನ ಸನ್ನಿಧಿಯಿಂದ ನನ್ನನ್ನು ತಳ್ಳಬೇಡ;
ನಿನ್ನ ಪರಿಶುದ್ಧಾತ್ಮವನ್ನು ನನ್ನಿಂದ ತೆಗೆಯಬೇಡ.
ನಿನ್ನ ರಕ್ಷಣಾನಂದವನ್ನು ನಾನು ತಿರಿಗಿ ಅನುಭವಿಸುವಂತೆ ಮಾಡು;
ನನ್ನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು (ಕೀರ್ತನೆ 51:1-3, 9-12).

ನಮ್ಮಲ್ಲಿ ಪ್ರತಿಯೊಬ್ಬರೂ ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕು "*ನನಗೆ* ಈ ರೀತಿಯ ಹೃದಯವು ಇರುತ್ತದೋ?" ಇದು ಜೀವಿತವು ಅಸ್ತವ್ಯಸ್ತತೆಯಲ್ಲಿರುವಾಗ ಅಗತ್ಯವಿರುವ ಹಲವಾರು ಸಂಗತಿಗಳಲ್ಲಿ ಒಂದಾಗಿದ್ದು, ಇದನ್ನು ನಮಗೆ ಯಾರೂ ಒದಗಿಸಲಾರರು. ಅದು ನಮ್ಮಲ್ಲಿಯೇ ಇರುತ್ತದೆ ಅಥವಾ ಇರುವದಿಲ್ಲ. ನಮಗೆ ಅದಿಲ್ಲವಾದರೆ ಮತ್ತು ಅಂಥ ಹೃದಯವನ್ನು ಬೆಳೆಸಿಕೊಳ್ಳುವದಕ್ಕೆ ಮನಸ್ಸುಳ್ಳವರಾಗಿದ್ದರೆ, ಸ್ವಲ್ಪ ನಿರೀಕ್ಷೆಯು ಇರುತ್ತದೆ.

ಈ ಹೃದಯದ ಬಗ್ಗೆ ನಾವು ಹೆಚ್ಚು ಯೋಚಿಸಬೇಕು, ಆದರೆ ಅದನ್ನು ಮುಂದಿನ ಅಗತ್ಯತೆಯ ಸನ್ನಿವೇಶದಲ್ಲಿ ಮಾಡೋಣ.

*ಮೂರನೆಯದಾಗಿ, ದಾವೀದನಿಗೆ ಕ್ಷಮಾಪಣೆಯ ಭರವಸೆಯ ಅಗತ್ಯವಿತ್ತು.* ಆತನು ತನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂಬ ಭರವಸೆಯನ್ನು ಹೊಂದದೆ ಮುಂದೆ ಸಾಗಲು ಸಾಧ್ಯವಿರಲಿಲ್ಲ. ಕೀರ್ತನೆ 51: 11ರಲ್ಲಿ, ಆತನು ದೇವರನ್ನು ನಿನ್ನ ಸನ್ನಿಧಿಯಿಂದ ತಳ್ಳಬೇಡವೆಂದೂ ಪರಿಶುದ್ಧಾತ್ಮನನ್ನು ತೆಗೆಯಬೇಡವೆಂದೂ ಬೇಡಿಕೊಳ್ಳುತ್ತಾನೆ. ಸೌಲನಿಂದ ದೇವರಾತ್ಮನು ತೆಗೆಯಲ್ಪಟ್ಟಾಗ ಅವನಿಗೆ ಏನಾಯಿತೆಂಬದು ದಾವೀದನಿಗೆ ಗೊತ್ತಿತ್ತು (1 ಸಮುವೇಲ 16:14-23). ಸೌಲನು ಅಕ್ಷರಶಃ ಹುಚ್ಚನಂತಾಗಿದ್ದನು. ಸೌಲನಿಗೆ ಉಪಶಮನವಾಗಲೆಂದು ರಾತ್ರಿಗಳಲ್ಲಿ ದಾವೀದನು ಎಷ್ಟೋ ಸಾರಿ ಕಿನ್ನರಿಯನ್ನು ನುಡಿಸಿದ್ದನು. ದಾವೀದನು ಈಗ, "ನನಗೆ ಹಾಗಾಗುವಂತೆ ಬಿಡಬೇಡ!" ಎಂದು ಗೋಳಾಡಿದ್ದನು. ಅದು ಸಂಭವಿಸಲಿಲ್ಲ. ದೇವರು ಆತನಿಗೆ ಕ್ಷಮಾಪಣೆಯ ಭರವಸೆಯನ್ನು ನೀಡಿದನು. "ನಾತಾನನು ದಾವೀದನಿಗೆ-'ಯೆಹೋವನು ನಿನ್ನ ಪಾಪವನ್ನು ಕ್ಷಮಿಸಿದ್ದಾನೆ, ನೀನು ಸಾಯುವದಿಲ್ಲ' ಎಂದು ಹೇಳಿದನು" (2 ಸಮುವೇಲ 12:13). ಕೀರ್ತನೆ 32:1, 2, 5 ರಲ್ಲಿ ಆತನ ಸಂಭ್ರಮವನ್ನು ಗಮನಿಸಿರಿ:

ಯಾವನ ದ್ರೋಹವು ಪರಿಹಾರವಾಗಿದೆಯೋ ಯಾವನ ಪಾಪವು ಕ್ಷಮಿಸಲ್ಪಟ್ಟಿದೆಯೋ ಅವನೇ ಧನ್ಯನು.
ಯೆಹೋವನು ಯಾವನ ಲೆಕ್ಕಕ್ಕೆ ಅಪರಾಧವನ್ನು ಎಣಿಸುವದಿಲ್ಲವೋ ಯಾವನ ಹೃದಯದಲ್ಲಿ ಕಪಟವಿರುವದಿಲ್ಲವೋ ಅವನು ಧನ್ಯನು. . .
[ಹೀಗಿರುವಲ್ಲಿ] ಯೆಹೋವನ ಸನ್ನಿಧಿಯಲ್ಲಿ ನನ್ನ ದ್ರೋಹವನ್ನು ಒಪ್ಪಿಕೊಳ್ಳುವೆನು ಅಂದುಕೊಂಡು ನನ್ನ ಪಾಪವನ್ನು ಮರೆಮಾಡದೆ ನಿನಗೆ ನನ್ನ ದೋಷ ವನ್ನು

ತಿಳಿಸಿದೆನು. ನೀನು ನನ್ನ ಅಪರಾಧಪಾಪಗಳನ್ನು ಪರಿಹರಿಸಿಬಿಟ್ಟಿ.

ದಾವೀದನು ಅದಕ್ಕೆ ಯೋಗ್ಯನಾಗಿರಲಿಲ್ಲ, ಆದರೆ ದೇವರು ತನ್ನ ಅಪರಿಮಿತವಾದ ಕರುಣೆಯಿಂದ ಆತನನ್ನು ಕ್ಷಮಿಸಿದನು. ದಾವೀದನಿಗೆ ಮುರಿಯಲ್ಪಡಬಹುದಾದ ಹೃದಯ ಇದ್ದ ಕಾರಣದಿಂದ ದೇವರು ಹೀಗೆ ಮಾಡಿದನು, ಯಾಕೆಂದರೆ ದಾವೀದನು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರಿಗಿಕೊಂಡಿದ್ದನು.

ಸೌಲ ಮತ್ತು ದಾವೀದನ ನಡುವಿನ ವ್ಯತ್ಯಾಸ ಇಲ್ಲಿದೆ. ನಮ್ಮ ದೃಷ್ಟಿಕೋನದಲ್ಲಿ, ಸೌಲನ ಪಾಪವು ದಾವೀದನ ಪಾಪದಷ್ಟು ಘೋರವಾಗಿರಲಿಲ್ಲ. ಹೇಗೂ, ಸೌಲನಿಗೆ ದೇವರೊಂದಿಗೆ ವಾಸಿಸಿಕೊಂಡಿದ್ದ ಹೃದಯ ಇರಲಿಲ್ಲ. ಸೌಲನಿಗೆ ರಾಜಕೀಯ, ಸಮಯ ಸಾಧಕತನ, ಘನತೆ ಮತ್ತು ಗೌರವ ಮತ್ತು ಒಂದು ರಾಜವಂಶವನ್ನು ಸ್ಥಾಪಿಸಬೇಕೆಂಬ ಬಗ್ಗೆ ಚಿಂತೆಯಿತ್ತು. ದಾವೀದನು ದೇವರ ಬಗ್ಗೆ ಚಿಂತೆಯುಳ್ಳವನಾಗಿದ್ದನು-ಆತನೊಂದಿಗಿನ ತನ್ನ ಸಂಬಂಧದ ಬಗ್ಗೆ ಕಾಳಜಿಯುಳ್ಳವನಾಗಿದ್ದನು. ಅವರ ಹೃದಯಗಳ ವ್ಯತ್ಯಾಸದ ಕಾರಣದಿಂದಾಗಿ, ಸೌಲನಿಗೆ ಕ್ಷಮಾಪಣೆಯ ಭರವಸೆ ಸಿಕ್ಕಲಿಲ್ಲ; ದಾವೀದನಿಗೆ ಸಿಕ್ಕಿತು.

ನಮ್ಮ ಜೀವಿತಗಳು ಪಾಪದ ಕಾರಣದಿಂದ ಕೈಮೀರಿ ಹೋಗಿರುವಾಗ, ನಾವು ದೇವರ ಬಳಿಗೆ ಹಿಂದಿರುಗಿದರೆ ಆತನು ನಮ್ಮನ್ನು ಕ್ಷಮಿಸಬಲ್ಲನು ಮತ್ತು ಕ್ಷಮಿಸುವನು ಎಂಬ ಭರವಸೆಗಿಂತಲೂ ಅಧಿಕವಾದದ್ದೇನೂ ಅಗತ್ಯವೆನಿಸುವದಿಲ್ಲ. ಅದು ನಮಗೆ ನಿರೀಕ್ಷೆ ಮತ್ತು ಬಲವನ್ನು ಕೊಡಬಲ್ಲದು. ಅದೇ ವೇಳೆಯಲ್ಲಿ, ದೇವರು ನಮ್ಮನ್ನು ಕ್ಷಮಿಸುವನೆಂದು ನಂಬುವದು ಕಷ್ಟಕರವಾಗಿರುತ್ತದೆ. ನಮ್ಮ ಪರಿಸ್ಥಿತಿ ಅದೇ ಆಗಿರುವದಾದರೆ, ನೀವು ನಿಮಗೆ ಇದನ್ನು ಕೇಳಿಕೊಳ್ಳಬೇಕಿರುತ್ತದೆ: "ನನ್ನ ಜೀವಿತವು ದಾವೀದನಿಗಿಂತಲೂ ಘೋರ ಆಕಾರದಲ್ಲಿರುತ್ತದೋ, ಅದು ದುರಾಶೆ, ವ್ಯಭಿಚಾರ, ಸುಳ್ಳು ಹೇಳುವಿಕೆ ಮತ್ತು ನರಹತ್ಯೆಗಳಿಂದ ಕೆಟ್ಟುಹೋಗಿದ್ದ ಜೀವಿತವಾಗಿತ್ತಲ್ಲವೇ?" ದೇವರು ದಾವೀದನನ್ನು ಕ್ಷಮಿಸಬಲ್ಲವನಾಗಿದ್ದರೆ, ನಿನ್ನನ್ನು ಸಹ ಕ್ಷಮಿಸಬಲ್ಲನು!

ಈ ಸಂದೇಶವು ಹಳೆ ಒಡಂಬಡಿಕೆಗೆ ಮಾತ್ರ ಸಿಮೀತವಾಗಿರುವದಿಲ್ಲ. ರೋಮಾ 4:6-8 ರಲ್ಲಿ ಪೌಲನು ಕೀರ್ತನೆ 32:1, 2 ರಿಂದ ದಾವೀದನ ಮಾತುಗಳನ್ನು ಉಲ್ಲೇಖಿಸುತ್ತಾನೆ, ಆ ವಚನಗಳು ದೇವರ ಕ್ಷಮಾಗುಣವನ್ನು ಕೊಂಡಾಡುತ್ತವೆ. ದಾವೀದನು ಅದನ್ನು ಅನುಭವಿಸಿ ಹೇಳಿದ್ದೇನೆಂದರೆ, "ಹೌದು, ಇದು ಸತ್ಯ ಯಾಕೆಂದರೆ ಅದು ನನ್ನ ವಿಷಯದಲ್ಲಿ ನಡೆದಿರುತ್ತದೆ!" ಈ ಕೀರ್ತನೆಯನ್ನು ಉಲ್ಲೇಖಿಸುವ ಮೂಲಕ, ಪೌಲನು "ಇದು *ಈಗಲೂ* ಸತ್ಯವಾಗಿರುತ್ತದೆ" ಎಂದು ಹೇಳುವವನಾಗಿದ್ದನು!

ಈ ಮುಂಚೆ ನಾನು ಪ್ರತಿಯೊಬ್ಬನಿಗೂ ಅವನೊಂದಿಗೆ ಅವನ ಪಾಪದ ಕುರಿತು ಸಂಪೂರ್ಣ ಯಥಾರ್ಥವಾಗಿ ಮಾತಾಡುವವನ ಅಗತ್ಯವಿರುತ್ತದೆಂದು ಒತ್ತಿಹೇಳಿದೆನು. ಪ್ರತಿಯೊಬ್ಬನಿಗೂ ಬೇರೊಂದು ಸಂಗತಿಯ ಅಗತ್ಯ ಸಹ ಇರುತ್ತದೆ- ಆತನು ಪಶ್ಚಾತ್ತಾಪ ಪಟ್ಟು ತನ್ನ ಜೀವಿತವನ್ನು ಬದಲಾಯಿಸಿಕೊಳ್ಳುವಾಗ, ಆತನು ಕ್ಷಮಿಸಲ್ಪಟ್ಟಿದ್ದಾನೆಂದು ತಿಳಿದುಕೊಳ್ಳುವ ಅಗತ್ಯವಿರುತ್ತದೆ.

ನನಗೆ ಅನೇಕ ವರ್ಷಗಳಿಂದ ಸಿದ್ಧಾಂತದ ಮತ್ತು ನೈತಿಕ ಕ್ಷೇತ್ರಗಳಲ್ಲಿ ಸರಿ ಮತ್ತು

ತಪ್ಪುಗಳ ಬಗ್ಗೆ ಆಳವಾದ ಮನವರಿಕೆಯ ಅಗತ್ಯವಿರುವ ಸ್ಥಳೀಯ ಸಭಿಕರಿಗೆ ಬೋಧಿಸುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯವಾಗಿರುತ್ತದೆ. ಇದೇ ಸಭಿಕರು ದೇವರ ಕೃಪೆ ಮತ್ತು ಕರುಣೆಯಲ್ಲಿ ನಂಬಿದವರಾಗಿದ್ದರು, ಜನರು ತಮ್ಮ ಪಾಪಗಳನ್ನು ಒಪ್ಪಿಕೊಂಡು ಕರ್ತನ ಕಡೆಗೆ ತಿರಿಗಿಕೊಂಡಾಗ ಈ ಸ್ಥಳೀಯ ಸಭಿಕರು ಅವರನ್ನು ಪ್ರೀತಿಸುವವರಾಗಿ ಕ್ಷಮಿಸುವವರಾಗಿ ಇದ್ದರೆಂದು ಹೇಳುವದಕ್ಕೆ ನನಗೆ ರೋಮಾಂಚನವಾಗುತ್ತದೆ.

ಒಂದು ದೃಢವಾದ ನಿಲುವು ತೆಗೆದುಕೊಳ್ಳುವ ಸ್ಥಳೀಯ ಸಭೆಗಳಿಗೆ ಕಠೋರರು, ಪ್ರೀತಿಯಿಲ್ಲದವರು ಮತ್ತು ತೀರ್ಪುಮಾಡುವ ಮನೋಭಾವದವರು ಎಂಬ ಖ್ಯಾತಿ ಪಡೆಯುವದು ಸುಲಭವಾಗಿರುತ್ತದೆ-ಅವರು ತಮ್ಮ ಪರಿಪೂರ್ಣತೆಗೆ ದಕ್ಕೆಯಾಗಬಾರದೆಂದು ಒಬ್ಬ ಪಾಪಿಯನ್ನು ತಮ್ಮ ಮಧ್ಯದಲ್ಲಿ ಸ್ವೀಕರಿಸಿಕೊಳ್ಳುವದೇ ಇಲ್ಲ. ನಾವೆಲ್ಲರೂ ಜೊತೆಯಾಗಿ ಹೋರಾಟದಲ್ಲಿರುವವರೆಂದು ನಾನು ಹೇಳಿದರೆ ಅದು ನಿಮಗೆ ಆಘಾತವನ್ನುಂಟು ಮಾಡುವದಿಲ್ಲವೆಂದು ನಿರೀಕ್ಷಿಸುತ್ತೇನೆ. ಕೆಲವರು ಈ ಸಮಸ್ಯೆಯಿಂದ ಮತ್ತು ಕೆಲವರು ಆ ಸಮಸ್ಯೆಯಿಂದ ಬಳಲುತ್ತಾರೆ (ಯಾಕೋಬ 1:14). ದೇವರು ಹೇಳುವ ಪ್ರಕಾರವೇ *ಸರಿಯಾಗಿ* ಜೀವಿಸುವಂತೆ ಪ್ರತಿ ಮನುಷ್ಯನಿಗೂ ಪ್ರೋತ್ಸಾಹಗೊಳಿಸಲು ನಾವು ಶ್ರಮಿಸುತ್ತೇವೆ, ಯಾಕೆಂದರೆ ದೇವರು ಅದನ್ನು ಬೇರೆ ಇನ್ನಾವ ರೀತಿಯಲ್ಲೂ ಇಷ್ಟಪಡುವದಿಲ್ಲ (ಮತ್ತಾಯ 5:48; 7:21-23); ಆದರೆ ನಾವು ನಮ್ಮ ನ್ಯೂನ್ಯತೆಗಳನ್ನು ಒಪ್ಪಿಕೊಳ್ಳುತ್ತೇವೆ. ನಾವು ಪಾಪ ಮಾಡುವಾಗ, ನಾವು ಪಶ್ಚಾತ್ತಾಪಪಟ್ಟು ನಮ್ಮ ಪಾಪವನ್ನು ಅರಿಕೆ ಮಾಡಿ ದೇವರ ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತೇವೆ (ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9), ಮತ್ತು ಆತನು ಅದನ್ನು ನಮಗೆ ಕೊಡುವನೆಂದು ನಂಬುತ್ತೇವೆ. ನಮ್ಮ ನಿರೀಕ್ಷೆಯು ನಮ್ಮ ಪರಿಪೂರ್ಣಯಲ್ಲಿ ಅಲ್ಲ ಆದರೆ ದೇವರ ಕೃಪೆ ಮತ್ತು ಕರುಣೆಯಲ್ಲಿಯೇ. ನಾವೆಲ್ಲರೂ ಜೊತೆಯಾಗಿ ಹೋರಾಟದಲ್ಲಿರುತ್ತೇವೆ. ನಾವು ಪರಸ್ಪರರನ್ನು ಪ್ರೋತ್ಸಾಹಿಸುವದಕ್ಕೆ, ಒಬ್ಬರನ್ನೊಬ್ಬರು ಆದರಿಸುವದಕ್ಕೆ ಮತ್ತು ಒಬ್ಬರನ್ನೊಬ್ಬರು ಬಲಪಡಿಸುವದಕ್ಕೆ ಪ್ರಯತ್ನಿಸುತ್ತೇವೆ.

ಹೌದು, ದಾವೀದನು ಕ್ಷಮಾಪಣೆಯ ಭರವಸೆಯನ್ನು ತಿಳಿಯಬೇಕಿತ್ತು, ಮತ್ತು ನಾವೂ ತಿಳಿಯುವ ಅಗತ್ಯವಿರುತ್ತದೆ. ಆತನಿಗಿದ್ದ ಅಗತ್ಯತೆಯು ಇನ್ನೊಂದಿತ್ತು.

*ನಾಲ್ಕನೆಯದಾಗಿ, ದಾವೀದನಿಗೆ ಮುಂದೆ ಸಾಗಲು ನಿರಂತರವಾದ ಬಲದ ಅಗತ್ಯವಿತ್ತು.* ನೀವು ಕ್ಷಮಿಸಲ್ಪಟ್ಟರೆ ಮುಗಿಯಿತು, ಇನ್ನೇನೂ ಇಲ್ಲ ಎಂದು ನಾನು ಹೇಳುವದಕ್ಕೆ ಸಾಧ್ಯವಿದ್ದಿದ್ದರೆ ಚೆನ್ನಾಗಿರುತ್ತಿತ್ತೆಂದು-ಅದು ಒಂದು ರೀತಿ ನಿಮ್ಮ ಜೀವನದಲ್ಲಿ ಪಾಪವು ನಡೆಯಲೇ ಇಲ್ಲ ಎಂಬಂತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತೆಂದು- ಹಾರೈಸುತ್ತೇನೆ. ದುರಾದೃಷ್ಟಕರವಾಗಿ, ಅದು ಹಾಗಿರುವದಿಲ್ಲ. ನೀವು ನಿಮ್ಮ ಪಾಪದಿಂದ ಕ್ಷಣದಲ್ಲಿ ಕ್ಷಮಿಸಲ್ಪಡಬಲ್ಲಿರಿ ಆದರೆ ಅಸ್ತವ್ಯಸ್ತತೆಯನ್ನು ಸರಿಪಡಿಸುವದಕ್ಕೆ ವರ್ಷಗಳೇ ಬೇಕಾಗಬಹುದು (ಅರಣ್ಯಕಾಂಡ 32:23; ಗಲಾತ್ಯ 6:7).

ದಾವೀದನು ಊರೀಯನ ಮೇಲೆ ಕತ್ತಿಯು ಉಪಯೋಗಿಸಲ್ಪಡುವಂತೆ ಮಾಡಿದ್ದನು. ಈಗ ಆತನು ತಾನು ಬಿತ್ತಿದ್ದನ್ನು ಕೊಯ್ಯಬೇಕಾಗಿತ್ತು: "ನೀನು ನನ್ನ ಆಜ್ಞೆಯನ್ನು ತಿರಸ್ಕರಿಸಿದದರಿಂದಲೂ ಹಿತ್ತಿಯನಾದ ಊರೀಯನನ್ನು ಅಮ್ಮೋನಿಯರ ಕತ್ತಿಯಿಂದ

ಕೊಲ್ಲಿಸಿ ಅವನ ಹೆಂಡತಿಯನ್ನು ನಿನ್ನ ಹೆಂಡತಿಯನ್ನಾಗಿ ತೆಗೆದುಕೊಂಡದರಿಂದಲೂ ಕತ್ತಿಯು ನಿನ್ನ ಮನೆಯನ್ನು ಬಿಟ್ಟುಹೋಗುವದಿಲ್ಲ" (2 ಸಮುವೇಲ 12:10). ಅಪರಾಧವು ಕ್ಷಮಿಸಲ್ಪಡುತ್ತದೆ, ಆದರೆ ದುಷ್ಪರಿಣಾಮಗಳು ಬಿಟ್ಟು ತೊಲಗುವದಿಲ್ಲ. ಕಥೆಯು 12ನೇ ಅಧ್ಯಾಯದ ಉಳಿದ ಭಾಗದಲ್ಲಿ ಮತ್ತು 13ನೇ ಅಧ್ಯಾಯದಲ್ಲಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ನಿರಪರಾಧಿಗಳು ಬಾಧೆಗೊಳಗಾಗುತ್ತಾರೆ: ತಾಮರಳು ಅತ್ಯಾಚಾರಕ್ಕೊಳ ಗಾಗುತ್ತಾಳೆ. ದಾವೀದನು ತನ್ನ ಮಕ್ಕಳಿಂದ ಗೌರವವನ್ನು ಕಳೆದುಕೊಂಡನು. ಅಮ್ನೋನನು ಅಬ್ಷಾಲೋಮನಿಂದ ಕೊಲ್ಲಲ್ಪಡುತ್ತಾನೆ; ಅಬ್ಷಾಲೋಮನು ಬಂಡಾಯ ವೇಳುತ್ತಾನೆ ಮತ್ತು ಕೊಲ್ಲಲ್ಪಡುತ್ತಾನೆ. ದೇವರ ಉದ್ದೇಶಕ್ಕೆ ದಕ್ಕೆಯಾಯಿತು (2 ಸಮುವೇಲ 12:14). ಕತ್ತಿಯು ಪುನಃ ಪುನಃ ಜಳಪಿಸಲ್ಪಟ್ಟಿತು.

ನಿಜವಾಗಿಯೂ, ಪಾಪವು ಭಯಂಕರವಾದದ್ದು! ಅದು ಎಷ್ಟೊಂದು ಭಯಂಕರವೆಂದರೆ, ಅದು ಕ್ಷಮಿಸಲ್ಪಟ್ಟ ಮೇಲೆಯೂ ಅದರಿಂದಾಗುವ ದುಷ್ಪರಿಣಾಮಗಳು ಜೀವಂತವಾಗಿರುತ್ತವೆ! ನಮ್ಮ ವರ್ಚಸ್ಸಿಗೆ ದಕ್ಕೆಯಾಗುತ್ತದೆ. ಕುಟುಂಬದವರು ಮತ್ತು ಸ್ನೇಹಿತರಂಥ ನಿರಪರಾಧಿಗಳು ಬಾಧೆಯನ್ನು ಅನುಭವಿಸುತ್ತಾರೆ. ಕತ್ತಿಯು ವರ್ಷಗಳ ವರೆಗೆ ಕತ್ತರಿಸುವದನ್ನು ಮುಂದುವರೆಸಬಲ್ಲದು.

ನಾವು ನಮ್ಮ ಯುವ ಜನತೆಗೆ ಹೀಗೆ ಹೇಳುವದರಲ್ಲಿ ಅಷ್ಟೇನೂ ಆಶ್ಚರ್ಯವೇನಿಸು ವದಿಲ್ಲ: ಪಾಪದಿಂದ ದೂರವಿರಿ. ನಿಮ್ಮ ಯೌವನಭರಿತ ಕುತೂಹಲವು ನಿಮ್ಮನ್ನು ಪಾಪದೊಳಗೆ ನಡಿಸುವಂತೆ ಬಿಡಬೇಡಿರಿ. ಶೋಧನೆಯಿಂದ ದೂರವಿರಿ. ಅದರಿಂದಾಗುವ ದುಷ್ಪರಿಣಾಮಗಳು ಭಯಂಕರವಾದವುಗಳು!

ಆದದರಿಂದ, ದಾವೀದನಿಗೆ ಅನುದಿನವು ಜೀವಿಸುವದಕ್ಕೆ ನಿರಂತರವಾದ ಬಲದ ಅಗತ್ಯವಿತ್ತು. ದಾವೀದನು ಅದರಲ್ಲಿ ಹೇಗೆ ಸಫಲನಾದನು? ಆತನಿಗೆ ಕೆಲವು ಸಹಾಯಗಳು ದೊರೆತದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಆತನಿಗೆ ಕ್ಷಮಾಪಣೆ ಹೊಂದಿದ್ದೇನೆಂಬ ಭಾವನೆಯಿತ್ತು (ಕೀರ್ತನೆ 32:1, 2). ಈಗ ಆತನ ಮತ್ತು ದೇವರ ನಡುವಿನ ಸಂಬಂಧವು ಪುನಃ ಸರಿಪಡಿಸಲ್ಪಟ್ಟಿದ್ದರಿಂದ, ಆತನು ಮುನ್ನಡೆಯಲು ಸಾಧ್ಯವಾಗಿತ್ತು. ಆತನು ದೇವರಲ್ಲಿಟ್ಟಿದ್ದ ತನ್ನ ನಂಬಿಕೆ ಮತ್ತು ವಿಶ್ವಾಸದಿಂದ ಬಲಗೊಂಡಿದ್ದನು. ಆತನ ದೇವರು ಅವನಿಗೆ ಸಹಾಯ ಮಾಡುವವನಾಗಿದ್ದನು (ಕೀರ್ತನೆ 32:7).

ಇತರ ಸಂಗತಿಗಳು ಸಹ ಸಹಾಯ ಮಾಡಿರ*ಬಹುದಾಗಿದೆ.* ಉದಾಹರಣೆಗೆ, ನಾತಾನನು ಆತನ ಸ್ನೇಹಿತನಾಗಿ ಮುಂದುವರೆದನೆಂದು ತೋರುತ್ತದೆ. ನಾತಾನನು ಕಥೆಯ ವಿವಿಧ ಹಂತಗಳಲ್ಲಿ ತಿರಿಗಿ ಕಾಣಿಸಿಕೊಳ್ಳುತ್ತಾನೆ (2 ಸಮುವೇಲ 12:25; 1 ಅರಸುಗಳು 1). ಬಹುಶಃ ಆತನು ಅಥವಾ ಆತನ ರೀತಿಯ ಬೇರೊಬ್ಬರು ದಾವೀದನ ಕೆಟ್ಟ ದಿನಗಳಲ್ಲಿ ಮುನ್ನಡೆಯಲು ಅವನಿಗೆ ಸಹಾಯ ಮಾಡಿರಬಹುದಾಗಿದೆ.

ಅದೇ ದಾರಿಗಳು ನಮಗೆ ಬೇಕಾದ ಬಲವನ್ನು ನೀಡಬಲ್ಲವು. ನಾವು ಪಶ್ಚಾತ್ತಾಪಪಟ್ಟು ದೇವರ ಚಿತ್ತವನ್ನು ಮಾಡುವದಾದರೆ, ನಮಗೆ ಸಹ ಕ್ಷಮಾಪಣೆಯ ವಾಗ್ದಾನ ಮಾಡಲ್ಪಟ್ಟಿರುತ್ತದೆ (ಅಪೊಸ್ತಲರ ಕೃತ್ಯಗಳು 2:38; 8:22). ದೇವರು ನಮ್ಮ ಸಂಗಡ ಇದ್ದು

ನಮಗೆ ಸಹಾಯ ಮಾಡುವ ವಾಗ್ದಾನ ನೀಡುತ್ತಾನೆ (ಇಬ್ರಿಯ 13:6). ದೇವರ ಒದಗಿಸುವಿಕೆಗಳಲ್ಲೊಂದೆಂದರೆ ಜನರ ಸಭೆಯಾಗಿದೆ, ಅವರು ನಮಗೆ ಸಹಾಯ ಮಾಡಿ ಬಲಪಡಿಸಬಲ್ಲರು. ದಾವೀದನಿಗೆ ನಾತಾನನು ಅಥವಾ ಇತರರು ಸಹಾಯ ಮಾಡಿರಬಹುದೆಂದು ನಾವು ಊಹಾಪೋಹಗಳನ್ನು ಮಾಡಿಕೊಳ್ಳಬಹುದು, ಆದರೆ ದೇವರು ನಮಗೆ ಅನುಗ್ರಹಿಸಿರುವ ಸಭೆಯ ಬಗ್ಗೆ ನಾವು ಯಾವ ಊಹೆಗಳನ್ನು ಮಾಡಬೇಕಿಲ್ಲ. ನಾವು ಕರ್ತನ ಸಭೆಯ ಅಂಗವಾಗಿರುವ ಅಗತ್ಯವಿದೆ (ಅಪೊಸ್ತಲರ ಕೃತ್ಯಗಳು 2:38, 47; 1 ಕೊರಿಂಥ 12:13; ಎಫೆಸ 1:22, 23; 5:23, 25). ನಾವು ಪ್ರೋತ್ಸಾಹವನ್ನು ಪಡೆಯಬಹುದಾದ ಒಂದು ಸ್ಥಳೀಯ ಸಭೆಯಲ್ಲಿ ಅಂಗವಾಗಿರಬೇಕಾದ ಅಗತ್ಯವಿರುತ್ತದೆ.

*ಮುಕ್ತಾಯ.* ನಾವು ಸಾಮಾನ್ಯವಾಗಿ ಸಂತೋಷದೊಂದಿಗೆ ಮುಕ್ತಾಯಗೊಳ್ಳುವ ಕಥೆಗಳನ್ನು ಇಷ್ಟಪಡುತ್ತೇವೆ. ಈ ಕಥೆಗೂ ಅಂಥಹ ಒಂದು ಮುಕ್ತಾಯವಿರುತ್ತದೆ. ದಾವೀದನು ತನ್ನ ಜೀವಿತವನ್ನು ಹಾಳು ಮಾಡಿಕೊಂಡನು, ಆದರೆ ಅಂತ್ಯದಲ್ಲಿ ಅದು ಉತ್ತಮವಾಗಿ ಹೊರಹೊಮ್ಮಿತು.

ದಾವೀದನು ಪುನಃ ದೇವರ ದಯೆಗೆ ಪಾತ್ರನಾದನು (ನೋಡಿರಿ 1 ಅರಸುಗಳು 11:12). ಆತನ ಮರಣದ ಬಳಿಕ, ದೇವಜನಾಂಗದ ಎಲ್ಲಾ ಅರಸರನ್ನು ಆ ಸಂದರ್ಭದಿಂದ ದಾವೀದನಿಂದ ಅಳೆಯಲ್ಪಡುತ್ತಿದ್ದರು. ಯೇಸು ಬಂದಾಗ, ಆತನು "ದಾವೀದನ ಕುಮಾರನು" ಎಂದು ಕರೆಯಲ್ಪಟ್ಟನು (ಮತ್ತಾಯ 1:1; 9:27; 21:9). ಆತನು ಈ ಭೂಮಿಯಿಂದ ಹೋಗಿ ಪರಲೋಕದಲ್ಲಿ ಆಳ್ವಿಕೆಯನ್ನು ಆರಂಭಿಸಿದಾಗ, ಆತನು "ದಾವೀದನ ಸಿಂಹಾಸನದ ಮೇಲೆ" ಕುಳಿತುಕೊಂಡನೆಂದು ಹೇಳಲಾಗುತ್ತದೆ (ಅಪೊಸ್ತಲರ ಕೃತ್ಯಗಳು 2:29-36). ಆತನ ಮರಣದ ಸಾವಿರ ವರ್ಷಗಳ ಬಳಿಕ, ದಾವೀದನು ಆಗಲೂ ದೇವರ ಹೃದಯಕ್ಕೆ ಒಪ್ಪುವ ಮನುಷ್ಯನೆಂದು ಪರಿಚಿತನಾಗಿದ್ದನು (ಅಪೊಸ್ತಲರ ಕೃತ್ಯಗಳು 13:22).

ನಿಮ್ಮ ಜೀವಿತವು ಈಗ ಯಾವ ರೀತಿಯ ಆಕಾರದಲ್ಲಿದೆ ಎಂದು ನನಗೆ ತಿಳಿಯದು, ಆದರೆ ನಿಮಗೆ ನಾನು ಇದನ್ನಂತೂ ಹೇಳುತ್ತೇನೆ: ಅದು ಯಾವ ಆಕಾರದಲ್ಲಿದ್ದರೂ ಚಿಂತೆಯಿಲ್ಲ, ನಿಮ್ಮ ಕಥೆಗೆ ಒಂದು ಸಂತೋಷಕರ ಮುಕ್ತಾಯ ಸಿಗಬಲ್ಲದು. ನೀವು ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು-ಒಂದು ವೇಳೆ ನೀವು ಆ ಪಾಪದಿಂದ ವಿಮುಖರಾಗಿ ದೇವರ ಚಿತ್ತವನ್ನು ಮಾಡುವದಕ್ಕೆ ಮನಸ್ಸುಳ್ಳವರಾಗಿದ್ದರೆ ಅದು ಸಾಧ್ಯವಿರುತ್ತದೆ.

## ತಂದೆಯಾದ ಅಬ್ರಹಾಮನ ಹೆಜ್ಜೆ ಜಾಡಿನಲ್ಲಿ ಹಿಂಬಾಲಿಸುವದದು (4:12)

ರೋಮಾ 4 ರಲ್ಲಿ, "ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು" ಎಂದು ನಮಗೆ ಹೇಳಲ್ಪಟ್ಟಿತು (4:3). ನಂತರ ನಾವು "ಪಿತೃವಾಗಿರುವ ಅಬ್ರಹಾಮನಿಗೆ . . . ಇದ್ದ ನಂಬಿಕೆಯ ಹೆಜ್ಜೆಗಳನ್ನು ಹಿಡಿದು" ನಡೆಯಲು ಪ್ರೋತ್ಸಾಹಿಸಲ್ಪಟ್ಟೆವು (4:12).[61] ಈ ಮಾತುಗಳು ಒಬ್ಬ ಚಿಕ್ಕ ಬಾಲಕನು ತನ್ನ ತಂದೆಯ ಹಿಂದೆ ನಡೆಯುತ್ತಾ ತನ್ನ ಕಾಲುಗಳನ್ನು ಅಗಲಿಸಿ ತಂದೆಯ ಹೆಜ್ಜೆ ಗುರುತುಗಳಲ್ಲಿ ಇಡುತ್ತಾ

ಸಾಗಿದ ಕಥೆಯನ್ನು ನೆನಪಿಗೆ ತರುತ್ತವೆ.

"ಅಬ್ರಹಾಮನ ನಂಬಿಕೆಯ ಹೆಜ್ಜೆಗಳಲ್ಲಿ ನಡೆಯುವದು" ಎಂದರೆ ಅರ್ಥವೇನು? ರೋಮಾ 4ರ ಕಡೆಯ ಭಾಗದಲ್ಲಿ, ಪೌಲನು ಅಬ್ರಹಾಮನ ನಂಬಿಕೆಯ ಸ್ವಭಾವವನ್ನು ಕುರಿತು ಚರ್ಚಿಸಿದನು. Richard A. Batey ಬರೆದದ್ದೇನೆಂದರೆ "ಇಲ್ಲಿ ಪೌಲನು ತನ್ನ ಬರಹಗಳಲ್ಲಿ ಬೇರೆ ಎಲ್ಲೂ ತಿಳಿಸದ ರೀತಿಯಲ್ಲಿ ನಂಬಿಕೆಯ ಅರ್ಥವಿವರಣೆಯನ್ನು ನೀಡುತ್ತಾನೆ.[62] ಆತನ ಅರ್ಥವಿವರಣೆಯು ಒಂದು ಅಸ್ಪಷ್ಟ ಹಾಗೂ ಶೈಕ್ಷಣೀಕ ಶೈಲಿಯಲ್ಲಿ ಹೇಳಲ್ಪಟ್ಟಿರುವದಿಲ್ಲ ಆದರೆ ಅದು ನಂಬಿಕೆಯ ಗುಣಲಕ್ಷಣವು ಬಯಲುಗೊಳಿಸಲ್ಪಟ್ಟಂಥ ಅಬ್ರಹಾಮನ ಪ್ರತಿಕ್ರಿಯೆಯ ಒಂದು ವಿವರಣೆಯಾಗಿದೆ."[63]

ವಾಕ್ಯಭಾಗವು ಅಬ್ರಹಾಮನ ನಂಬಿಕೆಯ ಬಗ್ಗೆ ಏನು ಹೇಳುತ್ತದೆ? (1) ಆತನು ದೇವರ *ವ್ಯಕ್ತಿತ್ವದಲ್ಲಿ* ನಂಬಿದನು (4:17a). (2) ಆತನು "ಸತ್ತವರನ್ನು ಬದುಕಿಸುವ" ದೇವರ ಶಕ್ತಿಯನ್ನು ನಂಬಿದನು (4:17b-19) (3) ಆತನು ದೇವರ *ವಾಗ್ದಾನಗಳಲ್ಲಿ* ನಂಬಿದನು, ಆತನು ನುಡಿದ ಮಾತನ್ನು ನೆರವೇರಿಸುವನೆಂದು ಆತನಲ್ಲಿ ಭರವಸವಿಟ್ಟಿದ್ದನು (4:20, 21).

ನಾವು ಅಬ್ರಹಾಮನ ನಂಬಿಕೆಯ ಹೆಜ್ಜೆಜಾಡುಗಳಲ್ಲಿ ನಡೆಯುವದಾದರೆ, ನಾವು ನಮ್ಮ ಸುತ್ತಲು ಮಾತ್ರವೇ ನೋಡದೆ ನಮ್ಮ ಮೇಲ್ಗಡೆ ಸಹ-ದೇವರ ಕಡೆಗೆ-ನೋಡುವವರಾಗಿರಬೇಕು. ನಾವು ಜೀವನದ ಸಮಸ್ಯೆಗಳನ್ನು ನಿರ್ಲಕ್ಷಿಸಬಾರದು, ಆದರೆ ಅವುಗಳಿಂದ ವಿಚಲಿತರಾಗುವದಕ್ಕೆ ನಿರಾಕರಿಸಬೇಕು. ಯಾಕೆಂದರೆ ನಮಗೊಬ್ಬ ಶಕ್ತಿಶಾಲಿ ದೇವರು, ಒಬ್ಬ ಪ್ರೀತಿ ಸ್ವರೂಪಿಯಾದ ತಂದೆಯಿದ್ದಾನೆ. ಯೆರೆಮೀಯನು ಹೇಳಿದನು, "ಯಾವ ಕಾರ್ಯವೂ ನಿನಗೆ [ದೇವರು] ಅಸಾಧ್ಯವಲ್ಲ" (ಯೆರೆಮೀಯ 32:17). ದೇವದೂತನು ಮರಿಯಳಿಗೆ ಹೇಳಿದನು, "ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ" (ಲೂಕ 1:37). ನಾವು "ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯುವದನ್ನು" ಕಲಿಯಬೇಕು (2 ಕೊರಿಂಥ 5:7).

## ದೇವರಲ್ಲಿ ನಂಬಿಕೆಯಿಡುವದು (4:17)

ಅಬ್ರಹಾಮನ ನಂಬಿಕೆಯು *ಅವನಲ್ಲಿ* ಆಗಿರಲಿಲ್ಲ ಆದರೆ ದೇವರಲ್ಲಿಯೇ ಆಗಿತ್ತು. ಅಬ್ರಹಾಮನ ನಂಬಿಕೆಯು ಅವನ *ನಂಬಿಕೆಯಲ್ಲಿ* ಸಹ ಆಗಿರಲಿಲ್ಲ, ಆದರೆ ತನ್ನ ಕರ್ತನಲ್ಲಿಯೇ ಇತ್ತು. ನಮ್ಮಲ್ಲಿ ಕೆಲವರು ಬಹಳ ಕೆಲಸಗಳಾಧಾರಿತ ಪ್ರವೃತ್ತಿಯುಳ್ಳವರಾಗಿದ್ದು, ನಾವು ಜಾಗ್ರತೆಯಿಂದಿಲ್ಲವಾದರೆ, ನಮ್ಮ ನಂಬಿಕೆಯ ಬಲವೇ ಹೆಚ್ಚು ಪ್ರಾಮುಖ್ಯವಾದದ್ದು ಎಂದು ಯೋಚಿಸುವದಕ್ಕೆ ಆರಂಭಿಸಿಬಿಡುತ್ತೇವೆ. ನಂಬಿಕೆಯು "ಬಲಹೀನ" (4:19) ಅಥವಾ "ಬಲಭರಿತ" (4:20)[64] ಆಗಿರಬಹುದಾಗಿದೆ ಮತ್ತು ನಮ್ಮ ನಂಬಿಕೆಯು ಬೆಳೆಯುವ ಅಗತ್ಯವಿರುತ್ತದೆ (ನೋಡಿರಿ 4:20). ಹೇಗಿದ್ದರೂ, ನೀತಿನಿರ್ಣಯದ ವಿಷಯದಲ್ಲಿ, ಕರ್ತನ ಮೇಲಿನ ನಮ್ಮ ಗಮನವೇ ಪ್ರಾಮುಖ್ಯ ಹೊರತು ನಮಗಿರುವ ನಂಬಿಕೆಯ ಗುಣಮಟ್ಟ ಅಥವಾ ಪ್ರಮಾಣವು ಹೆಚ್ಚು ಪ್ರಾಮುಖ್ಯವಾಗಿ ರುವದಿಲ್ಲ.

ನೀವು ದಾರಿಯಲ್ಲಿ ಹೋಗುವಾಗ ಒಂದು ದೊಡ್ಡ, ಅಗಲವಾದ ಹಳ್ಳವೊಂದು ಮುಂದೆ

ಬರುತ್ತದೆಂದು ಕಲ್ಪಿಸಿಕೊಳ್ಳಿರಿ, ನೀವು ಅದನ್ನು ದಾಟಲೇ ಬೇಕಾಗಿರುತ್ತದೆ. ಆಚೆಯ ದಡಕ್ಕೆ ಸೇರಲು ಮೂರು ದಾರಿಗಳನ್ನು ಮನಸ್ಸಿನಲ್ಲಿ ಊಹಿಸಿಕೊಳ್ಳಿರಿ. ನೀವು ಆ ಕಡೆಗೆ ಜಿಗಿಯಬಹುದು; ಅದು ತನ್ನಲ್ಲಿ ಒಬ್ಬನಿಗಿರುವ ನಂಬಿಕೆಯನ್ನು ದೃಷ್ಟಾಂತಪಡಿಸುತ್ತದೆ. (ಓಹ್, ಇಗೋ, ನೀವು ಆಳವಾದ ಹಳ್ಳಕ್ಕೆ ಬಿದ್ದುಬಿಟ್ಟಿರಿ!) ಎರಡನೆಯ ಆಯ್ಕೆಯು ಒಂದು ಹಗ್ಗವನ್ನು ಮೇಲಕ್ಕೆ ದೃಢವಾಗಿ ಕಟ್ಟಿ ಉಪಯೋಗಿಸುವದು-ಹಳ್ಳದ ಆಚೆಯ ವರೆಗೂ ಹಿಡಿದು ಜಿಗಿಯುವಷ್ಟು ಉದ್ದವಾದ ಹಗ್ಗ. ನೀವು ಒಂದು ತುದಿಯನ್ನು ಹಿಡಿದುಕೊಂಡು ಉಯ್ಯಾಲೆಯಂತೆ ಆ ಕಡೆಗೆ ಜಿಗಿಯುವಿರಿ. ಈ ವಿಧಾನವು ಇಮ್ಮಡಿ ನಂಬಿಕೆಯಲ್ಲಿ ಕೇಂದ್ರಿಕೃತವಾಗಿರುತ್ತದೆ: ಹಗ್ಗವು ನಿಮ್ಮನ್ನು ಹಿಡಿದಿಟ್ಟುಕೊಳ್ಳುವದು ಎಂಬ ನಂಬಿಕೆ ನಿಮಗಿರುತ್ತದೆ, ಆದರೆ ನಿಮಗೆ ನಿಮ್ಮಲ್ಲಿ ಸಹ ನಂಬಿಕೆಯಿರುತ್ತದೆ-ನೀವು ಸುರಕ್ಷಿತವಾಗಿ ಆಚೆಗೆ ಹೋಗುವ ವರೆಗೆ ಹಿಡಿದುಕೊಳ್ಳಬಲ್ಲಿರೆಂಬ ನಂಬಿಕೆ. ಮೂರನೆಯ ದಾರಿಯೆಂದರೆ, ಹಳ್ಳದ ಆಚೆಯ ವರೆಗೂ ಸಾಗುವ ಒಂದು ಸೇತುವೆ. ನೀವು ದಾಟುತ್ತಿರುವಾಗ ಸೇತುವೆಯು ನಿಮ್ಮನ್ನು ಹೊತ್ತುಕೊಳ್ಳುವದೆಂಬ ನಂಬಿಕೆ ನಿಮಗಿರುವದರಿಂದ ನೀವು ಸೇತುವೆಯಿಂದ ನಡೆದು ಸಾಗುವಿರಿ. ಇಲ್ಲಿ ನಿಮಗೆ ಬೆಂಬಲವಾಗಿರುವದು ನಿಮ್ಮ ನಂಬಿಕೆಯಲ್ಲ ಆದರೆ ಸೇತುವೆಯೇ ಆಗಿದೆ. ಬಹುಶಃ ನೀವು ನಿರ್ಭಯತೆಯಿಂದ ದಾಟುವಿರಿ, ಅಥವಾ ನೀವು ಹೆದರಿಕೆಯಿಂದ ದಾಟುವಿರಿ. ಯಾವ ವಿಧದಲ್ಲಿ ದಾಟಿದರೂ ಅಲ್ಲಿ ನಿಮ್ಮ ನಂಬಿಕೆಯ ಪ್ರಮಾಣ ಅಥವಾ ಗುಣಮಟ್ಟವಾಗಲಿ ನಿಮ್ಮನ್ನು ಮೇಲಕ್ಕೆ ಹಿಡಿದಿಟ್ಟಿರುವದಿಲ್ಲ, ಆದರೆ ಸೇತುವೆಯೇ ನಿಮ್ಮನ್ನು ಹಿಡಿದುಕೊಂಡಿರುತ್ತದೆ.

ಅಬ್ರಹಾಮನ ನಂಬಿಕೆಯ ಮುಖ್ಯ ಗಮನವು ಆತನ ಮೇಲಿರಲಿಲ್ಲ. ಅದು ಆತನ ನಂಬಿಕೆಯ ಮೇಲೆ ಸಹ ಆಗಿರಲಿಲ್ಲ. (ಅಬ್ರಹಾಮನ ನಂಬಿಕೆಯು ಪರಿಪೂರ್ಣತೆಗೆ ಬಹಳ ದೂರವಿತ್ತು.) ಬದಲಿಗೆ, ಅಬ್ರಹಾಮನು ದೇವರಲ್ಲಿ ನಂಬಿಕೆಯಿಟ್ಟಿದ್ದನು. ಅದೇ ರೀತಿಯಲ್ಲಿ, ನಮ್ಮ ನಂಬಿಕೆಯ ಕೇಂದ್ರಬಿಂದು ದೇವರೇ ಆಗಿರಬೇಕು. ನಾವು ಆತ್ಮೀಕವಾಗಿ ಸತ್ತವರಾಗಿದ್ದರೂ, ಆತನು ನಮಗೆ ಜೀವವನ್ನು ಕೊಡಬಲ್ಲನು (ಎಫೆಸ 2:5). ಒಂದು ದಿನ ಆತನು ನಮ್ಮ ಸತ್ತ ದೇಹಗಳಿಗೆ ಹೊಸ ಜೀವವನ್ನು ಕೊಡುವನು. ಅಷ್ಟುಮಾತ್ರವಲ್ಲದೆ, ನಾವು ಪಾಪಿಗಳಾಗಿದ್ದಾಗಲೂ ನಮ್ಮನ್ನು ನೋಡಿ ನಮ್ಮೊಳಗೆ ಸುಧಾರಿಸುವ ಸಾಮರ್ಥ್ಯವಿರುವದನ್ನು ಕಾಣುವವನಾಗಿದ್ದಾನೆ, ಮತ್ತು "ಇಲ್ಲದ್ದನ್ನು ಇರುವದಾಗಿ ಕರೆಯುವನು" (4:17).

---

**ಅಡಿ ಟಿಪ್ಪಣಿಗಳು**

[1]James R. Edwards, *Romans*, New International Biblical Commentary (Peabody, Mass.: Hendrickson Publishers, 1992), 112. Douglas J. Moo, *Romans*, The NIV Application Commentary ಯಲ್ಲಿ ವಿಷಯದ ಕುರಿತ ಯೆಹೂದಿ ಉಲ್ಲೇಖಗಳ ಒಂದು ಮಾದರಿಯು ಕಾಣಿಸಿಕೊಳ್ಳುತ್ತದೆ (Grand Rapids, Mich.: Zondervan Publishing House, 2000), 147. [2]*Logizomai ಯ ಮೂಲವು* λέγω (*legō*, "ನಾನು ಹೇಳುತ್ತೇನೆ"), ಈ ಪದವು (*logos*, "ವಾಕ್ಯ") ಎಂಬುದಕ್ಕೆ ಸಂಬಂಧಿಸಿದೆ. [3]*Logizomai* 2:26 ರಲ್ಲಿ *ಎಂಬುದು*" ಪರಿಗಣಿಸಲಾಗಿದೆ" ಮತ್ತು "ಸಮರ್ಥಿಸು" 3:28ರಲ್ಲಿ

ಎಂದರ್ಥವಾಗಿರುತ್ತದೆ. [4]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 597. [5]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: Inter-Varsity Press, 1994), 125. [6]E. D. Burton, *Galatians: International Critical Commentary* (Edinburgh: T. & T. Clark, 1921), 447. [7]Bauer, 743. [8]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 198. [9]Ibid. [10]ಕೀರ್ತನೆ 51 ರ ಮುಂಚಿನ ಪ್ರಾಚೀನ ತಲೆಬರಹವು ಹೀಗಿರುತ್ತದೆ "ಕ್ಷಮಾಪಣೆಗಾಗಿ ಮನಮುರಿದ ಪಾಪಿಯ ಒಂದು ಪ್ರಾರ್ಥನೆ."

[11]Eddie Cloer, *Psalms 1—50*, Truth for Today Commentary (Searcy, Ark.: Resource Publications, 2004), 428; *Psalms 51—89*, Truth for Today Commentary (Searcy, Ark.: Resource Publications, 2006), 3–4. [12]C. F. Keil and Franz Delitzsch, *Psalms*, Commentary on the Old Testament, vol. 5 (Peabody, Mass.: Hendrickson Publishers, 1989), 395. [13]Ibid. "ಅದು ಎಂದಿಗೂ ನಡದೇ ಇಲ್ಲವೆನೋ ಎಂಬಂತೆ" ಎಂಬ ಪದಗಳು ದಾವೀದನ ಪಾಪ ಅಪರಾಧವನ್ನಷ್ಟೆ ಸೂಚಿಸುತ್ತವೆ, ಹೊರತು ಆ ಪಾಪದ ದುಷ್ಪರಿಣಾಮಗಳ ಕುರಿತಲ್ಲ (ನೋಡಿರಿ 2 ಸಮುವೇಲ 12:10). [14]Jim Townsend, *Romans: Let Justice Roll Down* (Elgin, Ill.: David C. Cook Publishing Co., 1988), 31. [15]ಆದಿಕಾಂಡದಲ್ಲಿ ಅಬ್ರಹಾಮನ ಐತಿಹಾಸಿಕ ದಾಖಲೆಯ ಜೊತೆಯಲ್ಲಿ, ರೋಮಾ 4ನ್ನು ಅರ್ಥಮಾಡಿಕೊಳ್ಳುವದಕ್ಕೆ ಸಹಾಯವಾಗುವ ಇನ್ನೊಂದು ವಾಕ್ಯ ಭಾಗವೆಂದರೆ ಗಲಾತ್ಯ 3. ಈ ಎರಡೂ ವಾಕ್ಯಭಾಗಗಳನ್ನು ಅನೇಕ ಹೋಲಿಕೆಗಳಿರುತ್ತವೆ. [16]ಗ್ರೀಕ್ ಪ್ರತಿಯಲ್ಲಿ ಅಕ್ಷರಶಃ "ಸುನ್ನತಿ," (περιτομή, *peritomē*) ಮತ್ತು "ಸುನ್ನತಿಯಾಗದೆ" (ἀκροβυστία, *akrobustia*) ಎಂದಿರುತ್ತದೆ (ನೋಡಿರಿ KJV). [17]ಸತ್ಯವೇದದಲ್ಲಿ ಘಟನೆಗಳು ಯಾವಾಗಲೂ ಕ್ರಮಾನುಸಾರದಲ್ಲಿ ವ್ಯವಸ್ಥೆಗೊಳಿಸಲ್ಪಟ್ಟಿರುವದಿಲ್ಲ, ಆದರೆ ಈ ಘಟನೆಗಳ ಸರಣಿಯನ್ನು ಸೂಚಿಸುವದಕ್ಕೆ ಅಬ್ರಹಾಮನಿಗೆ ವಯಸ್ಸುಗಳ ಸಂಖ್ಯೆಯನ್ನು ಕೊಡಲಾಗಿದೆ (ನೋಡಿರಿ ಆದಿಕಾಂಡ 12:4; 16:3, 16; 17:1). ರಬ್ಬಾನಿಕ್ ಕಾಲಕ್ರಮಾನುಸಾರ ಪ್ರಕಾರ, ಆದಿಕಾಂಡ 15:6 ಮತ್ತು ಅಧ್ಯಾಯ 17ರ ಘಟನೆಗಳ ನಡುವೆ ಇನ್ನೂ ದೀರ್ಘವಾದ ಅಂತರವಿರುತ್ತದೆ—ಇಪ್ಪತ್ತೊಂಬತ್ತು ವರ್ಷಗಳು. (Morris, 202, n. 41.) [18]Stott, 129. [19]Moo, 154. [20]Richard A. Batey, *The Letter of Paul to the Romans*, The Living Word Commentary (Austin, Tex.: R. B. Sweet Co., 1969), 60.

[21]F. F. Bruce, *The Letter of Paul to the Romans*, 2d ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 108. [22]"ಸಂತತಿಯವರು" ಎಂಬದ ಪದದ ವಿಷಯದಲ್ಲಿ, 4:16 ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ. [23]ಭೂಮಿಯ (ಆಸ್ತಿ) ಬಗ್ಗೆ ಅಬ್ರಹಾಮನಿಗೆ ಮಾಡಲಾದ ಏಕೈಕ ವಾಗ್ದಾನವೆಂದರೆ ಆತನು ಹಾಗೂ ಆತನ ಸಂತತಿಯವರು ಕಾನಾನ ದೇಶವನ್ನು ಬಾಧ್ಯವಾಗಿ ಪಡೆಯುವರು. ಈ ವಾಗ್ದಾನವು ಈಗಲೂ ನೆರವೇರಬೇಕಾಗಿರುವ ಅಗತ್ಯವಿಲ್ಲ ಯಾಕೆಂದರೆ ಅದು ಈಗಾಗಲೇ ಹಳೆ ಒಡಂಬಡಿಕೆಯ ಕಾಲದಲ್ಲಿಯೇ ನೆರವೇರಿರುತ್ತದೆ. ಹಲವಾರು ಸಂದರ್ಭಗಳಲ್ಲಿ, ಇಸ್ರಾಯೇಲ್ ಸಾಮ್ರಾಜ್ಯವು ಮೆಡಿಟರೇನಿಯನ್ ಸಮುದ್ರದಿಂದ ಯುಫ್ರೇಟಿಸ್ ನದಿಯವರೆಗೂ ವಿಸ್ತರಿಸಿತ್ತು (ನೋಡಿರಿ ಆದಿಕಾಂಡ 15:18; 2 ಸಮುವೇಲ 8:3; 1 ಅರಸು 8:65). [24]ಯೆಹೂದ್ಯ ಉಪದೇಶಕರು ಪ್ರತಿಪಾದಿಸುವದೇನೆಂದರೆ ಮೋಶೆಗೆ ಧರ್ಮಶಾಸ್ತ್ರವು ಪ್ರಕಟಗೊಳಿಸಲ್ಪ ಡುವದಕ್ಕೆ ಶತಮಾನಗಳ ಮುಂಚೆಯೇ ಅಬ್ರಹಾಮನು ಧರ್ಮಶಾಸ್ತ್ರವನ್ನು ಹೊಂದಿದ್ದನು ಎಂಬದಾಗಿ, ಆದರೆ ಪೌಲನು ಅದನ್ನು ಅಲ್ಲಗಳೆಯುತ್ತಾನೆ. [25]Bauer, 539. [26]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 3. [27]Bauer, 525. [28]J. D. Thomas, *Romans*, The Living Word (Austin, Tex.: R. B. Sweet Co., 1965), 34. [29]Dave Miller, sermon presented on the *Truth in Love* television program, Fort Worth, Texas, 23 January 2002. [30]William Baur and Roland K. Harrison, "Ishmael," in *The International Standard Bible Encyclopedia*, rev. ed., ed. Geoffrey Bromiley (Grand Rapids, Mich.: Wm. B. Eerdmans

Publishing Co., 1982), 2:905.

[31]Morris, 210. *Elpis* ಎಂಬುದು ಹೊಸ ಒಡಂಬಡಿಕೆಯಲ್ಲಿ 53 ಸಾರಿ ಸಿಕ್ಕುತ್ತದೆ; ಇದರಲ್ಲಿ ಮೂವತ್ತಾರು ಸಾರಿ ಪೌಲನ ಬರಹಗಳಲ್ಲಿಯೇ ಆಗಿರುತ್ತದೆ. [32]Thomas, 37. [33]Morris, 211, n. 84. [34]Ibid., 211. [35]Bauer, 231. [36]ಒಂದು ಗ್ರೀಕ್ ಪದವು "ಸಂಪ್ರದಾನ ಸಂದರ್ಭ" ದಲ್ಲಿರುವಾಗ, ಅದನ್ನು ಆಂಗ್ಲದಲ್ಲಿ ಒಂದು ಪೂರ್ವಪ್ರತ್ಯಯದೊಂದಿಗೆ ಅನುವಾದಿಸತಕ್ಕದ್ದು. ವಾಕ್ಯಭಾಗದಲ್ಲಿ ಯಾವದೇ ಪೂರ್ವಪ್ರತ್ಯಯ ಇಲ್ಲವಾದಲ್ಲಿ, ಸನ್ನಿವೇಶಕ್ಕೆ ಅನುಗುಣವಾಗಿ ಅದಕ್ಕೆ ಒಂದು ಪೂರ್ವಪ್ರತ್ಯಯ ನೀಡಲ್ಪಡಬೇಕು. [37]Morris, 212. [38]G. Delling, "*plērophoreō*," in *Theological Dictionary of the New Testament*, ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 871. [39]Donald Grey Barnhouse, *God's Remedy*: *Romans 3:21—4:25* (Grand Rapids, Mich.: Wm. B. Eerdmans Publishing Co., 1954), 311–12. [40]C. E. B. Cranfield, *Romans: A Shorter Commentary* (Grand Rapids, Mich.: Wm. B. Eerdmans Publishing Co., 1985), 96.

[41]"ಅಪರಾಧಗಳು" ಎಂಬದಕ್ಕೆ ಪದವು παράπτωμα (*paraptōma*) πίπτω (*piptō*, "ಬೀಳು") ಮತ್ತು παρά (*para*, "ಪಕ್ಕದಲ್ಲಿ"). This word refers to "a false step," "a blunder," or "a falling away." [42]For instance, J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati: Standard Publishing, n.d.), 330. [43]Charles Hodge, *Romans*, The Crossway Classic Commentaries (Wheaton, Ill.: Crossway Books, 1993), 125. [44]R. C. Bell, *Studies in Romans* (Austin, Tex.: Firm Foundation Publishing House, 1957), 41. [45]"ವಿದ್ಯಾಹೀನರೂ ಚಪಲಚಿತ್ತರೂ" ಪೌಲನ ಉಪದೇಶಗಳಿಗೆ ತಪ್ಪಾದ ಅರ್ಥವನ್ನು ಕಲ್ಪಿಸುವದಕ್ಕೆ ಎಷ್ಟು ದೂರ ಸಾಗುತ್ತಾರೆಂಬುದು ನಿಜಕ್ಕೂ ಆಶ್ಚರ್ಯವುಂಟುಮಾಡುತ್ತದೆ (2 ಪೇತ್ರ 3:15, 16). [46]Moo, 165. [47]Ibid., 167. [48]Warren W. Wiersbe, *The Bible Exposition Commentary*, vol. 1 (Wheaton, Ill.: Victor Books, 1989), 526. [49]Bell, 36–37. [50]Adapted from Harold T. Bryson, "Faith," *Illustrating Paul's Letters to the Romans*, comp. James F. Hightower (Nashville: Broadman Press, 1984), 31–32.

[51]ಈ ಪ್ರಸಿದ್ಧ ಹೇಳಿಕೆಯು ಮಾರ್ಟಿನ್ ಲೂಥರನ ಜರ್ಮನ್ ಹೊಸ ಒಡಂಬಡಿಕೆಯ ಮುನ್ನುಡಿಯಲ್ಲಿ ಸಿಕ್ಕುತ್ತದೆ (1522). See E. Theodore Bachmann and Helmut T. Lehmann, eds., *Luther's Works*, vol. 35, *Word and Sacrament I* (Philadelphia: Fortress Press, 1960), 362, 395–97. [52]William Barclay, *The Letter to the Romans*, rev. ed., The Daily Study Bible (Philadelphia: Westminster Press, 1975), 64. [53]Moo, 150. [54]See the discussion in Robertson L. Whiteside, *A New Commentary on Paul's Letter to the Saints at Rome* (Fort Worth, Tex.: Manney Co., 1945), 89–90. [55]Charles Hodge, *Romans*, The Crossway Classic Commentaries (Wheaton, Ill.: Crossway Books, 1993), 105. [56]David Lipscomb, *A Commentary on the New Testament Epistles*, vol. 1, *Romans*, 2d ed. (Nashville: Gospel Advocate Co., 1943), 82. [57]Quoted in Leslie C. Allen, "Romans," in *New International Bible Commentary*, ed. F. F. Bruce (Grand Rapids, Mich.: Zondervan Publishing House, 1979), 1324. [58]ರಲ್ಲಿ ಈ ದೃಷ್ಟಾಂತಗಳು ಕೊಡಲ್ಪಟ್ಟಿವೆ David Roper, *Jesus Christ and Him Crucified* (Arvada, Colo.: Christian Communications, 1976), 106–8. [59]Thomas, 33. [60]Adapted from David F. Burgess, comp., *Encyclopedia of Sermon Illustrations* (St. Louis: Concordia Publishing House, 1988), 125.

[61]ಈ ಮಾತುಗಳು ವಿಶೇಷವಾಗಿ ಯೆಹೂದ್ಯರನ್ನುದ್ದೇಶಿಸಿ ಹೇಳಿದವುಗಳಾಗಿದ್ದರೂ ಸಾಮಾನ್ಯ ಅನ್ವಯಿಸುವಿಕೆಯನ್ನು ಮಾಡಬಹುದಾಗಿದೆ. [62]ಈ ಹೇಳಿಕೆಯು ಇಬ್ರಿಯ ಪತ್ರಿಕೆಯನ್ನು ಪೌಲನು ಬರೆಯಲಿಲ್ಲವೆಂಬ ಊಹೆಯನ್ನು ನೀಡುವ ಸಂಭವವಿರುತ್ತದೆ, ಅದು ಪ್ರಸಿದ್ಧ "ನಂಬಿಕೆ ಅಂದರೆ" ವಾಕ್ಯಭಾಗವನ್ನೊಳಗೊಂಡಿರುತ್ತದೆ (ಇಬ್ರಿಯ 11:1). [63]Richard A. Batey, *The Letter of Paul to the Romans*, The Living Word

Commentary (Austin, Tex.: R. B. Sweet Co., 1969), 61. [64]ನಂಬಿಕೆಯು "ಚಿಕ್ಕ" ದಾಗಿರಬಲ್ಲದು (ಮತ್ತಾಯ 14:31; 16:8) ಅಥವಾ "ದೊಡ್ಡದು" (ಮತ್ತಾಯ 8:10, 26), "ಸತ್ತದ್ದು" (ಯಾಕೋಬ 2:17, 26) ಅಥವಾ ಸಜೀವ ಆಗಿರಬಲ್ಲದಾಗಿದೆ.